ಪುಸ್ತಕ ಪ್ರಪಂಚ

ಅಕ್ಟೋಬರ್ ೧೯೯೪



ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೫ ಸಂಚಿಕೆ ೨

—೨೦.೧೦.೮೪

ಪರಿವಿಡಿ

PUSTAKA PRAPANCHA : Monthly

Published and printed by Karnataka State Adult Eductaion Council, Mysore-6. Price : Rupees Six

ಬಿಡಿಪ್ರತಿ : ರೂ. 6

ವಾರ್ಷಿಕ ಚಂದಾ : ರೂ. 60

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 400

ಸಂಸ್ಥೆಗೆ : ರೂ. 600

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು–570 006

ನಾದೋಪಾಸಕರೊಂದಿಗೆ ಭಾವೋಪಾಸಕ

ಕೃ. ನಾಗರಾಜರಾಯ

ಮೂಲ ಮಹಾಭಾರತದ ಕರ್ತೃ ವೇದವ್ಯಾಸನ ಲಿಪಿಕಾರ ಸಾಕ್ಷಾತ್ ಗಣಪತಿ ಎಂಬುದೊಂದು ಜನಜನಿತ ನಂಬಿಕೆ. ಆದರೆ ವೀರನಾರಾಯಣ ಕವಿಯ ಲಿಪಿಕಾರ ಕುಮಾರವ್ಯಾಸನ ಮುಖವಾಣಿ ಕೃಷ್ಣಗಿರಿ ಕೃಷ್ಣರಾಯರೆಂಬುದು ವಾಸ್ತವ ಸತ್ಯ—ಕವಿ ಉತ್ಪ್ರೇಕ್ಷೆಯಲ್ಲ. ಈ ಮಹಾಗಮಕಿಯ ರಸಜೀವನದ ಕೆಲವು ಹೊಳಹುಗಳನ್ನು ಅವರ ಚಿರಂಜೀವಿ ಇಲ್ಲಿ ಕಾಣಿಸಿದ್ದಾರೆ.

"ಮೊಳಗಿ ಬರೆ ಕವಿ ಕುಮಾರವ್ಯಾಸನಾವೇಶ ವಾಣಿ
ರೋಮಾಂಚನದಿ ವಿಕಂಪಿಸಿತು ಸಹ್ಯಾದ್ರಿ ಶ್ರೇಣಿ!"

ಎಂಬ ಕವಿ ಕುವೆಂಪು ವಾಣಿಯನ್ನು ಅನ್ವರ್ಥಗೊಳಿಸಿ, ಸಮರ್ಥ ಗಮಕಿ ಕಾವ್ಯ ವಾಚನ ಮಾಡಿದರೆ, ಇವನ ವಾಣಿಯ ಮೂಲಕ ಕವಿ ವಾಣಿಯನ್ನು ಪ್ರತಿಧ್ವನಿಸ ಬಲ್ಲ ಎಂಬ ತತ್ವವನ್ನು ಪ್ರತಿಪಾದಿಸಿದ ಗಮಕ ವಿದ್ವಾಂಸರಲ್ಲಿ ಅಗ್ರಗಣ್ಯರು ಕೃಷ್ಣಗಿರಿ ಕೃಷ್ಣರಾಯರು (೧೮೯೦ - ೧೯೬೬). ಅವರ ಜೀವನವನ್ನು ಅವಲೋಕಿಸಿದಾಗ ಹಲವು ಸ್ವಾರಸ್ಯಕರ ಸಂಗತಿಗಳು ಬೆಳಕಿಗೆ ಬರುತ್ತವೆ. ಅದರಲ್ಲೂ, ಅವರಿಗೂ ಮತ್ತು ಅಂದಿನ ತಲೆಮಾರಿನ ಶ್ರೇಷ್ಠ ಸಂಗೀತ ವಿದ್ವಾಂಸರುಗಳಿಗೂ ಇದ್ದ ಸಂಪರ್ಕ, ಆದರಾಭಿಮಾನ, ಪರಸ್ಪರ ಗೌರವ ಮೆಚ್ಚುಗೆ ಮಂತಹದು.

ಇದನ್ನು ತಿಳಿಯುವ ಮೊದಲು ರಾಯರ ಮನಸ್ತತ್ವವನ್ನು ಅರಿಯುವುದು ಬಹು ಮುಖ್ಯ.

ಹುಟ್ಟಿದ ಆರು ತಿಂಗಳಲ್ಲೇ ತಂದೆಯನ್ನು ಕಳೆದುಕೊಂಡು, ಸೋದರ ಮಾವನ ಮನೆಯನ್ನು ಸೇರಿ, ಅಲ್ಲಿ ಸೋದರತ್ತೆಯ ದಿವ್ಯ ಕಂಠದ ದೇವರನಾಮ ಮತ್ತು ಆಕೆಯ ಕವಿತಾರಚನಾ ಸಾಮರ್ಥ್ಯದಿಂದ ಪ್ರಭಾವಿತರಾಗಿ, ಬಾಲ್ಯದಲ್ಲಿ ಅಚ್ಚುಮೆಚ್ಚಿನ ಅಕ್ಕ ಜಾನಕಮ್ಮನ ಭಾವಪೂರಿತ ಮಧುರ ಗಾನಕ್ಕೆ ಕಿವಿಗೊಟ್ಟು, ತಮ್ಮಲ್ಲಿ ಸಂಗೀತ ಪ್ರಜ್ಞೆಯನ್ನು ಬೆಳಸಿಕೊಂಡಿದ್ದರು ಕೃಷ್ಣರಾಯರು. ವಯಸ್ಸಿಗೆ ಬಂದ ಮೇಲೆ ಕೆಲವು ಕಾಲ ಸಂಗೀತ ವಿದ್ವಾನ್ ಕೊಯಮ್ಮತ್ತೂರು ಸುಬ್ಬಣ್ಣನವರಲ್ಲಿ ಶಾಸ್ತ್ರೀಯವಾಗಿ ಸಂಗೀತವನ್ನು ಅಭ್ಯಸಿಸಿ, ಅಂದಿನ ಎಲ್ಲ ಹಿರಿಯ ವಿದ್ವಾಂಸರ ಕಛೇರಿಗಳನ್ನು ಕೇಳಿ ಸಂಸ್ಕಾರ ಪಡೆದು, ಸ್ವಂತ ಶ್ರಮದಿಂದ ಸಾಧನೆ ಮಾಡಿ ಸಂಗೀತವನ್ನು ಮೈಗೂಡಿಸಿಕೊಂಡಿದ್ದರು.

ದ್ವಾರಂ ವೆಂಕಟಸ್ವಾಮಿನಾಯಿಡುರವರ ಪಿಟೀಲು ವಾದನದಿಂದ ಆಕರ್ಷಿತರಾಗಿ, ತಮ್ಮ ನೆರೆಯಲ್ಲಿದ್ದ ಶೇಷಗಿರಿರಾಯರೆಂಬ ವಿದ್ವಾಂಸರು ವಿದ್ಯಾರ್ಥಿಗಳಿಗೆ ಪಿಟೀಲು ವಾದನದ ಪಾಠ ಹೇಳುವುದನ್ನು ಗಮನಿಸಿ,

ಮಹಾಭಾರತದ ಏಕಲವ್ಯನಂತೆ ಪಿಟೀಲು ವಾದನದಲ್ಲಿ ಪರಿಶ್ರಮ ಪಡೆದರು.

ರಾಯರಿಗೆ ಸಂಗೀತದಲ್ಲಿದ್ದಂತೆ, ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಕೂಡ ಅಪಾರ ಒಲವಿತ್ತು. ಅದನ್ನು ಅವರ ವಿದ್ಯಾರ್ಥಿ ಜೀವನದಲ್ಲಿ ಪೋಷಿಸಿ ಬೆಳಸಿದವರು ಶ್ರೀಯುತರುಗಳಾದ ಕಾನಕಾನ ಹಳ್ಳಿ ವರದಾಚಾರ್ಯರು, ಪಿ. ಆರ್. ಕರಿಬಸಪ್ಪ ಶಾಸ್ತ್ರಿಗಳು ಮತ್ತು ಆಚಾರ್ಯ ಬಿ.ಎಂ.ಶ್ರೀ. ರಾಯರ ಭಾರತ ವಾಚನವೆಂದರೆ ಗುರುಗಳಾದ ಬಿ. ಎಂ. ಶ್ರೀ ಅವರಿಗೆ ಅಚ್ಚು ಮೆಚ್ಚು. ನಾಟಕದ ವರದಾಚಾರ್ಯರ ರಂಗಸಂಗೀತವೂ ಕೃಷ್ಣರಾಯರ ವಾಚನದ ವೈಖರಿಗೆ ಅಪಾರ ಪರಿಣಾಮ ಬೀರಿತ್ತು.

ಕಡು ಬಡತನ, ಹೃದಯಕ್ಕೆ ಹತ್ತಿರವಾದವರ ಸಾವು ನೋವು, ತಮ್ಮ ಪಿಟೀಲು ವಾದನದ ಸಾಧನೆಗೆ ಅಡ್ಡಿ ಬಂದ ಜೀವನದ ದುರ್ಘಟನೆಗಳು, ರಾಯರ ಮನಸ್ಸನ್ನು ಕಾಡುತ್ತಿದ್ದು, ಶಾಂತಿಯನ್ನು ಅರಸುತ್ತಿದ್ದಾಗ, ಎಂ. ಆರ್. ಶ್ರೀಯವರ ನೆರವಿನಿಂದ ಭಾರತದ ಬಿಂದೂರಾಯರ ಪರಿಚಯವಾಗಿ ಅವರ ಕಾವ್ಯವಾಚನ ಕೇಳುವ ಸುಯೋಗ ಲಭಿಸಿತು. ಅಂದಿನಿಂದ ರಾಯರ ಹಾದಿ ಬದಲಿಸಿ, ಸಂಗೀತ ಸಾಹಿತ್ಯ ಸಮನ್ವಯದ ಗಮಕಕಲೆಯಲ್ಲಿ ಸಾಧನೆಯ ಸಿದ್ಧಿಯನ್ನು ಕಂಡರು. ಈ ಹಿನ್ನೆಲೆಯಲ್ಲಿ, ಸಂಗೀತಕ್ಕೋ ಸಾಹಿತ್ಯಕ್ಕೋ ದಕ್ಕಬೇಕಾಗಿದ್ದ ರಾಯರ ಪ್ರತಿಭೆ, ಗಮಕಕಲೆಯಲ್ಲಿ ಮಿಂಚಿತು.

ಹೀಗೆ ಪರಿಸ್ಥಿತಿಯ ಪ್ರಭಾವದಿಂದ ಗಮಕಕ್ಕಿಳಿದ ರಾಯರು ಅಂದಿನಿಂದ ಎಂದೂ ಹಿಂದೆ ನೋಡದೆ, ತಮ್ಮ ಕಂಚಿನ ಕಂಠದಲ್ಲಿ ಕನ್ನಡ ಕಾವ್ಯಶ್ರೀಯನ್ನು ಪಳಗಿಸಿಕೊಂಡು, ಕರ್ನಾಟಕಾದ್ಯಂತ ಕುಮಾರವ್ಯಾಸ ಭಾರತದ ರಸದೌತಣವನ್ನು ಉಣಬಡಿಸಿದರು.

ಅವರ ಅಂತರಂಗದ ಪ್ರಮುಖ ಶಿಷ್ಯರಲ್ಲೊಬ್ಬರಾದ, ಸ್ವತಃ ಗಮಕಿಗಳೂ ಕವಿಗಳೂ ಆದ, ದಿ|| ವೈ.ಶೀ. ಅನಂತಪದ್ಮನಾಭರಾಯರು, ಮಡಕೇರಿಯ ವೇದಾಂತ ಸಂಘದಲ್ಲಿ ನಡೆದ ರಾಯರ ಭಾರತ ವಾಚನದ ಕರ್ಣಪರ್ವದ "ಕರ್ಣನಾರೆಂದ" ಎಂಬ ಅರ್ಜುನ ವಿಷಾದ ಭಾಗದ ಕಾರ್ಯಕ್ರಮವನ್ನು ಕೇಳಿ ಪ್ರಭಾವಿತರಾಗಿ ಉದ್ಗರಿಸುತ್ತಾರೆ—"ಅದೇನು! ಕಾವ್ಯಗಾಯನವೋ? ಸಂಗೀತ ಕಛೇರಿಯೋ? ಉತ್ಕೃಷ್ಟ ಕೀರ್ತನೆಯೋ! ಎಂಬಂತೆ ಅಮೋಘವಾಚನ ಮಾಡಿ ಸಭಿಕರ ತಲೆದೂಗಿಸಿಬಿಟ್ಟರು" ಎಂದು ಹಿಂದಿನ ದಿನಗಳನ್ನು ನೆನಸಿಕೊಳ್ಳುತ್ತಾರೆ ತಮ್ಮ "ಗಮಕ ಕಲೆಯ ಜೀವನ ಸಂಗಾತಿ" ಎಂಬ ಲೇಖನದಲ್ಲಿ.

ರಾಯರ ಸಜ್ಜನಿಕೆ, ವಿನಯಶೀಲತೆ ಮತ್ತು ಗುರುಹಿರಿಯರಲ್ಲಿಯ ಭಯಭಕ್ತಿ ಯಾರನ್ನಾದರೂ ಆಕರ್ಷಿಸುತ್ತಿತ್ತು. ವೈಣಿಕ ಶಿಖಾಮಣಿ ವೀಣೆಶೇಷಣ್ಣನವರ ಅಕ್ಕ ಭಾರತವಾಚನ ಕೇಳಬೇಕೆಂದು ಆಶಿಸಿದರಂತೆ. ಕೃಷ್ಣರಾಯರಿಗೆ ಅವರ ಮನೆಯಲ್ಲಿ ಭಾರತ ವಾಚನ ಮಾಡಲು ಆಹ್ವಾನ ಬಂದಿತು. ಇದರಿಂದ ರಾಯರಿಗೆ ಒಂದು ಕಡೆ ಸಂತೋಷ. ಒಬ್ಬ ಶ್ರೇಷ್ಠ ಹಿರಿಯ ಸಂಗೀತಗಾರ, ನಾದೋಪಾಸಕ, ಕಲಾರಸಿಕ ತನ್ನಂತಹ ಒಬ್ಬ ಗಮಕಿಯನ್ನು ಗುರುತಿಸಿ ತನ್ನ ಮನೆಗೆ ಆಹ್ವಾನಿಸುತ್ತಿರುವುದು ಮತ್ತೊಂದು ಕಡೆ ಬಹಳ ಶಂಕೆ ಮತ್ತು ಅಳುಕು. ತನ್ನಂತಹ ಸಾಮಾನ್ಯಕಲಾವಿದ

ಅಂತಹ ಹಿರಿಯ ಸುಪ್ರಸಿದ್ಧ ಕಲಾವಿದರ ಮುಂದೆ ಯಶಸ್ವೀ ಕಾವ್ಯವಾಚನ ಮಾಡಿ ಸೈ ಎನಿಸಿಕೊಳ್ಳುವುದು ಹೇಗೆ? ಎಂದು. ಒಟ್ಟಿನಲ್ಲಿ ಒಂದು ಗೊತ್ತಾದ ದಿನ, ಕೃಷ್ಣರಾಯರು ವೀಣೆಶೇಷಣ್ಣನವರ ಮನೆಗೆ ಕಾವ್ಯವಾಚನ ಮಾಡಲು ಹೋದರು. ಎಲ್ಲ ಏರ್ಪಾಡೂ ಸಾಂಗವಾಗಿ ನಡೆದಿತ್ತು. ಕೆಲವು ಆಪ್ತರೊಡನೆ ಮತ್ತು ತಮ್ಮ ಅಕ್ಕನ ಸಮ್ಮುಖದಲ್ಲಿ ವೀಣೆಶೇಷಣ್ಣನವರು ಶ್ರೋತೃಗಳಾಗಿದ್ದರು. ರಾಯರು ಬಹಳ ವಿನಯದಿಂದ ಸಭೆಗೆ ನಮಸ್ಕರಿಸಿ, ತಾವು ಹೆಚ್ಚು ತಿಳಿದವರಲ್ಲವೆಂದು ಹಿರಿಯರ ಅಪ್ಪಣೆ ಪಡೆದು ಅವರ ಆಶೀರ್ವಾದವನ್ನು ಬಯಸಿ, ಯಥಾಮತಿ ಕಾವ್ಯವಾಚನ ಮಾಡುತ್ತಿರುವುದಾಗಿ ತಿಳಿಸಿ, ವಾಚನವನ್ನು ಆರಂಭಿಸಿದರು.

ಜೋಡಿ ತಂಬೂರಿಯ ಶ್ರುತಿಗೆ, ರಾಯರ ಕಂಚಿನ ಕಂಠದ ಸುನಾದವನ್ನು ಸೇರಿಸಿ, ಸಮ್ಮಿಲಿತವಾಗಿ, ಅಲೆಅಲೆಯಾಗಿ, ಭಾವಮಯವಾಗಿ ರಾಗದ ಹರವಿನಲ್ಲಿ ಸಾಹಿತ್ಯದ ಭಾವ ಮೂಡಿಸುತ್ತಿದ್ದರೆ, ಕೇಳುವವರು ತನ್ಮಯರಾಗಿ ಅದರಲ್ಲೇ ತಲ್ಲೀನರಾಗಿದ್ದರು. ಶೇಷಣ್ಣನವರಂತೂ ಮುಚ್ಚಿದ ಕಣ್ಣನ್ನು ತೆರೆಯದೆ ಸಮಾಧಿಸ್ಥಿತಿಯಲ್ಲಿದ್ದರಂತೆ. ಯಾವುದೋ ಗಂಧರ್ವಲೋಕದಲ್ಲಿ ವಿಹರಿಸುತ್ತಿದ್ದರು.

ಕೃಷ್ಣರಾಯರ ಕಾವ್ಯವಾಚನದಲ್ಲಿ ಸಾಹಿತ್ಯದ ಭಾವಗಳು ಸಂಗೀತದ ಯುಕ್ತ ರಾಗಗಳಲ್ಲಿ ಮಿಂಚಿ, ವಿವಿಧ ಸನ್ನಿವೇಶಗಳು ರಾಗ ಸಂಚಾರದ ಕಲಾಭಿಜ್ಞತೆಯಿಂದ ರಸಿಕರ ಮನೋಮಂದಿರದ ರಸಪುತ್ತಳಿಯಾಗಿ ರಂಜಿಸಿತು. ಬೇಲೂರಿನ ಶಿಲಾಬಾಲಿಕೆಯರಂತೆ ಭಾರತದ ಒಂದೊಂದು ಸಮಯ ಸನ್ನಿವೇಶಗಳೂ ವಿವಿಧಭಂಗಿ ವಿನ್ಯಾಸಗಳಲ್ಲಿ ತೋರುವಂತೆ ರಾಯರ ಮಾತಿನ ಪರುಟವಣಿ, ಪದಗಳ ಅಂದಾಣಿಕೆಯಲ್ಲಿಯ ಲಾಲಿತ್ಯ, ಸಾಹಿತ್ಯದ ಸೊಬಗನ್ನು ಎತ್ತಿಹಿಡಿಯುವ ಶೈಲಿ, ಸಹೃದಯ ರಸಿಕರ ಮನದಲ್ಲಿ ಮರೆಯಲಾರದ ಸೌಂದರ್ಯ ಪ್ರತೀಕಗಳಾಗಿ ಸೆರೆನಿಂತವು.

ಮಂಗಳದೊಡನೆ ಕಾರ್ಯಕ್ರಮ ಮುಗಿದುಗಕ್ಕನೆ ಈ ಲೋಕಕ್ಕೆ ಬಂದ ಶೇಷಣ್ಣನವರು ಆನಂದಬಾಷ್ಪಗಳಿಂದ ರಾಯರನ್ನು ಬಾಯ್ತುಂಬ ಹರಸಿ ಪ್ರಶಂಸಿಸಿದರು.

"ರಾಯರೇ, ಯಾರು ಹೇಳಿದರು ನೀವು ತಿಳಿದವರಲ್ಲವೆಂದು. ಇಂದೇ ಮೊದಲು ನಾನು ಕಾವ್ಯವಾಚನದ ಸೊಗಸನ್ನು ಕಂಡದ್ದು" ಎಂದರಂತೆ. ಅದಕ್ಕೆ, ರಾಯರು, "ತಾವು ದೊಡ್ಡ ವಿದ್ವಾಂಸರು, ಇದು ತಮ್ಮ ಹಿರಿತನ, ತಮ್ಮ ಸಂಗೀತದ ಮುಂದೆ ನಮ್ಮದೇ?" ಎಂದರಂತೆ ವಿನಮ್ರರಾಗಿ. ಅದಕ್ಕೆ ಶೇಷಣ್ಣನವರು "ಇಲ್ಲೇ, ನೀವು ತಪ್ಪು ಮಾಡುವುದು. ನನ್ನ ಸಂಗೀತದ ಸೊಗಸು ನನಗಿಲ್ಲ. ನಿಮ್ಮ ಕಾವ್ಯವಾಚನದ ಪೂರ್ಣ ಸೊಗಸನ್ನು ಆಸ್ವಾದಿಸಿ ನಾನು ಆನಂದಿಸಿದೆ. ನೋಡಿ, ರಾಯರೇ ಸಂಗೀತಗಾರನಿಗೆ ತನ್ನ ಸಂಗೀತದ ಪೂರ್ಣ ಸೊಗಸನ್ನು ಆಸ್ವಾದಿಸುವ ಭಾಗ್ಯವಿಲ್ಲ. ವೈದ್ಯನಿಗೆ ತನ್ನ ಊಟದ ರುಚಿಯ ಆನಂದವಿಲ್ಲ. ಕಾರಣ, ನಾನು ಹಾಡುವಾಗ ಶ್ರುತಿ, ತಾಳ, ರಾಗಸಂಚಾರ, ಭಾವ, ಸಾಹಿತ್ಯ ಏನು ಎಲ್ಲಿ ತಪ್ಪುತ್ತದೋ ಎಂದು ತಂತಿಯ ಮೇಲೆ ನಡೆದ ಹಾಗೆ, ಮೈಯೆಲ್ಲ ಕಣ್ಣಾಗಿ ಮನಸ್ಸಿನ ಮೇಲಿನ ಎಚ್ಚರ ಕಳೆದುಕೊಳ್ಳದೆ ಕಸರತ್ತು ಮಾಡಬೇಕಾಗು

ತ್ತದೆ. ಆದರೆ ಮತ್ತೊಬ್ಬರ ಸಂಗೀತ ಕೇಳು ವಾಗ ನನಗೆ ಪೂರ್ಣ ಸ್ವಾತಂತ್ರ್ಯ. ಹಾಗೆಯೇ ವೈದ್ಯ ಇದು ವಾತ, ಇದು ಪಿತ್ತ, ಇದು ಶೀತ ಮತ್ತು ಇದು ಉಷ್ಣ ಎಂದು ಪ್ರತಿ ಯೊಂದು ಪದಾರ್ಥದ ಪಥ್ಯದ ಬಗ್ಗೆ ಚಿಂತಿಸು ವಲ್ಲಿ ಊಟದ ರುಚಿಯನ್ನು ಸವಿಯುವ ಸೌಭಾಗ್ಯದಿಂದ ವಂಚಿತನಾಗುತ್ತಾನೆ.

"ರಾಯರೇ, ನಿಮ್ಮ ಕಾವ್ಯವಾಚನ ನಮ್ಮ ಸಂಗೀತದ ಕಛೇರಿಗೆ ಯಾವುದರಲ್ಲೂ ಕಡಿಮೆ ಇಲ್ಲ. ನಿಮ್ಮ ಕಲೆ ದೈವವನ್ನು ಸಾಕ್ಷಾತ್ಕರಿಸಿ ದರ್ಶನ ಮಾಡಿಸುವ ಶಕ್ತಿ ಯನ್ನು ಪಡೆದಿದೆ. ನಮ್ಮ ಸಂಗೀತ ವಾದರೋ ಗಂಧರ್ವವಿದ್ಯೆ, ಎಷ್ಟೆಂದರೂ ಅದು ಬೆಡಗಿನ ಕಲೆ" ಎಂದು ಹೃದಯ ಬಿಚ್ಚಿ ಮಾತನಾಡಿ ಆಶೀರ್ವದಿಸಿ ಯುಕ್ತ ಗೌರವ ಸತ್ಕಾರವನ್ನು ಮಾಡಿ ಬೀಳ್ಕೊಟ್ಟ ರಂತೆ.

ಆ ಕಾಲದಲ್ಲಿ ಮೈಸೂರಿಗೆ ಬರುತ್ತಿದ್ದ ಹೊರಗಿನ ಸಂಗೀತ ವಿದ್ವಾಂಸರುಗಳಿಗೆ ಮಹಾರಾಜರು ಅರಮನೆಯಲ್ಲಿ ಗೌರವ ಸನ್ಮಾನಗಳನ್ನು ಮಾಡಿದರೂ, ವೈಣಿಕ ಶಿಖಾಮಣಿ ವೀಣೆ ಶೇಷಣ್ಣನವರ ಸ್ವಗೃಹ ದಲ್ಲಿ ಸತ್ಕಾರ ಸನ್ಮಾನಗಳಾದರೆ ಅವರ ಪ್ರತಿಭೆಗೆ ಸಂದ ಪೂರ್ಣಫಲವೆಂದು ಭಾವಿಸು ತ್ತಿದ್ದ ಕಾಲ. ಅಂತಹದರಲ್ಲಿ ರಾಯರಿಗೆ ಶೇಷಣ್ಣನವರ ಹೃದಯ ತುಂಬಿ ಬಂದ ಹರಕೆಗಿಂತ ಹೆಚ್ಚಿನ ಭಾಗ್ಯವುಂಟೇ?

ಹೀಗೆ ಸಂಭ್ರಮದಿಂದ ನಡೆಯಿತು ನಾದೋಪಾಸಕರೊಂದಿಗಿನ ಭಾವೋಪಾಸ ಕನ ಮೊದಲ ಸಮಾಗಮ! ಶೇಷಣ್ಣನವರು ತಿಳಿಸಿದ ಕಲಾವಿದನಿಗಿರಬೇಕಾದ ಎಚ್ಚರಿ ಕೆಯ ಮಾತುಗಳನ್ನು ರಾಯರು ತಮ್ಮ ಶಿಷ್ಯರಿಗೆ ಪಾಠ ಹೇಳುವಾಗ ಆಗಾಗ್ಗೆ ಸ್ಮರಿಸುತ್ತಿದ್ದರು.

ಕೃಷ್ಣರಾಯರಿಗೆ ತಮ್ಮ ಜೀವನದಲ್ಲಿ ನ್ಯಾಯವಾದಿಗಳಾಗಬೇಕೆಂಬ ಹಂಬಲ. ಆದರೆ ಆ ಕನಸು ನನಸಾಗಲೇ ಇಲ್ಲ. ಬಡ ತನದ ಬವಣೆಯಲ್ಲಿ ಆಶೆ ಫಲಿಸದಿದ್ದರೂ, ಸುಪ್ತ ಪ್ರಜ್ಞೆಯಲ್ಲಿ ಅವರಲ್ಲಡಗಿದ್ದ ನ್ಯಾಯ ವಾದಿತ್ವ, ಅವರು ತಮ್ಮ ಶಿಷ್ಯರ ಮತ್ತು ಮಿತ್ರರ ಜಟಿಲ ಸಮಸ್ಯೆಗಳನ್ನು ಬಿಡಿಸು ವಾಗಲೂ ತಾವು ಬಿಕ್ಕಟ್ಟಿನ ಪರಿಸ್ಥಿತಿ ಯನ್ನು ಎದುರಿಸುವಾಗಲೂ ಮಾಡುತ್ತಿದ್ದ ವಾದ ಸರಣಿಯಲ್ಲಿ ಎದ್ದು ಕಾಣುತ್ತಿತ್ತು.

ಒಮ್ಮೆ ಬಿಡಾರಂ ಕೃಷ್ಣಪ್ಪನವರು, ತಾವು ಕಟ್ಟಿಸಲಿದ್ದ ರಾಮಮಂದಿರದ ಕಟ್ಟಡದ ನಿರ್ಮಾಣದ ಸಲುವಾಗಿ ಸಾಲ ಪಡೆಯಲು, ಸಿಟಿ ಕೋ-ಆಪರೇಟೀವ್ ಬ್ಯಾಂಕಿನಲ್ಲಿ ಅರ್ಜಿಯನ್ನು ಸಲ್ಲಿಸಿದ್ದರು. ಅಂದು ಸಾಲದ ಮಂಜೂರಾತಿಗಾಗಿ ನಡೆದ ನಿರ್ದೇಶಕರ ಸಭೆಯಲ್ಲಿ ಒಮ್ಮತವಿರಲಿಲ್ಲ. ನಿರ್ದೇಶಕರಲ್ಲಿ ಒಬ್ಬರಾದ ಕೃಷ್ಣರಾಯರು ತಮ್ಮ ವಾದ ಸರಣಿಯನ್ನು ಮಂಡಿಸುತ್ತ "ಸಮಾಜದ ಒಬ್ಬ ಪ್ರತಿಷ್ಠಿತ ವ್ಯಕ್ತಿ ತಮ್ಮ ವೈಯಕ್ತಿಕ ಲಾಭದ ದೃಷ್ಟಿಯಿಲ್ಲದೇ, ಜನತೆಯ ಕಲ್ಯಾಣವನ್ನೇ ತನ್ನ ಜೀವನದ ಗುರಿಯಾಗಿಟ್ಟುಕೊಂಡು, ರಾಮಮಂದಿರ ವನ್ನು ಕಟ್ಟುವ ಸಲುವಾಗಿ ಸಾಲಪಡೆ ಯಲು, ತನ್ನ ಪೂರ್ಣ ಹೊಣೆಗಾರಿಕೆಯನ್ನು ಹೊತ್ತು, ತನ್ನೆಲ್ಲ ಗೌರವ, ಪ್ರತಿಷ್ಠೆ ಒತ್ತೆಯಿಟ್ಟು ಸಾಲತೀರಿಸಲು ಸಿದ್ಧರಿರು ವಾಗ ಮಂಜೂರಾತಿಗೆ ತಡೆ ಏಕೆ? ಇಂತಹ ಒಂದು ಮಹತ್ಕಾರ್ಯಕ್ಕೆ ನಮ್ಮ ಸಂಸ್ಥೆಗೆ ಯಾವ ಕಷ್ಟನಷ್ಟವಿಲ್ಲದೆ ಸಹಾಯ ಸಹಕಾರ

ನೀಡುವ ಸುವರ್ಣಾವಕಾಶವನ್ನು ತಪ್ಪಿಸುವುದೇಕೆ?" ಎನ್ನುವ ರೀತಿಯಲ್ಲಿ ಮಾತನಾಡಿ ಸದಸ್ಯರ ಮನವೊಲಿಸಿ ಸರ್ವಾನುಮತದಿಂದ ಸಾಲ ಮಂಜೂರಾತಿಯಾಗುವಂತೆ ಮಾಡಿದರಂತೆ. ಇದನ್ನು ಕೇಳಿ ತಿಳಿದ ಬಿಡಾರಂ ಕೃಷ್ಣಪ್ಪನವರು ಸಭೆಯಿಂದ ಹೊರಗೆ ಬರುತ್ತಿದ್ದ ರಾಯರನ್ನು ಆದರದಿಂದ ಬರಮಾಡಿಕೊಂಡು ಆನಂದಾಶ್ರುಗಳಿಂದ ಆಲಿಂಗನ ಮಾಡಿಕೊಂಡರಂತೆ. ತಮ್ಮ ಜೀವನದಲ್ಲಿ ಎಂದೂ ಮರೆಯಲಾರದ ಚಿರಸ್ಮರಣೀಯ ದಿನವೆಂದು ರಾಯರ ನೆರವನ್ನು ಸ್ಮರಿಸಿಕೊಂಡಾಡಿದರಂತೆ.

ಇದಕ್ಕೆ ಪ್ರತಿಯಾಗಿ ತಮ್ಮ ಪ್ರೀತಿ ವಿಶ್ವಾಸಗಳನ್ನು ವ್ಯಕ್ತಪಡಿಸಲು, ನೂತನ ರಾಮಮಂದಿರದ ಪ್ರಾರಂಭೋತ್ಸವ ಸಮಯದಲ್ಲಿ, ದಿವಾನರ ಸಮ್ಮುಖದಲ್ಲಿ ಕಾಂತರಾಜೇಅರಸರ ರಾಮಾಯಣದಿಂದ ಆಯ್ದ ಭಾಗಗಳ ಕಾವ್ಯವಾಚನವನ್ನು ರಾಯರಿಂದ ಏರ್ಪಡಿಸಿ, ಅದಕ್ಕೆ ತಮ್ಮ ಪ್ರೀತಿಯ ಶಿಷ್ಯರಾದ ಚೌಡಯ್ಯನವರಿಂದ ಪಿಟೀಲು ನೆರವು ನೀಡಲು ಏರ್ಪಾಡು ಮಾಡಿದ್ದರು. ಅಂದಿನ ಸಭೆ ಬಹು ಸಂಭ್ರಮದಿಂದ ವಿಜೃಂಭಣೆಯಾಗಿ ನಡೆಯಿತು. ಗಾನವಿಶಾರದ ಬಿಡಾರಂ ಕೃಷ್ಣಪ್ಪನವರು ಬಹು ಹರ್ಷಿತರಾದರು. ರಾಯರು ಸ್ವತಃ ರಸಿಕರು, ಭಾವುಕರು, ಸೌಂದರ್ಯಾರಾಧಕರು. ಶ್ರೋತೃವಿನ ಮನದ ಹದವನ್ನರಿತು, ಸಂಗೀತದ ನಾದದಲ್ಲಿ ಸಾಹಿತ್ಯದ ಭಾವವನ್ನು ಎರಕಹೊಯ್ದು, ಕೇಳುವ ಕಿವಿಗಳಿಗೆ ಇಂಪಾಗಿ, ಮನಕ್ಕೆ ತಂಪಾಗಿ, ಹೃದಯವನ್ನು ಮುಟ್ಟಿ ಬುದ್ಧಿಯನ್ನು ತಟ್ಟಿ ಎಚ್ಚರಿಸುವಂತೆ ಬಹು ಸೊಗಸಾಗಿ ಕಾವ್ಯವಾಚನ ಮಾಡಿದರು. ಅಂದಿನ ಸಭೆಯನ್ನು ಕಲ್ಯಾಣಿ ರಾಗದಲ್ಲಿ ಆರಂಭಿಸಿ ರಾಯರು ಕಾರ್ಯಕ್ರಮಕ್ಕೆ ಕಳೆಕಟ್ಟಿಸಿದರಂತೆ. ತುಂಬಿದ ಸಭೆಯಲ್ಲಿ ರಾಯರನ್ನು ಗಾನವಿಶಾರದರು ಕೊಂಡಾಡುತ್ತ ತಮ್ಮ ಶಿಷ್ಯರನ್ನು ಕುರಿತು, "ನೋಡಿದಿರೇನ್ರೋ ಕೃಷ್ಣರಾಯರ ಕಲ್ಯಾಣಿರಾಗದ ಸಂಚಾರ, ಕಲಿಯಿರೋ ಅವರಿಂದ. ಯಾವ ಸಂಗೀತಗಾರನಿಗೆ ಕಡಿಮೆಯೋ ಅವರು. ಹೇಗೆ ಕಳೆಕಟ್ಟಿಸಿದರೋ ಅವರು ಇಂದಿನ ಸಭೆಯನ್ನು" ಎಂದು ಉದ್ಗರಿಸಿದರಂತೆ.

ಹೀಗೆ ಗಾನವಿಶಾರದ ಬಿಡಾರಂ ಕೃಷ್ಣಪ್ಪನವರಿಗೂ ಭಾರತದ ಕೃಷ್ಣರಾಯರಿಗೂ ಜೀವನದುದ್ದಕ್ಕೂ ಅನ್ಯೋನ್ಯ ಪ್ರೀತಿ, ವಿಶ್ವಾಸ, ಗೌರವ ನಡೆದಿತ್ತು.

ಬಿಡಾರಂ ಕೃಷ್ಣಪ್ಪನವರ ಪ್ರಮುಖ ಶಿಷ್ಯರೂ ಸುಪ್ರಸಿದ್ಧ ಪಿಟೀಲು ವಾದಕರೂ ಆದ ಸಂಗೀತ ರತ್ನ ಟಿ. ಚೌಡಯ್ಯನವರೂ ಮತ್ತು ಅಷ್ಟೇ ಪ್ರಖ್ಯಾತರಾಗಿದ್ದ ಶ್ರೀಯುತ ಶಿವರುದ್ರಪ್ಪನವರೂ ರಾಯರ ಅನೇಕ ಕಾವ್ಯವಾಚನ ಕಾರ್ಯಕ್ರಮಗಳಲ್ಲಿ ಪಿಟೀಲಿನ ನೆರವು ನೀಡುವುದರ ಮೂಲಕ ಸಹಕರಿಸಿ, ತಮ್ಮ ಸ್ನೇಹ ಸೌಹಾರ್ದವನ್ನು ತೋರಿಸಿ, ತಮ್ಮ ಗುರುಗಳಂತೆಯೇ ಕೊನೆಯ ದಿನಗಳವರೆಗೆ ಗೌರವವನ್ನು ವ್ಯಕ್ತಪಡಿಸಿ ಉತ್ತಮ ಸಂಪರ್ಕವನ್ನಿಟ್ಟುಕೊಂಡಿದ್ದರು.

ವಿದ್ವಾನ್ ಶಿವರುದ್ರಪ್ಪನವರ ಸೀತಾವಿಲಾಸ ಛತ್ರದ ನಿವಾಸದಲ್ಲಿ ಪ್ರತಿ ತಿಂಗಳೂ ಒಮ್ಮೆ ರಾಯರ ಕಾವ್ಯವಾಚನ, ಅವರ ಪಿಟೀಲು ನೆರವು, ಹಾಗೂ ವಿದ್ವಾಂಸರಾದ ಸಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳ ವ್ಯಾಖ್ಯಾನದೊಂದಿಗೆ ಬಹಳ ವರ್ಷಗಳು ನಡೆಯಿತು. ಅಲ್ಲದೆ, ರಾಯರಿಗೂ ಶಿವರುದ್ರ

ಪ್ಪನವರಿಗೂ ಎಷ್ಟು ನಿಕಟ ಸಂಪರ್ಕ ವಿತ್ತೆಂದರೆ, ಹುಟ್ಟು ಕುರುಡರಾದ ಶಿವ ಶುದ್ರಪ್ಪನವರು ದಾರಿಯಲ್ಲಿ ದೂರದಲ್ಲಿ ರಾಯರು ಮಾತನಾಡುತ್ತಿದ್ದ ಧ್ವನಿ ಯಿಂದಲೇ ಅವರನ್ನು ಗುರುತಿಸಿ ಬಹು ಸಂತೋಷದಿಂದ ಹತ್ತಿರ ಬಂದು ಕುಶಲ ಸಂಭಾಷಣೆ ಮಾಡಿ ರಾಯರನ್ನು ಪ್ರೀತಿ ಯಿಂದ ಬೀಳ್ಕೊಟ್ಟರೇ ಅವರ ಮನಸ್ಸಿಗೆ ಸಮಾಧಾನ.

ಇನ್ನು ಸಂಗೀತ ರತ್ನ ಟಿ. ಚೌಡಯ್ಯ ನವರು ರಾಯರ ನಿವಾಸವಿದ್ದ ಶಿವರಾಂ ಪೇಟೆಯಲ್ಲೇ, ಅವರ ಸಮೀಪದಲ್ಲೇ ಇದ್ದವರು. ತಾರುಣ್ಯದಿಂದ ಅವರನ್ನು ಬಹಳ ಸಮೀಪದಿಂದ ಬಲ್ಲವರು. ಕೃಷ್ಣ ರಾಯರು ಉತ್ತಮ ಪಿಟೀಲುವಾದಕರಾಗಿ, ಸಂಗೀತದಲ್ಲಿ ಸಾಕಷ್ಟು ವಿದ್ವತ್ತನ್ನು ಪಡೆದು, ಕಾವ್ಯವಾಚನದ ಗೀಳನ್ನು ಬೆಳಸಿ ಕೊಂಡು, ಪ್ರಖ್ಯಾತ ಗಮಕ ವಿದ್ವಾಂಸ ರಾಗಿ, ಭಾರತದ ಕೃಷ್ಣರಾಯರಾಗಿದ್ದನ್ನು ತಿಳಿದು ಸಂತೋಷಪಟ್ಟವರು.

ಮನೆಯಲ್ಲೇ ಆಗಲಿ, ಹೊರಗೆ ಎಲ್ಲೇ ಆಗಲಿ, ಪರಸ್ಪರ ಸಂದರ್ಶಿಸಿದಾಗ, ಇಬ್ಬರು ಕಲಾವಿದರೂ ಬಹು ಸಂಭ್ರಮ, ಸಲಿಗೆ, ಸಂತೋಷದಿಂದ ಬಾಯ್ತುಂಬ ಮಾತನಾಡಿ ತಮ್ಮ ತಮ್ಮ ವಿಚಾರ ವಿನಿಮಯ ಮಾಡಿ ದಲ್ಲದೆ ಅವರ ಮನಸ್ಸು ಹಗುರವಾಗುತ್ತಿರ ಲಿಲ್ಲ.

ಕೃಷ್ಣರಾಯರ ಸಂಗೀತದ ಸುಪ್ತ ಪ್ರತಿಭೆ ಯನ್ನು ಅರಿತೋ ಏನೋ ಪಿಟೀಲು ಚೌಡಯ್ಯನವರು "ಪಿಟೀಲು ಬಿಟ್ಟು ಭಾರತದ ಪುಸ್ತಕ ಹಿಡಿದು ನಮ್ಮನ್ನು ಬದುಕಿಸಿದ್ರು ಕೃಷ್ಣರಾಯರು" ಎಂದು ನಗೆಯಾಡುತ್ತಿದ್ದರಂತೆ.

ಅ.ನ.ಕೃ, ಟಿ. ಚೌಡಯ್ಯನವರು ಮತ್ತು ದೇವೇಂದ್ರಪ್ಪನವರು ಮುಂತಾದ ಹಿರಿಯರ ಸತತ ಪ್ರಯತ್ನದ ಫಲವಾಗಿ ಮೊದಲ ಗಮಕ ವಿದ್ವಾಂಸರಾಗಿ ಕೃಷ್ಣಗಿರಿ ಕೃಷ್ಣರಾಯರು ೧೯೬೩ರಲ್ಲಿ ವಿಶಾಲ ಮೈಸೂರಿನ ಸಂಗೀತ–ಸಾಹಿತ್ಯ–ಸಂಸ್ಕೃತಿ ಅಕಾಡೆಮಿಯಿಂದ ಪ್ರಶಸ್ತಿ ರೂಪದಲ್ಲಿ ಗೌರವಿಸಲ್ಪಟ್ಟು, ತದನಂತರ ಕಲಾವಿದರ ಗೌರವ ಮಾಸಾಶನವನ್ನೂ ಸಹ ಸರಕಾರ ದಯಪಾಲಿಸಿತು.

ಇಬ್ಬರು ಸಾಹಿತಿಗಳೂ ಮತ್ತು ಕಲಾ ವಿದರೂ ಪರಸ್ಪರ ಸ್ನೇಹ ಸೌಹಾರ್ದ ದಿಂದ ಸೇರುವುದೂ ಮತ್ತು ಪರಸ್ಪರರನ್ನು ಗೌರವಿಸುವುದೂ ಇಂದಿನ ಸಮಾಜದಲ್ಲಿ ದುರ್ಘಟವಾಗಿರುವಾಗ ಈ ಮಹನೀಯರು ಗಳ ರೀತಿ, ನೀತಿ ಮತ್ತು ನಡೆನುಡಿ ಚಿರ ಸ್ಮರಣೀಯವಾದದ್ದು ಮತ್ತು ಅನುಕರ ಣೀಯವಾದದ್ದೆಂದು ಪ್ರತ್ಯೇಕ ಹೇಳ ಬೇಕಾಗಿಲ್ಲ.

ಈ ವಿದ್ವಾಂಸರುಗಳು ಪ್ರತಿಭೆಯ ಪ್ರಭಾವದೊಂದಿಗೆ, ಹೃದಯದ ಶ್ರೀಮಂತಿಕೆ ಯನ್ನೂ ಮೈಗೂಡಿಸಿಕೊಂಡು, ಎಲ್ಲ ಗುಣ ಗಳಿಗೂ ಬೆಲೆ ತರತಕ್ಕ ಮಹಾಗುಣವಾದ ಸಹೃದಯತೆಯನ್ನು ಬೆಳಸಿಕೊಂಡಿದ್ದರೆನ್ನು ವಾಗ 'ಬೃಹದಾರಣ್ಯಕ'ದ ಈ ಕೆಳಕಂಡ ಮಾತುಗಳು ನೆನಪಿಗೆ ಬರುತ್ತವೆ.

ಸ ಯಥಾ ಸರ್ವಾಸಾಮಪಾಂ ಸಮುದ್ರ
ಏಕಾಯತನಮ್ ।
ಏವಂ ಸರ್ವೇಷಾಂ ವಿದ್ಯಾನಾಂ ಹೃದಯ-
ಮೇಕಾಯತನಮ್ ॥

(ಎಲ್ಲ ನೀರುಗಳಿಗೂ ಸಮುದ್ರ ಹೇಗೆ ಒಂದು ನೆಲೆಮನೆಯೋ ಎಲ್ಲ ವಿದ್ಯೆಗಳಿಗೂ ಹೃದಯ ಹಾಗೆ ಒಂದು ನೆಲೆಮನೆ.)

ಗಮಕಿ ಕೃಷ್ಣಗಿರಿ ಕೃಷ್ಣರಾಯರ ಸ್ಮರಣೆ

ಜಿ. ಟಿ. ನಾರಾಯಣರಾವ್

ಕೃಷ್ಣರಾಯರು ನಾರಣಪ್ಪನ
ಕೃಷ್ಣಕಥೆಯನ್ನುಲಿಹರೆಂದರೆ
ಕೃಷ್ಣವೇಣಿಯರಲ್ಲಿ ಕೇಳ್ವರು ಕೊಳಲಿನಿಂಚರವ
ವಿಷ್ಣು ವೈಕುಂಠವನು ತೊರೆಯುತ
ಕೃಷ್ಣರೂಪಿಂದಣುಗರಲಿ ವ-
ರ್ಧಿಷ್ಣುವಾಗುವ ಕೋಟಿಸೂರ್ಯ ಪ್ರಭೆಯು ಹರಡುವುದು

ಗಮಕಿ ಕೃಷ್ಣಗಿರಿ ಕೃಷ್ಣರಾಯರು (೧೮೯೦–೧೯೬೬) ೧೯೩೦ರ ದಶಕದ ದಿನಗಳಂದು ನಮ್ಮೂರು ಮಡಿಕೇರಿಯಲ್ಲಿ ಕುಮಾರವ್ಯಾಸ ಭಾರತವನ್ನು ಹಾಡಿ, ಚಿತ್ರಿಸಿ, ಎಳೆಯರಾದ ನಮಗೆ, ವಿಶ್ವರೂಪ ದರ್ಶನ ಮಾಡಿಸುತ್ತಿದ್ದಾಗ ನಾವು ಕೆಲವರು ಸೇರಿ ಅವರಿಗೆ ಒಪ್ಪಿಸಿದ ನುಡಿಕಾಣ್ಕೆ ಇದು.

ನನ್ನ ಶಾಲಾ ದಿನಗಳಲ್ಲಿ ನಾನು ಅವರ ಭಾರತವಾಚನವನ್ನು ಸಮೃದ್ಧವಾಗಿ ಆಲಿಸಿ ಬೆಳೆದಿದ್ದೇನೆ. ಅವರೊಬ್ಬ ಜಂಗಮ ವಿಶ್ವವಿದ್ಯಾಲಯವಾಗಿದ್ದರು. ಅವರ ಬೈಠಕ್ಕಿನಲ್ಲಿಯ ಪ್ರಥಮಾಕರ್ಷಣೆ ಶ್ರುತಿಲೀನ ಝೇಂಕಾರಯುತ ಮಧುರ ಬಲಿಷ್ಠ ಶಾರೀರ. ಒಮ್ಮೆ ನೀವು ಕಿವಿಗಳನ್ನು ಅವರತ್ತ ನಿಮಿರಿಸಿದಿರೋ ಮುಂದೆ ಅಂದಿನ ಪ್ರಸಂಗ ಮುಗಿಯುವ ತನಕ ಅಲ್ಲಿಂದ ಕದಲಲಾರಿರಿ. ಅವರ ವಾಚನದ ಮೋಡಿ, ವ್ಯಾಖ್ಯಾನದ ಗಾರುಡಿ ಮತ್ತು ವಿಶ್ಲೇಷಣೆಯ ವ್ಯಾಪ್ತಿ ಹಾಗಿದ್ದುವು.

ಪಾತ್ರ ಯಾವುದೇ ಇರಲಿ, ಅದಕ್ಕೆ ನುಡಿಯೊಡಲಿತ್ತವನು ಕುಮಾರವ್ಯಾಸನಾದರೆ ಉಸಿರೂದುತ್ತಿದ್ದವರು ಕೃಷ್ಣರಾಯರು—ಈ ಗಮಕಿ ಶ್ರೇಷ್ಠರ ಸಲುವಾಗಿಯೇ ಆತ ಗದುಗಿನ ಭಾರತ ಕಂಡರಿಸಿದನೋ ಎಂಬಂತೆ. ಅಂದು ನಮ್ಮ ನಾಲಗೆಗಳಲ್ಲಿ ನಲಿಯುತ್ತಿದ್ದ ನುಡಿ: "ಕೃಷ್ಣರಾಯರು ಹಾಡಿದರೆಂದರೆ ಕುಮಾರವ್ಯಾಸನು ಒಲಿಯುವನು। ಕೌರವ ಪಾಂಡವ ಕೈದುಗಳೋಳಿಯ ಸಂಘಟ್ಟನೆಯನು ತೋರಿಪನು॥" ಕುವೆಂಪು ಪ್ರಭಾವ ಹೇಗೆ ಇಲ್ಲಿ ಪ್ರತ್ಯಕ್ಷ ಪ್ರಕಟವಾಗಿದೆ ಎಂಬುದನ್ನು ವಿವರಿಸಬೇಕಾಗಿಲ್ಲ.

ಗಮಕಿ-ಕವಿ ಮ್ಯ. ಶೇ. ಅನಂತಪದ್ಮನಾಭರಾಯರು ಕನ್ನಡದ ಕೇಂದ್ರವಾಗಿದ್ದರು ಅಂದಿನ ಮಡಿಕೇರಿಯಲ್ಲಿ. ಗಮಕಕಲೆಗೆ

ಕೊಡಗಿನಲ್ಲಿ ನೆಲೆ ಮತ್ತು ಬೆಲೆ ತಂದು ಕೊಟ್ಟವರೇ ಇವರು. ಮೈಶೇಯವರು ಕೃಷ್ಣಗಿರಿಯವರನ್ನು ತಮ್ಮ ಗುರುಗಳೆಂದು ಗೌರವಿಸುತ್ತಿದ್ದರು. ನಾನು ಮೈಶೇಯವರ ನೆರೆಮನೆಯವನಾಗಿ ಅವರ ಕಣ್ಣೆದುರೇ ಬೆಳೆಯುತ್ತಿದ್ದ ಅಣುಗ. ನಮ್ಮ ಮನೆಯಲ್ಲಿ ನಿರಂತರ ಕರ್ನಾಟಕ ಸಂಗೀತ ದಾಸೋಹ, ಪಕ್ಕದ ಮನೆಯಲ್ಲಿ ಭಾರತವಾಚನ ಪ್ರವಚನ ಕೈಂಕರ್ಯ. ಆದರೆ ನನ್ನ ವೈಯಕ್ತಿಕ ಅಳುಕು ಹಿಂಜರಿಕೆಗಳ ಕಾರಣ ವಾಗಿ ಮನೆಯಲ್ಲಿ ಬಾಯಿ ಬಿಡಲಿಲ್ಲ, ಕಿವಿ ಗೊಟ್ಟೆ; ನೆರೆಮನೆಯಲ್ಲಿ? ನನ್ನ ಶ್ರುತಿ-ರಾಗ ಪ್ರಿಯ ಕಿವಿಗಳಿಗೆ ಆ ಥಾಟಿ ಹಿತವೆನ್ನಿ ಲಿಲ್ಲ. ಅರ್ಥ?

ಅರ್ಥದ ಅರ್ಥವಾದದ್ದು ಕೃಷ್ಣಗಿರಿ ಯವರು ಮಡಿಕೇರಿಯಲ್ಲಿ ಭಾರತವಾಚನ ವ್ಯಾಖ್ಯಾನಗಳನ್ನು ಉಪಕ್ರಮಿಸಿದಾಗಲೇ. ಮೈಶೇಯವರು ಇವರನ್ನು ಆಗಾಗ ಮಡಿ ಕೇರಿಗೆ ಬರಮಾಡಿಕೊಂಡು, ತಮ್ಮ ಮನೆ ಯಲ್ಲಿಯೇ ಉಳಿಸಿಕೊಂಡು, ಆಂಜನೇಯನ ಗುಡಿಯಲ್ಲಿ ಭಾರತವಾಚನ ಏರ್ಪಡಿಸುತ್ತಿ ದ್ದರು. ಗೋಡೆಯಿಂದಾಚೆಗಿನ ಗುರು-ಶಿಷ್ಯ ಸಂವಾದ ವಾಗ್ವಾದ ಮತ್ತು ಗುಡಿಯಲ್ಲಿಯ ಗಮಕ ವೈಖರಿ ನನ್ನ ಯುವ ಮನಸ್ಸಿನ ಮೇಲೆ ಅಪಾರ ಪ್ರಭಾವ ಬೀರಿದುವು.

ಶ್ರವ್ಯಲಲಿತಕಲೆಯ ಯಾವುದೇ ಪ್ರಕಾರ ವಿರಬಹುದು—ಅದರಲ್ಲಿ ಶ್ರೋತೃಗಳು ಮೊದಲು ಆಕರ್ಷಿತರಾಗುವುದು ಕಂಠ ಮಾಧುರ್ಯದಿಂದ ಅಥವಾ ವಾದ್ಯಸುಸ್ವನ ದಿಂದ. ಕೃಷ್ಣಗಿರಿಯವರ ಭದ್ರ ಆಸ್ತಿ ಇದೇ—ಸುಶ್ರಾವ್ಯ ಶಾರೀರ ಮತ್ತು ಇದನ್ನು ಆಧರಿ ಸಿದ ಸಂಗೀತಶಾಸ್ತ್ರಜ್ಞಾನ, ಭಾವದೀಪ್ತಿ, ಸಾಹಿತ್ಯ ಪ್ರಭುತ್ವ ಮತ್ತು ವ್ಯಾಖ್ಯಾನ ಕೌಶಲ. ಅವರೊಬ್ಬ ಬಹುಶ್ರುತ ಪ್ರತಿಭಾ ನ್ವಿತ, ಹರಿಕಥಾ ಮಾಂತ್ರಿಕ ಸಂತ ಭದ್ರಗಿರಿ ಅಚ್ಯುತದಾಸರಂತೆ.

"ಕೇಳು ಜನಮೇಜಯ ಧರಿತ್ರೀಪಾಲ" ಅಥವಾ "ಶ್ರೀವನಿತೆಯರಸನೆ ವಿಮಲ ರಾಜೀವ ಪೀಠನ ಪಿತನೆ" ಎಂದು ಅವರು ಉತ್ಕಂಠದಲ್ಲಿ ಕಾಂಭೋಜಿ, ಬೇಗಡೆ ಅಥವಾ ಕೇದಾರಗೌಳದಲ್ಲಿ ಧ್ವನಿ ಎತ್ತರಿಸಿದಾಗ, ಧ್ವನಿವರ್ಧಕರಹಿತ ದಿನಗಳವು, ನಾವೆಲ್ಲರೂ ಮನೆಮನೆಗಳಿಂದ ಓಡೋಡಿ ಆಂಜನೇಯನ ಗುಡಿ ಸೇರಿ ಹಿಂಡಾಗುತ್ತಿದ್ದುದು ಈಗಲೂ ನೆನಪಿದೆ—ಬೊಮ್ಮನ ಹಳ್ಳಿಯ ಕಿಂದರಿ ಜೋಗಿಯ ಸುತ್ತಲು ಮುತ್ತಿದ ಅರ್ಭಕ ರಂತೆ! ಅಥವಾ ಕೃಷ್ಣನ ಕೊಳಲಿನ ಕರೆ ಆಲಿಸಿದ ಗೋಪಿಯರಂತೆ! ಅವರ ಕೊರಳ ನಲ್ಲಿ ಕೊಳಲಿನ ಇನಿದನಿ ಸೂಸುತ್ತಿತ್ತು, ಪಾಂಚಜನ್ಯದ ಸಿಂಹಗರ್ಜನೆ ಮೊಳಗು ತ್ತಿತ್ತು.

ಅವರು ಬಿತ್ತರಿಸುತ್ತಿದ್ದ ವ್ಯಾಖ್ಯಾನದ ಒಂದು ಮಾದರಿ:

ದುರ್ಯೋಧನಾದಿಗಳ ಗರ್ವಕ್ಕೆ ತಕ್ಕ ಶಾಸ್ತಿ ಆಗಿದೆ. ಗಂಧರ್ವರಾಜ ಈ ಗರ್ವಾಂಧ ರನ್ನು ಹೆಡಮುರಿಕಟ್ಟಿ ಸೆರೆ ಒಯ್ದಿದ್ದಾನೆ. ಅನ್ಯಮಾರ್ಗ ತೋಚದೆ ಭಾನುಮತಿ ವನ ವಾಸಿ ಯಮಸೂನುವಿಗೆ ಶರಣಾಗಿದ್ದಾಳೆ:

> ನಾದಿದಳು ನೃಪನಂಘ್ರಿಯನು ನಯ
> ನೋದಕದ ಧಾರೆಯಲಿ ಭಾಳದ
> ಶೇದು ತಿಲಕದ ಗಂಧದಲಿ....

ಸೋಹನಿ ರಾಗದಲ್ಲಿ ಈ ದಾರುಣ ದೃಶ್ಯ ವನ್ನು ಅಸಂಖ್ಯ ರೀತಿ, ವರಿಸೆ, ಅನ್ವಯ

ಮತ್ತು ಅವಧಾರಣೆಗಳಲ್ಲಿ ವಿವರಿಸುವಾಗ ಮತ್ತು ಪೂರಕ ವ್ಯಾಖ್ಯಾನ ನೀಡುವಾಗ ನಮ್ಮ ಮನಸ್ಸಿನ ಹಲವು ಸ್ತರಗಳಲ್ಲಿ ರಸಾವಿರ್ಭಾವವಾಗುತ್ತಿತ್ತು : ನಿಜ ಸನ್ನಿವೇಶದ ಪರಿಣಾಮವಾಗಿ ಉಮ್ಮಳ, ಕೌರವರಿಗಾದ ಗರ್ವಭಂಗಕ್ಕೆ ತೃಪ್ತಿ, ಧರ್ಮರಾಯನ ಹಿರಿತನ ಕುರಿತು ಗೌರವ, ಜೀವನ ಧರ್ಮಕ್ಕೆ ಸಂಬಂಧಿಸಿದಂತೆ ಮೌಲ್ಯಗಳ ಹೊಳಹು ಇತ್ಯಾದಿ.

ಅವರೊಬ್ಬ ಸೃಜನಶೀಲ ಸತ್ಪುರುಷ. ಸ್ವತಃ ಆನಂದಾನುಭವಿಗಳಾಗಿದ್ದರು, ತಮ್ಮ ಸೃಜನಶೀಲತೆಯನ್ನು ಸಮಾಜಕ್ಕೆ ಧಾರೆ ಎರೆದು ಅಧಿಕಾನಂದಕಾರಕರಾದರು. ಶಿಷ್ಯರ ಹಾಗೂ ಅಭಿಮಾನಿಗಳ ಮೂಲಕ ಒಂದು ಪರಂಪರೆಯನ್ನೇ ರೂಪಿಸಿ ಪೋಷಿಸಿದರು.

ಇಷ್ಟು ಅವರ ಸೇವೆ ಕುರಿತು ಹೇಳಿದ ಬಳಿಕ ಗಮಕಕಲೆಯ ವರ್ತಮಾನಸ್ಥಿತಿ ಕುರಿತು ನನ್ನ ಅನಿಸಿಕೆಗಳನ್ನು ಹೇಳಲೇ ಬೇಕು.

ಗಮಕಕಲೆಯ ಪ್ರಧಾನಾಂಶ "ಮಾತು" ಅಂದರೆ ಪಾಠ ಅಥವಾ ಕಥಾನಿರೂಪಕ ಷಟ್ಪದಿಗಳ ಶ್ರೇಣಿ. ಇದಕ್ಕೆ ಆಧಾರ 'ಧಾತು' ಅಂದರೆ ಸಂಗೀತ ಮತ್ತು ಪುರೋಗಮನ ಪ್ರೇರಕ 'ವ್ಯಾಖ್ಯಾನ'. ಭಾರತವಾಚನ ಎಂದರೆ ಷಟ್ಪದಿಗಳನ್ನು ರಾಗಭಾವಸಹಿತವಾಗಿ ಅರ್ಥಕ್ಕೆ ಚ್ಯುತಿ ಬಾರದಂತೆ ಓದುವುದು. ಸಂಗೀತದ ಗಮಕ, ಸಂಗತಿ, ಅಲುಗು ಮುಂತಾದುವು ಇಲ್ಲಿ ಅನಾವಶ್ಯಕ ; ಆದರೆ ಶ್ರುತಿ, ಶುದ್ಧತೆ ಮತ್ತು ರಾಗಬದ್ಧತೆ ಖಂಡಿತಬೇಕು. ಹಂಸಧ್ವನಿಯಲ್ಲಿ ಆರಂಭಿಸಿದ ಪದ್ಯವನ್ನು ಮೋಹನಕ್ಕೋ ಕಲ್ಯಾಣಿಗೋ ಎಳೆದರೆ ರಸಾಭಾಸವಾಗುತ್ತದೆ. ಶ್ರುತಿ ತಪ್ಪಿದರೆ ಇಡೀ ವಾಚನವೇ ಕಳೆಗೆಡುತ್ತದೆ. ನೆನಪಿನಿಂದಲೇ ಕೃಷ್ಣರಾಯರು ಪದ್ಯಗುಂಫನಗಳನ್ನು ಹಾಡುತ್ತಿದ್ದರು—ಮುದ್ರಿತ ಗ್ರಂಥ ವ್ಯಾಸಪೀಠದ ಮೇಲೆ ತೆರೆದುಕೊಂಡಿದ್ದರೆ ಸಾಕು. ಆ ಮಟ್ಟದ ತನ್ಮಯತೆ ಮತ್ತು ತಾದಾತ್ಮ್ಯ ಸಿದ್ಧಿಸಿದ ಹೊರತು ವಾಚನಕ್ಕೆ ಇಳಿದರೆ ಅದು ಕೇವಲ ದೂರ ದರ್ಶನದ ವಾರ್ತಾಪಠಣವಾದೀತೇ ವಿನಾ ಕಥೆ ಮತ್ತು ಭಾವಗಳ ವಿಸ್ತರಣೆ ಆಗದು. ವ್ಯಾಖ್ಯಾನದ ಅಧಿರಚನೆ ನಿರ್ಮಿಸಲು ಅಗಾಧ ಲೋಕಜ್ಞಾನ ಅವಶ್ಯಕ. ಸಾಹಿತ್ಯ ದರ್ಶನ ಗಳಿಸಿರಲೇಬೇಕು. ಹೀಗೆ ಗಮಕಕಲೆ ಮುಪ್ಪುರಿಯಾಗಿ ಮತ್ತು ವ್ಯವಸ್ಥಿತವಾಗಿ ಸತ್ತ್ವವನ್ನೂ ಸ್ವತ್ವವನ್ನೂ ಅಭಿವರ್ಧಿಸಿಕೊಂಡರೆ ಮಾತ್ರ ಅದು ಉಳಿದೀತು. ಇಲ್ಲವಾದರೆ ನಮ್ಮ ಭವ್ಯ ಸಂಸ್ಕೃತಿಯ ದಿವ್ಯ ಗತವೈಭವವಾಗಿ ಮಾಸಿಹೋಗುವುದು ಖರೆ.

ಇಂಥ ಒಂದು ಪುನರುಜ್ಜೀವನ ಗಮಕ ಕಲಾಸಕ್ತರ ಅಂತಃಪ್ರೇರಣೆಯಿಂದ ಹಾಗೂ ವ್ಯವಸ್ಥಿತ ಸಂಘಟನೆಯಿಂದ ಆರಂಭವಾದರೆ ಅದು ಮುಂದುವರಿದೀತು. ಹೀಗಲ್ಲದೇ ಸರ್ಕಾರ ಇಲ್ಲವೇ ಅಕಾಡೆಮಿ ಕೃಪಾಪೋಷಿತವಾದರೆ ವಾರ್ಷಿಕ ಸಮ್ಮೇಳನ, ಉತ್ಸವಾದಿಗಳಿಂದಾಚೆಗೆ ಮುಂದುವರಿಯುವುದು.

ಬೇಡಿಕೆಗೆ ಅನುಲೋಮವಾಗಿ ಪೂರೈಕೆ ಬೆಳೆಯುತ್ತದೆ ಎಂಬ ಅರ್ಥಶಾಸ್ತ್ರದ ಮರುಕಹೀನ ನಿಯಮಕ್ಕೆ ಯಾವ ಕಲಾಪ್ರಕಾರವೂ ಅಪವಾದವಲ್ಲ !

ಫ್ರ್ಯಾಂಕೆನ್‌ಸ್ಟೈನ್

ಸಿ. ನಾಗಣ್ಣ

[ಆಂಗ್ಲ ಸಾಹಿತ್ಯ ಸಂದರ್ಭದಲ್ಲಿ ಪತಿ-ಪತ್ನಿಯರು ಸಮಸಮನಾಗಿ ಸಾಹಿತ್ಯ ಸೃಷ್ಟಿ ಮಾಡಿದ ಉದಾಹರಣೆಗಳು ಅನೇಕ ಸಿಕ್ಕುತ್ತವೆ. ಹತ್ತೊಂಭತ್ತನೆಯ ಶತಮಾನದ ರಮ್ಯಕವಿಗಳಲ್ಲಿ ಅಗ್ರಗಣ್ಯನಾದ ಶೆಲ್ಲಿ (೧೭೯೨-೧೮೨೨) ಈ ದೃಷ್ಟಿಯಲ್ಲಿ ಪುಣ್ಯವಂತ. ಕಾವ್ಯ ಮತ್ತು ವಿಚಾರ ಸಾಹಿತ್ಯ ಸೃಷ್ಟಿಯಿಂದ ಶೆಲ್ಲಿ ಜಗತ್ಪ್ರಸಿದ್ಧನಾಗಿರುವಂತೆ ಅವನ ಪತ್ನಿ ಮೇರಿ ವೋಲ್‌ಸ್ಟನ್‌ಕ್ರಾಫ್ಟ್ ಶೆಲ್ಲಿ (೧೭೯೭-೧೮೫೧) ತಾನು ರಚಿಸಿದ ಕಾದಂಬರಿ "ಫ್ರಾಂಕೆನ್‌ಸ್ಟೈನ್"ನಿಂದ ಸಾಹಿತ್ಯ ಲೋಕಕ್ಕೆ ಚಿರಪರಿಚಿತಳಾಗಿದ್ದಾಳೆ. ಆರಂಭದಲ್ಲಿ ಒಂದು ಸಣ್ಣ ಕಥೆಯಾಗಿ ರಚಿತವಾಗಬೇಕಾಗಿದ್ದ ಕಥೆ ಒಂದು ಕಾದಂಬರಿಯಾಗಿ ರೂಪು ತಳೆಯಿತು. ಇದಕ್ಕೆ ಪತಿ ಶೆಲ್ಲಿಯ ಪ್ರೋತ್ಸಾಹವೇ ಕಾರಣವೆಂದು ಮೇರಿ ಶೆಲ್ಲಿ ತಿಳಿಸುತ್ತಾಳೆ. ಅದ್ಭುತ ವಲಯದಲ್ಲಿ ಕಣ್ಣೊಡೆದ ಈ ಕಥೆ ಮೈದಾಳಿದುದು ಹೇಗೆ ಎಂಬ ಪ್ರಶ್ನೆಗೆ ಮೇರಿ ಶೆಲ್ಲಿ ಹೀಗೆ ಉತ್ತರಿಸುತ್ತಾಳೆ: "ದಿಂಬಿಗೆ ತಲೆಯಿಟ್ಟು ಮಲಗಲು ಯತ್ನಿಸಿದೆ, ನಿದ್ರೆ ಹತ್ತಲಿಲ್ಲ, ಯೋಚನೆಯಲ್ಲಿ ತೊಡಗಿದೆ ಎಂದೂ ಹೇಳಲಾರೆ. ಹಗಲುಗನಸಿನ ಮಾಮೂಲಿ ಎಲ್ಲೆಯನ್ನು ದಾಟಿ ಬೇರಾವುದೋ ಲೋಕದಲ್ಲಿ ಮನಸ್ಸು ವಿಹರಿಸುತ್ತಾ ಕಲ್ಪನಾಸಾಮ್ರಾಜ್ಯದಲ್ಲಿ ತೇಲಾಡಿತು....ತನ್ನೆಲ್ಲ ಪರಿಕರ ಮಧ್ಯದಲ್ಲಿ ಖಿನ್ನವಾದ ವಿದ್ಯಾರ್ಥಿಯೊಬ್ಬ ಕುಳಿತಿದ್ದಂತೆ ಭಾಸವಾಯಿತು. ಚೇತನಾರೂಪಿಯಾದ ವ್ಯಕ್ತಿಯೊಬ್ಬ ಪೈಶಾಚಿ, ಜೀವವಿರುವಂತೆ ಕಂಡು ಮಿಸುಕಾಡತೊಡಗಿದ." ಮೇರಿ ಶೆಲ್ಲಿಯ ತಲೆಯಲ್ಲಿ ಸ್ವಿಡ್ಜರ್ಲೆಂಡಿನ ಒಂದು ರಾತ್ರಿ ಈ ರೀತಿಯಾಗಿ ಕಣ್ಣೊಡೆದ ಕಥೆಯಲ್ಲಿ ಫ್ರ್ಯಾಂಕೆನ್‌ಸ್ಟೈನ್ ನಾಯಕನಾಗಿರುವನಾದರೂ ಈ ಸಂಶೋಧಕ ಜೀವ ಕೊಡುವ ರಕ್ಕಸಚೇತನವೇ ಒಂದು ವಿಧದಲ್ಲಿ ಕಥೆಯ ಕೇಂದ್ರ ಬಿಂದು. ಫ್ರ್ಯಾಂಕೆನ್‌ಸ್ಟೈನ್ ತನ್ನ ಪ್ರಯೋಗಾಲಯದಲ್ಲಿ ಸೃಷ್ಟಿಸುವ ಈ ಚೇತನ ತನಗೆ ಜೀವ ಕೊಟ್ಟವನ ಸೋದರ, ಅವನ ಸ್ನೇಹಿತ ಮತ್ತು ಅವನು ಮದುವೆಯಾಗಬೇಕೆಂದಿದ್ದ ಕನ್ಯೆ ಇಷ್ಟು ಮಂದಿಯನ್ನೂ ಕೊಲ್ಲುತ್ತದೆ. ಇಂಥದೊಂದು ಜೀವಿಗೆ ಪ್ರಾಣ ಕೊಟ್ಟ ಕಾರಣಕ್ಕಾಗಿಯೇ ಫ್ರ್ಯಾಂಕೆನ್‌ಸ್ಟೈನ್‌ಗೆ ಶಿಕ್ಷೆಯಾಗುವುದಿಲ್ಲ, ಆದರೆ ತಾನು ಸೃಷ್ಟಿಸಿದ ಈ ರಕ್ಕಸ ಶಕ್ತಿಯನ್ನು ನಿಯಂತ್ರಣದಲ್ಲಿ ಇಡಲಾಗದೇ ಸೋತದ್ದಕ್ಕೆ ಅವನಿಗೆ ಶಾಸ್ತಿಯಾಗುತ್ತದೆ. ಈ ರಕ್ಕಸಶಕ್ತಿಯನ್ನು

ಉತ್ಪತ್ತಿ ಮಾಡಿದ್ದು ತಪ್ಪಲ್ಲದಿದ್ದರೂ ಒಳ್ಳೆಯ ಕಾರ್ಯಕ್ಕೆ ಅದನ್ನು ಹಚ್ಚದಿದ್ದದ್ದು ಪ್ರಮಾದವಾಗಿದೆ. ಈ ಶಕ್ತಿಗೆ ಒಳ್ಳೆಯತನದ ದಾಹವಿದೆಯೆಂದು ಕಥೆಯಲ್ಲೇ ವಿವರಗಳು ದೊರೆಯುತ್ತವೆ. ಉದಾಹರಣೆಗೆ ಅದಕ್ಕೆ ಸಂಗೀತ ಬೇಕಾಗಿದೆ, ಜ್ಞಾನದಾಹವಿದೆ, ಸಜ್ಜನಿಕೆಯ ತುಡಿತವಿದೆ, ಮನುಷ್ಯರ ಒಡನಾಟದ ಹಸಿವಿದೆ. ಆದರೆ ಜನರ ಸಹವಾಸವನ್ನು ಅದು ಬಯಸಿದಾಗೆಲ್ಲ ಅದರ ವಿಕಾರವಾದ ರೂಪನ್ನು ನೋಡಿ ಜನರು ಹೇಸಿ ಅದರಿಂದ ದೂರವಾಗುತ್ತಾರೆ. ತಿರಸ್ಕೃತವಾದ ಈ ರಕ್ಕಸಶಕ್ತಿ ಕ್ರೂರ ಮೃಗದ ಬಾಳನ್ನು ಬಾಳಲು ಶಪಥ ಮಾಡುತ್ತದೆ. ತನ್ನ ಸೃಷ್ಟಿಗೆ ಕಾರಣಕರ್ತನಾಗಿ ಈಗ ತನ್ನನ್ನು ತ್ಯಾಜ್ಯ ಮಾಡಿರುವಂಥ ಫ್ರ್ಯಾಂಕೆನ್‌ಸ್ಟೈನಿನ ವಿರುದ್ಧ ಸೇಡು ತೀರಿಸಿಕೊಳ್ಳಲು ಮುಂದಾಗುತ್ತದೆ. ನತದೃಷ್ಟ ವಿಜ್ಞಾನಿ ಈ ವಿಚಿತ್ರ ಶಕ್ತಿಗೆ ಒಂದು ಒಡನಾಡಿಯನ್ನು ದಕ್ಕಿಸಿಕೊಡದೆ ಹೋದಾಗ ಇನ್ನಷ್ಟು ಕ್ರೌರ್ಯದಿಂದ ಅದು ಅವನ ನಾಶಕ್ಕೆ ಹಲ್ಲು ಮಸೆಯುತ್ತದೆ.

೧೮೧೮ರಲ್ಲಿ ರಚಿತವಾದ ಈ ಕಾದಂಬರಿ ಆ ಕಾಲದಲ್ಲಿ ಜನಪ್ರಿಯವಾಗಿದ್ದ ಭೀಭತ್ಸ ಕಥೆಗಳ ಪರಂಪರೆಗೆ ಸೇರಿದುದಾಗಿದೆ. ಪ್ರಚಲಿತ ಕಾದಂಬರಿಗಳ ಮಾರ್ಗವನ್ನು ಸಂಪೂರ್ಣವಾಗಿ ತುಳಿಯದೆ ವಿಚಾರವನ್ನೂ ಒಳಗೊಂಡ ಪರಿಣಾಮವಾಗಿ "ಫ್ರ್ಯಾಂಕೆನ್‌ಸ್ಟೈನ್" ಮುಖ್ಯ ಕಾದಂಬರಿಯಾಗುತ್ತದೆ, ಅಷ್ಟೇ ಅಲ್ಲ ಮುಂದೆ ಎದುರಾಗುವ ವೈಜ್ಞಾನಿಕ ಕಥೆಗಳಿಗೆ ನಾಂದಿ ಹಾಡಿದ ಹೆಗ್ಗಳಿಕೆಗೂ ಪಾತ್ರವಾಗುತ್ತದೆ. ವಿಜ್ಞಾನದ ಬೆನ್ನು ಹತ್ತಿ ಸರ್ವಶಕ್ತಿಯನ್ನು ಗಳಿಸಿಕೊಳ್ಳಲು ದೆವ್ವಕ್ಕೆ ಆತ್ಮವನ್ನೇ ಮಾರಿಕೊಂಡ ಮಧ್ಯಯುಗದ ಮಹಾಮಾಂತ್ರಿಕ ಡಾ. ಫೌಸ್ಟಸ್‌ನನ್ನು ನಾವು ಬಲ್ಲೆವು. ವಿಜ್ಞಾನವೇ ಪರಮವೆಂದು ಪೂಜಿಸುವವರು ಪ್ರಾಣವನ್ನೇ ಪಣವಾಗಿ ಒಡ್ಡಬೇಕಾದೀತೆಂದು ಮೇರಿ ಶೆಲ್ಲಿಯ "ಫ್ರ್ಯಾಂಕೆನ್‌ಸ್ಟೈನ್" ಕಾದಂಬರಿ ಎಚ್ಚರಿಸುತ್ತದೆ. ಇಂಥ ಸುಪ್ರಸಿದ್ಧ ಕಾದಂಬರಿಯ ಒಂದು ಭಾಗವನ್ನು ಆರಿಸಿಕೊಂಡು ಭಾಷಾಂತರಿಸಲಾಗಿದೆ.]

ನನ್ನ ಹೆಸರು ವಿಕ್ಟರ್ ಫ್ರ್ಯಾಂಕೆನ್‌ಸ್ಟೈನ್ ಎಂದು. ನನ್ನ ಕಥೆ ಕೇಳಿದರೆ ನೀವು ಇವನಿಗೆಲ್ಲೊ ಹುಚ್ಚು ಎನ್ನಬಹುದು, ಆದರೆ ನೀವು ಮಾತ್ರ ನನ್ನ ಕಥೆ ಕೇಳಿದರೆ ನಂಬುತ್ತೀರಿ ಅಲ್ಲದೆ ನನ್ನ ಕಷ್ಟ ಮತ್ತು ಕೋಟಲೆಯನ್ನು ನೆನೆದು ನೀವು ಹಾಗೆ ಮಾಡದಂತೆ ಎಚ್ಚರಿಕೆ ವಹಿಸುತ್ತೀರಿ ಕೂಡ.

ಬಹಳ ಸೊಗಸಾದ ಮನೆಯಲ್ಲಿ ನಾನು ಹುಟ್ಟಿದೆ. ನನ್ನ ತಂದೆ ತಾಯಿಗಳು ಮುದ್ದಿನಿಂದ ನನ್ನನ್ನು ಬೆಳೆಸಿದರು. ನನ್ನ ಅಕ್ಕರೆಯ ಗೆಳತಿ ಎಲಿಜಬೆತ್ ಮತ್ತು ನನ್ನ ಪ್ರೀತಿಯ ತಮ್ಮ ವಿಲಿಯಂ ಇವರ ಒಡನಾಟ ನನಗೆ ಹಿತವೆನಿಸಿತ್ತು. ನಾನು ಅದೃಷ್ಟಶಾಲಿಯೆಂಬುದು ನಿಜವಾದರೂ ನನ್ನ ಕುಟುಂಬದವರು ಮತ್ತು ನನ್ನ ಗೆಳೆಯರಿಂದ ದೂರವಾಗಿ ನನ್ನ ಪಾಡಿಗೆ ನಾನು ಒಂಟಿಯಾಗಿರಲು ಬಯಸಿದೆ. ಬದುಕಿನ ರಹಸ್ಯವನ್ನು ಅರಿಯಲು ನನ್ನ ಪ್ರಯೋಗಶಾಲೆಯಲ್ಲಿ ಅಹರ್ನಿಶಿ ಕೆಲಸ ಮಾಡತೊಡಗಿದೆ. ಏಕೆಂದರೆ ಯಾವ ವ್ಯಕ್ತಿಯೂ ಅದುವರೆಗೆ ಮಾಡಿರದಿದ್ದನ್ನು ಮಾಡಿ ತೋರಿಸಬೇಕೆಂಬ ಬಯಕೆ ನನ್ನದಾಗಿತ್ತು: ಪರಿ

ಪೂರ್ಣ ಮನುಷ್ಯನನ್ನು ಸೃಷ್ಟಿಸಬೇಕೆಂಬುದು ನನ್ನ ಗುರಿಯಾಗಿತ್ತು.

ನವೆಂಬರ್ ತಿಂಗಳ ಒಂದು ಮಂಕು ಕವಿದ ರಾತ್ರಿಯಂದು ನಾನು ನನ್ನ ಸೃಷ್ಟಿಯ ಮುಖ ದರ್ಶನ ಮಾಡಿದೆ. ಇದನ್ನು ರೂಪಿಸಲು ನಾನು ಎಷ್ಟು ದುಡಿದಿದ್ದೆ ; ನನ್ನ ದುಡಿಮೆಯ ಫಲವಾಗಿ ಅವತರಿಸಿದ್ದ ಆ ಜೀವವಿಶೇಷವನ್ನು ಯಾವ ರೀತಿ ಬಣ್ಣಿಸಲಿ? ಅವನು ಸುಂದರವಾಗಿರಲೆಂದು ನನ್ನ ಅಪೇಕ್ಷೆಯಾಗಿತ್ತು. ಸುಂದರ! ಅಯ್ಯೋ ದೇವರೆ! ಅವನ ಮಾಂಸವನ್ನೂ ನರಗಳನ್ನೂ ಸಹ ಅವನ ಚರ್ಮ ಸರಿಯಾಗಿ ಮರೆಮಾಡಿರಲಿಲ್ಲ. ನಿಸ್ತೇಜವಾದ ಅವನ ಕಣ್ಣುಗಳು ಒಂದು ಕಡೆ ನೀಟಾಗಿ ಇಳಿಬಿದ್ದ ಅವನ ಕಪ್ಪು ಕೂದಲು, ಬಿಳಿ ಹಲ್ಲು, ಸುಕ್ಕು ಗಟ್ಟಿದ ಮುಖ, ಕಪ್ಪು ತುಟಿಗಳು. ನನ್ನನ್ನು ಸ್ಪರ್ಶಿಸಲು ಅವನು ಮುಂದೆ ಬಾಗಿದಾಗ ಅವನ ಕಪೋಲದ ಸುಕ್ಕುಗಟ್ಟಿದ ಚರ್ಮ ಮತ್ತು ಆ ವಿಚಿತ್ರ ನಗು ಎದೆ ನಡುಗಿಸುವಂತಿತ್ತು. ಕೂಡಲೇ ಆ ಮನೆಯಿಂದ ಹೊರಗೆ ಓಡಿ ಹೋದೆ. ನಾನು ಮರಳಿ ಮನೆಗೆ ಹೋದಾಗ ನಾನು ಸೃಷ್ಟಿಸಿದ ಆ ರಾಕ್ಷಸಶಕ್ತಿ ಮನೆಯಲ್ಲಿರಲಿಲ್ಲ. ಆದರೂ ನನ್ನ ಮನಸ್ಸಿನಲ್ಲಿದ್ದ ಅಲ್ಲೋಲ ಕಲ್ಲೋಲದಿಂದಾಗಿ ದೃಷ್ಟಿ ಹಾಯಿಸಿದಲ್ಲೆಲ್ಲಾ ಅವನು ಇರುವುದಾಗಿ ಭಾಸವಾಯಿತು. ಮರುಳು ಹಿಡಿದಂತಾಗಿ ಖಾಯಿಲೆ ಬಿದ್ದವನೆ ಚೇತರಿಸಿಕೊಳ್ಳಲು ಸುಮಾರು ತಿಂಗಳುಗಳೇ ಆಯಿತು.

ವಸಂತಋತುವಿನ ಆಗಮನದಿಂದ ನನಗೆ ಕೊಂಚ ಚೈತನ್ಯ ಬಂದಿತ್ತಾದರೂ ನನ್ನ ದುಃಖವೂ ಕೂಡ ಆಗಲೇ ಮೊಳಕೆ ಒಡೆಯುತ್ತಿತ್ತು. ನನ್ನ ತಮ್ಮ ವಿಲಿಯಂ ಕಾಲವಾದನೆಂಬ ದುಃಖದ ವಾರ್ತೆಯನ್ನು ನನ್ನ ತಂದೆಯಿಂದ ಬಂದ ಪತ್ರ ಹೊತ್ತು ತಂದಿತ್ತು. ಗುರುತು ಪರಿಚಯವಿರದ ಯಾರೋ ಆಗಂತುಕ ಅವನ ಕತ್ತು ಹಿಸುಕಿ ಸಾಯಿಸಿದ್ದ. ನನಗೆ ದುಃಖ ತಡೆಯಲಾಗಲಿಲ್ಲ; ಅನೂಹ್ಯವಾದ ಭಯ ನನ್ನನ್ನು ಆವರಿಸಿತಾದರೂ ಅದರ ಮಧ್ಯದಲ್ಲೇ ನನ್ನ ಸಹೋದರನ ಕೊಲೆಗಾರನ ಛಾಯೆ ಸುಳಿದಾಡಿತು. ಏಕೆಂದರೆ ಈ ವಾರ್ತೆಯು ನನ್ನ ಕೈ ಸೇರುತ್ತಲೇ ನನ್ನ ಕುಟುಂಬದವರನ್ನು ಕಾಣಲು ನಾನು ಮನೆಗೆ ಧಾವಿಸಿದಾಗ ಅದರ ಆಜುಬಾಜುವಿನಲ್ಲೇ ಕತ್ತಲಲ್ಲೊಂದು ಆಕೃತಿ ಚಲಿಸುವುದು ಕಂಡಿತು. ಆಗ ನನಗೆ ಮನದಟ್ಟಾಯಿತು, ವಿಲಿಯಂನನ್ನು ಕೊಂದವ ಬೇರಾರೂ ಅಲ್ಲ ನಾನೇ ಸೃಷ್ಟಿಸಿದ ಆ ರಾಕ್ಷಸನೆಂದು!

ದಿನಗಳುರುಳಿದಂತೆ ದುಃಖದ ಭಾರದಲ್ಲಿ ನಾನು ಉಡುಗಿಹೋದೆ, ಆದರೂ ಯಾರೊಡನೆಯೂ ನನ್ನ ಆಲೋಚನೆಗಳನ್ನು ಹಂಚಿಕೊಳ್ಳುವಂತಿರಲಿಲ್ಲ. ಮನಸ್ಸನ್ನು ಸ್ವಲ್ಪ ಹಗುರಗೊಳಿಸಿಕೊಳ್ಳುವ ತವಕದಲ್ಲಿ ಒಂದು ದಿನ ಬೆಟ್ಟವೇರಿ ಹೋದೆ. ತುತ್ತತುದಿಯನ್ನು ಮುಟ್ಟಿ ಇನ್ನೇನು ಬಂಡೆಗಳ ಸನಿಹ ಕುಳಿತುಕೊಂಡು ನನ್ನ ದುಗುಡಕ್ಕೊಂದು ತೆರೆ ಎಳೆಯಬೇಕು ಎಂದುಕೊಳ್ಳುವಷ್ಟರಲ್ಲಿ ಎತ್ತರದ ಆಕೃತಿಯೊಂದು ನನ್ನ ಕಡೆಯೇ ಅತ್ಯಂತ ವೇಗವಾಗಿ ಹಾಯ್ದು ಬರುತ್ತಿರುವುದು ನನ್ನ ಗಮನಕ್ಕೆ ಬಂದಿತು. ಅದು ನಾನು ಸೃಷ್ಟಿಸಿದಂಥ ಆ ಪಾಪಿಯೇ ಆಗಿತ್ತು. "ಪಿಶಾಚಿಯೆ!" ನಾನು ಕೂಗಿದೆ, "ನನ್ನ ಬಳಿ ಬರಲು ನಿನಗೆಷ್ಟು ಧೈರ್ಯ?

ಹೊರಟು ಹೋಗು! ನೀನು ನಿಂತರೆ ನಿನ್ನನ್ನ ತೀಡಿ ಪುಡಿಪುಡಿ ಮಾಡುತ್ತೇನೆ."

"ಶಾಂತನಾಗು," ಅನನಂದ. "ಮರೆಯಬೇಡ, ನಿನಗಿಂತಲೂ ದೊಡ್ಡವನಾಗಿ, ಶಕ್ತಿವಂತನಾಗಿ ನನ್ನನ್ನು ನೀನು ಸೃಷ್ಟಿಸಿದ್ದೀಯ. ಈಗಾಗಲೇ ನೀನು ಸಾಕಷ್ಟು ಚಿತ್ರಹಿಂಸೆ ಅನುಭವಿಸಿರುವಾಗ ನೀನು ಇನ್ನೂ ನನ್ನನ್ನು ಧ್ವಂಸ ಮಾಡಬೇಕೆಂದಿದ್ದೀಯಾ? ಓ, ಫ್ರ್ಯಾಂಕೆನ್‌ಸ್ಟೈನ್, ನನ್ನ ಬಗ್ಗೆ ಕರುಣೆ ತೋರು, ಅದು ನಿನಗೆ ಸಾಧ್ಯ. ನೀನು ಜೀವಕೊಟ್ಟ ವಸ್ತು ನಾನು ಅನ್ನುವುದನ್ನು ಮರೆಯಬೇಡ. ನಿನ್ನ ಮಗನಾಗಿ ನಾನು ಬಾಳಬೇಕಾಗಿತ್ತು. ಆದರೆ ನೀನು ನನ್ನನ್ನು ತ್ಯಜಿಸಿಬಿಟ್ಟೆ. ನಾನೂ ಕೂಡ ಒಂದಾನೊಂದು ಕಾಲದಲ್ಲಿ ಒಳ್ಳೆಯವನಾಗಿದ್ದೆ, ದಯೆ ತೋರುವವನಾಗಿದ್ದೆ, ಆದರೆ ನನ್ನ ವಿಕಾರವಾದ ಮುಖವನ್ನು ಕಂಡು ನಾನು ಹೋದಲ್ಲೆಲ್ಲಾ ಮಂದಿ ಅಸಹ್ಯಗೊಂಡು ನಿಂದಿಸತೊಡಗಿದರು. ನನ್ನ ದುಃಖದ ಕಾರಣದಿಂದ ನಾನು ಕ್ರೂರಿಯಾಗಿದ್ದೇನೆ. ನನಗೆ ಸಂತೋಷ ಕೊಡು, ನಾನು ಮತ್ತೆ ಒಳ್ಳೆಯವನಾಗುತ್ತೇನೆ."

ಸ್ತ್ರೀ ಒಡನಾಡಿಯೊಬ್ಬಳನ್ನು ತನಗೆ ಕೊಟ್ಟದ್ದೇ ಆದರೆ ತಾನು ಓಡಿಹೋಗುವೆನಲ್ಲದೆ ಮತ್ತೆ ಎಂದೂ ಮರಳಿ ಬಂದು ತೊಂದರೆ ಕೊಡೆನೆಂದು ಹೇಳಿದ ರಾಕ್ಷಸ. ಮನಸ್ಸಿಲ್ಲದ ಮನಸ್ಸಿನಲ್ಲಿ ಅವನ ಬೇಡಿಕೆಯನ್ನು ಈಡೇರಿಸಲು ಒಪ್ಪಿ ಹೆಣ್ಣೊಂದನ್ನು ಸೃಷ್ಟಿಸುವ ದಿಶೆಯಲ್ಲಿ ವಸ್ತು ವಿಶೇಷಗಳನ್ನು ಕಲೆಹಾಕಲು ಮುಂದಾದೆ. ಸ್ಕಾಟ್ಲೆಂಡಿನ ಮೂಲೆಯ ದ್ವೀಪವೊಂದರಲ್ಲಿ ಒಂಟಿ ಪ್ರಯೋಗಶಾಲೆಯಲ್ಲಿ ಎರಡನೇ ರಾಕ್ಷಸ ಜೀವಿಯನ್ನು ಸೃಷ್ಟಿಸಲು ಕಾರ್ಯೋನ್ಮುಖನಾದೆ. ನಾನು ಕೋಪದಲ್ಲಿ ತಲ್ಲೀನನಾಗಿದ್ದಂತೆ ಒಂದು ರಾತ್ರಿ ಕಿಟಕಿ ಕಡೆ ಕತ್ತೆತ್ತಿ ನೋಡಿದಾಗ ಬೆಳದಿಂಗಳ ಬೆಳಕಿನಲ್ಲಿ ಆ ಪಿಶಾಚಿಯ ದರ್ಶನವಾಯಿತು. ನನ್ನ ಕಡೆಯೇ ಅವನು ದುರುಗುಟ್ಟಿ ನೋಡುವಾಗ ಆ ವಿಕಾರ ನಗೆ ಇನ್ನೂ ವಿಕಾರವಾಗಿ ಗೋಚರಿಸಿತು. ಈ ಬಗೆಯಲ್ಲಿ ಇನ್ನೊಂದು ರಾಕ್ಷಸ ಜೀವಿಯನ್ನು ಸೃಷ್ಟಿ ಮಾಡಲು ಮುಂದಾಗಿರುವ ನನ್ನ ರೀತಿಗೆ ನಾನೇ ಅಸಹ್ಯಪಟ್ಟುಕೊಂಡೆ. ಕಂಪಿಸುತ್ತಾ, ನಾನು ಅರ್ಧಮರ್ಧ ತಯಾರು ಮಾಡಿದ್ದ ಆ ವಸ್ತುವನ್ನು ಜಜ್ಜಿ ಪುಡಿಪುಡಿ ಮಾಡಿಬಿಟ್ಟೆ. ತನ್ನ ಸುಖ ಸಾಧನೆಯಾಯಿತೆಂದು ಒಡನಾಡಿಯ ಸೃಷ್ಟಿಯನ್ನು ಗಮನಿಸುತ್ತಿದ್ದ ಕಿಟಕಿ ಬಳಿಯ ಪಿಶಾಚಿ ನಾನು ಕೈಯಲ್ಲಿ ಹಿಡಿದಿದ್ದನ್ನು ಅರ್ಧಕ್ಕೇ ಭಗ್ನಗೊಳಿಸುವುದನ್ನು ಕಂಡು ಚೀರುತ್ತಾ ನನ್ನ ಮೇಲೆ ಸೇಡು ತೀರಿಸಿಕೊಳ್ಳುವುದಾಗಿ ಪ್ರತಿಜ್ಞೆ ಮಾಡುತ್ತಾ ಓಡಿ ಹೋಯಿತು. "ನೆನಪಿಡು" ಅದು ಕೂಗಿತು, "ನಿನ್ನ ಮದುವೆಯ ರಾತ್ರಿ ನಾನು ನಿನ್ನ ಬಳಿ ಇರುತ್ತೇನೆ."

ನನ್ನ ಬಾಲ್ಯಕಾಲದ ಗೆಳತಿಯಾದ ಎಲಿಜಬೆತ್‌ಳನ್ನೇ ಮದುವೆಯಾಗಬೇಕೆಂದು ನಾನು ಎಂದೊ ಲೆಕ್ಕಹಾಕಿದ್ದೆ, ಅವಳೂ ಸಹ ನನ್ನನ್ನೇ ಮದುವೆಯಾಗುವುದಾಗಿ ವ್ರತ ಹಿಡಿದಿದ್ದಳು. ನನ್ನ ಮದುವೆಯ ದಿನವಂತೂ ಬಂದಿತು, ಆದರೆ ನನ್ನ ದಿಗಿಲು ಇಮ್ಮಡಿಯಾಗಿತ್ತು. ಆ ರಾಕ್ಷಸ ಹೇಳಿದ್ದ ಮಾತುಗಳನ್ನು ಮರೆಯಲು ನನ್ನಿಂದ ಆಗಲಿಲ್ಲ, "ನಿನ್ನ ಲಗ್ನದ ರಾತ್ರಿ ನಾನು ನಿನ್ನೊಡನೆ ಇರುತ್ತೇನೆ." ನಾನು ಚಿಂತಾ

ಶಾಂತನಾಗಿರುವುದು ಎಲಿಜಬೆತ್‌ಳ ಗಮನಕ್ಕೆ ಬಂದಿತಾದರೂ ನನ್ನ ದುಗುಡಕ್ಕೆ ಏನು ಕಾರಣವೆಂದು ನಾನು ಅವಳಿಗೆ ಹೇಳುವ ಪರಿಸ್ಥಿತಿಯಲ್ಲಿ ಇರಲಿಲ್ಲ. ನನ್ನನ್ನು ಹರ್ಷಚಿತ್ತನನ್ನಾಗಿಸಲು ಅವಳು ಏನೆಲ್ಲಾ ಪ್ರಯತ್ನಪಟ್ಟಳು, ನಾವು ಬಹುದಿನಗಳಿಂದ ಬಯಸಿದ್ದ ಸುಖವು ಪ್ರಾಪ್ತಿಯಾಗುವ ಸಮಯ ಬಂದಿರುವುದಾಗಿಯೂ ನನಗೆ ತಿಳಿಯ ಹೇಳಿದಳು.

ಆದರೆ ನಮ್ಮ ಮದುವೆಯ ರಾತ್ರಿ ನಾನು ಆರಾಮವಾಗಿ ಇರಲಾರದೆ ಹೋದೆ. ಮಂಚದ ಮೇಲೆ ಎಲಿಜಬೆತ್ ಮಲಗಿರುವ ಸಮಯದಲ್ಲಿ ನಾನು ಹಾಸಿಗೆಯಿಂದೆದ್ದು ಕೈಯ್ಯಲ್ಲಿ ಪಿಸ್ತೂಲು ಹಿಡಿದು ನಾನು ಸೃಷ್ಟಿಸಿದ್ದ ಆ ಪಿಶಾಚಿಯನ್ನು ಎದುರಿಸಲು ಶತಪಥ ಇಕ್ಕತೊಡಗಿದೆ. ಇದ್ದಕ್ಕಿದ್ದಂತೆಯೇ ಎಲಿಜಬೆತ್ ಚೀರಿದ್ದು ಕೇಳಿಸಿತು. ಮಲಗುವ ಕೋಣೆಯತ್ತ ಧಾವಿಸಿ ನೋಡಲಾಗಿ ಅವಳು ಜೀವವಿಲ್ಲದೆ, ನಿಶ್ಚೇಷ್ಟಿತಳಾಗಿ ಮಂಚದ ಮೇಲೆ ಅರ್ಧ ಶರೀರ, ಕೆಳಗೆ ತೂಗಾಡುತ್ತ ಮುಕ್ಕಾಲು ಮುಖ ಇಳಿಬಿದ್ದ ತಲೆಗೂದಲಿಂದ ಮುಚ್ಚಿಹೋಗಿತ್ತು. ಕಿಟಕಿಯ ಬಳಿ ಆ ಪಿಶಾಚಿ ನಿಂತಿದ್ದದ್ದು ಕಂಡಿತು, ಕ್ರೂರವಾಗಿ ಹಲ್ಲು ಕಿರಿಯುತ್ತಾ ಎಲಿಜಬೆತ್‌ಳ ಶವದ ಕಡೆ ಬೆರಳು ಮಾಡಿ ತೋರಿಸುತ್ತಿತ್ತು. ಪಿಸ್ತೂಲಿನ ಕುದುರೆ ಅಮುಕಿದೆ, ಆದರೆ ಪಿಶಾಚಿ ಪರಾರಿಯಾಯಿತು.

ಆ ದಿನದಿಂದ ನಾನು ಜನ್ಮಕೊಟ್ಟ ಆ ರಾಕ್ಷಸ ಶಕ್ತಿಯನ್ನು ಕೊನೆಗಾಣಿಸಲು ಜಗತ್ತಿನಾದ್ಯಂತ ಅಲೆದಾಡುತ್ತಿದ್ದೇನೆ. ನನಗಿಂತಲೂ ಯಾವಾಗಲೂ ಅವನು ಒಂದು ಹೆಜ್ಜೆ ಮುಂದು. ನನ್ನನ್ನು ಅಣಕಿಸಿ ಕರೆಯುತ್ತಾ, ನಾನು ಹಿಡಿಯಲು ಹೋದರೆ ಸಿಕ್ಕದೆ ನನ್ನ ಸೋಲನ್ನು ಕಂಡು ಗಹಗಹಿಸುತ್ತಾ ಸಾಗಿದ್ದಾನೆ. ಆದರೆ ಒಂದಲ್ಲಾ ಒಂದು ದಿನ ನಾನು ಅವನನ್ನು ಹಿಡಿಯುವುದೇ ಸಿದ್ಧ, ಆವಾಗ ಅವನು ಏನು ಸಬೂಬು ಹೇಳಿದರೂ ಬಿಡಲಾರೆ. ವಿಲಿಯಂ ಮತ್ತು ಎಲಿಜಬೆತ್‌ರ ಹೆಸರುಗಳನ್ನು ಹೇಳುತ್ತಾ ಅವನ ಕಿಬ್ಬದಿಗೆ ಖಡ್ಗವನ್ನು ಇಳಿಸುವುದು ಶತಸಿದ್ಧ.

ನಮ್ಮ ಮತ್ಸರ ಭಾವನೆಗಳನ್ನು ಎಷ್ಟು ಬೇಗ ಬಿಟ್ಟುಕೊಟ್ಟರೂ ಒಳ್ಳೆಯದೆ. ಅದು ಹೃದಯದಲ್ಲಿರುವವರೆಗೂ ಉಕ್ಕುತ್ತಿರುವ ಅನ್ನದ ತಿಳಿನೀರಿನಂತೆ ಹೃದಯದಲ್ಲಿ ತುಂಬಿ ತುಳುಕುತ್ತಲೇ ಇರುತ್ತದೆ.

—ಥೋರೊ

ಬೀದಿ ಮಕ್ಕಳು

ಟಿ. ಆರ್. ನಾಗಪ್ಪ

ತಂದೆ ತಾಯಂದಿರು ಇಲ್ಲದವರು ; ಇದ್ದರೂ ಹೆಸರಿಗೆ ಮಾತ್ರ. ಅನಾಥರು, ದೇವರ ಮಕ್ಕಳು. ಈ ಮಕ್ಕಳಿಗೆ ನೆಲವೇ ಹಾಸಿಗೆ, ಆಕಾಶವೇ ಹೊದ್ದಿಕೆ.

ಭಾರತದ ಕೆಲವು ಕಡೆಗಳಲ್ಲಿ ಹಸಿರು ತೋರಣ ಕಟ್ಟಿದ ಮನೆಗಳು ಈ ಮಕ್ಕಳಿಗೆ ಅತಿಥೇಯರು ಇದ್ದಂತೆ. ಆ ಮನೆಗಳಿಂದ ಹೊರಕ್ಕೆ ಎಸೆದ ಎಂಜಲೆಲೆಯಲ್ಲಿ ಉಳಿದ ಆಹಾರ ದೇವರ ಮಕ್ಕಳಿಗೆ ಮೃಷ್ಟಾನ್ನ.

ಈಚೆಗೆ ಇಂತಹ ಮಕ್ಕಳ ಕಸಬು ಕಸದ ತೊಟ್ಟಿಯಲ್ಲಿ ಬಿದ್ದಿರುವ ರದ್ದಿ ಕಾಗದ ಸಂಗ್ರಹಿಸುವುದು. ಹರಿದ ಒಂದು ಗೋಣಿಯ ಚೀಲ ಅವರ ಮೂಲ ಬಂಡವಾಳ. ಅದರಲ್ಲಿ ಸಂಗ್ರಹಿಸಿದ ಚೂರುಪಾರು ಕಾಗದದ ಬೆಲೆ ಕೆ.ಜಿ ಗೆ ನಲವತ್ತು ಪೈಸೆ. ಈ ಅಲ್ಪ ಸಂಪಾದನೆಯಿಂದ ಅವರು ಹೊಟ್ಟೆ ಹೊರೆಯಬೇಕು. ಇದು ದೇವರ ಮಕ್ಕಳ–ರಸ್ತೆ ಮಕ್ಕಳ ಪರಿಸ್ಥಿತಿ. ಇದು ಭಾರತಕ್ಕೆ ಮಾತ್ರ ಸೀಮಿತವಲ್ಲ.

ಇಂತಹ ದೇವರ ಮಕ್ಕಳ ಸಂಖ್ಯೆ ಬ್ರೆಜಿಲ್‌ನಲ್ಲಿ ಹೆಚ್ಚು–ಏಳು ಮಿಲಿಯನ್. ಬ್ರೆಜಿಲ್ ದಕ್ಷಿಣ ಅಮೆರಿಕದ ಅಭಿವೃದ್ಧಿಶೀಲ ದೇಶ. ಕಾಫಿ ಬೀಜವನ್ನು ಇಲ್ಲಿ ಹೇರಳವಾಗಿ ಬೆಳೆಯುವರು. ಒಂದು ವರ್ಷ ಕಾಫಿ ಬೆಳೆ ಸಮೃದ್ಧಿ ಆಯಿತು. ಆದರಿಂದ ಬೆಲೆ ಇಳಿಯಿತು. ಆಗ ಅದನ್ನೇ ರೈಲ್ವೆ ಇಂಜನ್ನಿಗೆ ಕಲ್ಲಿದ್ದಲಿಗೆ ಬದಲಾಗಿ ಉಪಯೋಗಿಸಿದರಂತೆ. ಪ್ರೌಢಶಾಲೆಯಲ್ಲಿ ನಮ್ಮ ಭೂಗೋಳದ ಉಪಾಧ್ಯಾಯರು ಹೇಳಿದ ವಿಷಯ ಇದು.

ಆಗಲೇ ಹೇಳಿದಂತೆ ಬ್ರೆಜಿಲ್‌ನಲ್ಲಿ ರಸ್ತೆ ಮಕ್ಕಳ ಸಂಖ್ಯೆ ಹೆಚ್ಚು. ಇವರು ೯–೧೦ ವಯಸ್ಸಿನವರು. ಹದಿಹರೆಯದ ವಯಸ್ಸಿನ ಮಕ್ಕಳು ಇವರ ಪೈಕಿ ಸೇರಿರುವರು. ಅವರ ಪೈಕಿ ಶೇಕಡ ೧೫ ಮಂದಿ ಲೈಂಗಿಕ ರೋಗಗಳಿಗೆ ತುತ್ತಾಗಿರುವರು.

ಈ ಮಕ್ಕಳು ಬಡ ಸಂಸಾರದಿಂದ ಬಂದವರು. ಅನೇಕರು ತಂದೆ ತಾಯಿ ಇಲ್ಲದವರು. ಕೆಲವರಿಗೆ ತಾಯಿ ಒಬ್ಬಳೇ ಗತಿ. ಕೆಲವರು ಹದಿಹರೆಯದ ಯುವತಿಯರ ಹೊಟ್ಟೆಯಲ್ಲಿ ಹುಟ್ಟಿದವರು. ಅವರ ಹೆರಿಗೆ ರಸ್ತೆ ಬದಿಯಲ್ಲಿ! ಅದಕ್ಕೇ ಅವರನ್ನು ರಸ್ತೆ ಮಕ್ಕಳು ಅಥವಾ ಬೀದಿ ಮಕ್ಕಳು ಎಂದು ಕರೆಯುವರು. ದಿಕ್ಕಿಲ್ಲದವರಿಗೆ ದೇವರೇ ಗತಿ. ಕಲಿಯುಗದಲ್ಲಿ ದೇವರು ಅಷ್ಟು ಸುಲಭವಾಗಿ ಒಲಿಯುವನೆ? ಧೃವ ದೇವರನ್ನು ಒಲಿಸಿಕೊಳ್ಳಲು ಸಾವಿರಾರು ವರ್ಷ ತಪಸ್ಸು ಮಾಡಿದನಂತೆ. ತಪಸ್ಸು ಮಾಡುವಾಗ ಕಡೆಯಲ್ಲಿ ನಿರಾಹಾರ. ಈ ತೆರನಾದ ಪುರಾಣಕಥೆಗಳು ನಮ್ಮ ಮಕ್ಕ

ಳಿಗೂ ಗೊತ್ತಿದೆ. ನಮ್ಮ ಮಕ್ಕಳು ಹೀಗೆ ತಪಸ್ಸು ಮಾಡಲು ಶುರು ಮಾಡಿದರೆ? ಆದರೆ ಈಗ ನೂರು ವರ್ಷಕ್ಕಿಂತ ಹೆಚ್ಚಾಗಿ ಬದುಕಲು ಸಾಧ್ಯವಿಲ್ಲ. ಆದ್ದರಿಂದ ದೇವರನ್ನು ಒಲಿಸಿಕೊಳ್ಳಲು ಒಂದು ಜನ್ಮ ಸಾಲದು ಎಂಬ ಅಂಶ ಅನೇಕ ಮಕ್ಕಳಿಗೆ ತಿಳಿದಿರಬೇಕು.

ಗಂಡುಮಕ್ಕಳು ಏನಾದರೂ ಕೆಲಸ ಮಾಡಿ ಹೊಟ್ಟೆ ಹೊರೆಯುವರು. ಬ್ರೆಜಿಲ್‌ನಲ್ಲಿ ಅನೇಕ ಮಕ್ಕಳು ಕಾರು ತೊಳೆಯುವುದು, ಬೂಡ್ಸ್ ಪಾಲಿಷ್ ಮಾಡುವುದು ಮುಂತಾದ ಕೆಲಸ ಮಾಡುವರು. ಈ ಕೆಲಸಗಳಿಂದ ಹೊಟ್ಟೆ ಹೊರೆಯುವರು. ಇವರ ಪೈಕಿ ಕೆಲವರು ಸಲಿಂಗ ಕಾಮಕ್ಕೆ ಬಲಿಯಾಗಿರುವುದೂ ಉಂಟು. ಅವರಿಗೆ ತಮ್ಮದೇ ಆದ ಗುಪ್ತ ಭಾಷೆ ಇದೆಯಂತೆ. ತಮ್ಮ ವೃತ್ತಿಯವರೊಂದಿಗೆ ಈ ಗೋಪ್ಯ ಭಾಷೆ ಬಳಸುವರು.

ಎಲ್ಲಾರೂ ಮಾಡುವುದು ಹೊಟ್ಟೆಗಾಗಿ ಅಲ್ಲವೆ? ಹಸಿದ ಹೊಟ್ಟೆಗೆ ಒಂದು ಚೂರು ಬ್ರೆಡ್ ಸಿಗದಿದ್ದರೆ ಹೇಗೆ? ಅದಕ್ಕಾಗಿ ಹದಿಹರೆಯದ ವಯಸ್ಸಿನ ಹೆಣ್ಣುಮಕ್ಕಳು ತಮ್ಮ ದೇಹ ಮಾರಿಕೊಳ್ಳುವುದೂ ಉಂಟು.

ಬ್ರೆಜಿಲ್ ರಾಜಧಾನಿ ರಿಯೋಡಿಜನೈರೊ. ಅಲ್ಲಿ ಮಕ್ಕಳು ಮಾದಕ ಪದಾರ್ಥಗಳ ಮಾರಾಟದಲ್ಲಿ ತೊಡಗಿರುವರು. ಅವರಲ್ಲಿ ಅನೇಕರು ಪೊಲೀಸರ ಮತ್ತು ಮಾದಕ ವ್ಯಾಪಾರಿಗಳ ಮಧ್ಯೆ ಏಜೆಂಟರು.

ಬೆಳೆವ ಪೈರನ್ನು ಮೊಳಕೆಯಲ್ಲಿ ನೋಡು ಎಂಬ ಗಾದೆ ಇದೆ. ಅದರಂತೆ ಮಕ್ಕಳ ಭವಿಷ್ಯ ಬಾಲ್ಯದಲ್ಲೇ ತಿಳಿಯುವುದು. ಅವರು ಸನ್ಮಾರ್ಗ ಬಿಟ್ಟು ದುರ್ಮಾರ್ಗಕ್ಕೆ ಇಳಿದಲ್ಲಿ? ಆದರಿಂದ ಅವರನ್ನು ದುಷ್ಕೃತ್ಯಗಳಿಂದ ದೂರ ಇಡುವುದು ಅಗತ್ಯ. ಮೇಲಾಗಿ ಅವರನ್ನು ಸನ್ಮಾರ್ಗಕ್ಕೆ ಎಳೆದು ತರತಕ್ಕದ್ದು. ಇದು ಮೊದಲಾಗಿ ತಂದೆತಾಯಿಂದಿರಿಂದ ಪ್ರಾರಂಭವಾಗಬೇಕು.ಅವರು ಮಾಡದಿದ್ದರೆ?ಬ್ರೆಜಿಲ್‌ನಲ್ಲಿ ಅನೇಕ ಖಾಸಗಿ ಸಂಸ್ಥೆಗಳು, ಸಮಾಜ ಸೇವಾ ಕಾರ್ಯಕರ್ತರು, ವಿದ್ಯಾವಂತರು ಮುಂತಾದವರು ಈ ದಿಸೆಯಲ್ಲಿ ಗಮನ ಹರಿಸಿರುವರು. ಅದಕ್ಕೆ ೧೯೮೭ರಲ್ಲಿ ಒಂದು ಸಂಘ ರಚನೆ ಆಯಿತು. ಆ ಸಂಘ ಮಕ್ಕಳಿಗೆ ಪ್ರತ್ಯೇಕ ತರಬೇತಿ ಶಿಬಿರಗಳನ್ನು ತೆರೆಯಿತು. ಅಲ್ಲಿ ಅವರಿಗೆ ಸಮಸ್ಯೆಯ ಭೀಕರತೆಯನ್ನು ಮತ್ತು ದುಷ್ಪರಿಣಾಮವನ್ನು ವಿವರಿಸುತ್ತಿದ್ದರು. ಇಷ್ಟಕ್ಕೆ ಮುಗಿಯಬಾರದು. ಅವರನ್ನು ಸತತವಾಗಿ ನೋಡಿಕೊಳ್ಳುತ್ತ ಅವರನ್ನು ಸರಿಯಾದ ಮಾರ್ಗದಲ್ಲಿ ಒಯ್ಯುವ ಪರಿಣಾಮಕಾರಿಯಾದ ಕೆಲಸ ನಡೆಯತಕ್ಕದ್ದು. ಬ್ರೆಜಿಲಿನ ದೇವರ ಮಕ್ಕಳ ಸಮಸ್ಯೆ ಅಗಾಧ. ಅದನ್ನು ಕೇವಲ ಕೆಲವೇ ಸ್ವಯಂ ಸೇವಾ ಸಂಸ್ಥೆಗಳು ಪರಿಹರಿಸಲಾರವು. ಅದರಿಂದ ಈ ಬಗ್ಗೆ ಸರಕಾರದ ಗಮನ ಸೆಳೆಯಲು ೧೯೯೦ರಲ್ಲಿ ಒಂದು ಕಾನೂನು ರಚನೆ ಆಯಿತು. ಉದ್ದೇಶ ಮಕ್ಕಳಿಗೆ ಆಹಾರ, ವಸತಿ ಮತ್ತು ವೈದ್ಯಕೀಯ ಸೌಲಭ್ಯವನ್ನು ಒದಗಿಸುವುದು. ಈ ಕಾನೂನಿನಿಂದ ಮಕ್ಕಳ ಪರಿಸ್ಥಿತಿ ಅಷ್ಟೇನೂ ಸುಧಾರಿಸಲಿಲ್ಲ. ಆದರೆ ದೇವರ ಮಕ್ಕಳ ರಕ್ಷಣೆಗೆ ಕಾನೂನಿನ ಬೆಂಬಲ ದೊರೆಯಿತು.

ದೇವರ ಮಕ್ಕಳ ಸಮಸ್ಯೆ ಅಭಿವೃದ್ಧಿಶೀಲ ರಾಷ್ಟ್ರಗಳ ಸಮಸ್ಯೆಯೇನೊ ಹೌದು. ಹಾಲಿ ಟಾನ್ಜೇನಿಯ ಮತ್ತು ಜಿಂಬಾಬ್ವೆ ದೇಶಗಳಲ್ಲಿ ಈ ಸಮಸ್ಯೆ ತಲೆದೋರಿದೆ. ಟಾನ್ಜೇ

ನಿಯಮದಲ್ಲಿ ಈ ಬಗ್ಗೆ ಚಿಂತನೆ ಶುರು ಆಗಿದೆ. ಜಿಂಬಾಬ್ವೆಯಲ್ಲಿ ಈ ತೆರನಾದ ಮಕ್ಕಳ ಸಂಖ್ಯೆ ಹತ್ತು ಸಾವಿರ. ಈ ಬಗ್ಗೆ ಒಂದು ಸರ್ವೇಕ್ಷಣೆ ನಡೆದಿದೆ. ಈ ಮಕ್ಕಳ ಪೈಕಿ ನೇಕಡ ಒಂದು ಭಾಗ ಮಕ್ಕಳು ಶಾಲೆಯ ಮುಖವನ್ನೇ ಕಂಡಿಲ್ಲ. ಉಳಿದವರು ಯಾವ ಹಂತದವರಿವಿಗೆ ಶಿಕ್ಷಣ ಪಡೆದಿರುವರು ಎಂಬ ಅಂಶವನ್ನು ಕೆಳಗೆ ಕೊಟ್ಟಿದೆ.

ಅ) ಏಳು ವರ್ಷದ ಶಿಕ್ಷಣ ಪಡೆದವರು ೩೧ %

ಆ) ಎರಡು ವರ್ಷದ ಮಾಧ್ಯಮ ಶಾಲಾ ಶಿಕ್ಷಣ ಪಡೆದವರು ೧೧ %

ಇ) ನಾಲ್ಕು ವರ್ಷದ ಪ್ರಾಥಮಿಕ ಶಾಲಾ ಶಿಕ್ಷಣ ಪಡೆದವರು ೫ %

ಶಾಲೆಗಳನ್ನು ಮಧ್ಯದಲ್ಲಿಯೇ ಬಿಡಲು ಪೋಷಕರ ಬಡತನ ಕಾರಣ. ಅವರು ತಮ್ಮ ಮಕ್ಕಳ ಶಿಕ್ಷಣದ ವೆಚ್ಚವನ್ನು ಭರಿಸಲಾರರು. ಕೆಲವರು ಶಾಲೆಗಳಿಗೆ ಸರಿಯಾಗಿ ಹೋಗುವುದಿಲ್ಲ. ಮತ್ತೆ ಕೆಲವರು ತಮ್ಮ ತಂದೆ ತಾಯಂದಿರ ನಡವಳಿಕೆಯನ್ನು ಸಹಿಸಲಾರದೆ ಮನೆಯಿಂದ ಹೊರ ಬಂದವರು. ಕೆಲವು ಮನೆಯಲ್ಲಿ ಮಕ್ಕಳು ಅಕ್ರಮ ಲೈಂಗಿಕ ವರ್ತನೆಗಳಿಗೆ ಬಲಿಯಾಗಲು ಒಪ್ಪದೆ ಮನೆಯಿಂದ ಓಡಿ ಬಂದವರು. ಇನ್ನು ಕೆಲವರು ಕುಡಿತ ಮತ್ತು ವ್ಯಭಿಚಾರಗಳಿಗೆ ಬಲಿಯಾಗಿರುವರು.

ಸರಕಾರ ಖಾಸಗಿ ಸಂಸ್ಥೆಗಳ ನೆರವು ಪಡೆದು ದುರ್ಮಾರ್ಗಕ್ಕೆ ಒಳಗಾದ ಮಕ್ಕಳನ್ನು ಪತ್ತೆ ಹಚ್ಚುವುದು. ಅಂತಹ ಮಕ್ಕಳು ಶಾಲೆಯನ್ನು ಮುಂದುವರಿಸಲು ಸರಕಾರ ನೆರವು ನೀಡಿತು. ಆದರೆ ಈ ವ್ಯವಸ್ಥೆ ಅಷ್ಟು ಪ್ರೋತ್ಸಾಹದಾಯಕವಾಗಲಿಲ್ಲ. ೧೯೯೩ನೆಯ ಸಾಲಿಗೆ ೮-೧೪ ವಯೋಮಿತಿಯ ಎಂಟು ಮಕ್ಕಳು ಮಾತ್ರ ಪುನಹ ಶಾಲೆಗಳಿಗೆ ಸೇರಿದರು. ಮಕ್ಕಳ ಜೀವನವನ್ನು ಸುಧಾರಿಸಲು ಜಿಂಬಾಬ್ವೆ ಸರಕಾರ ಅನೇಕ ತರಬೇತಿ ಕೇಂದ್ರಗಳನ್ನು ತೆರೆಯಿತು. ನಾರ್ತ್ ಕೋರ್ಟ್ ಸರಕಾರಿ ತರಬೇತಿ ಕೇಂದ್ರ ವ್ಯವಸಾಯ, ಕೋಳಿ ಸಾಕಣೆ, ತೋಟಗಾರಿಕೆ, ಹಂದಿ ಸಾಕಣೆ, ಮರಗೆಲಸ ಮುಂತಾದ ಕಸಬುಗಳಲ್ಲಿ ತರಬೇತಿ ವ್ಯವಸ್ಥೆ ಮಾಡಿತು. ಅನಂತರ ತರಬೇತಾದ ಮಕ್ಕಳು ಸ್ವಾವಲಂಬಿಗಳಾಗಿ ಉತ್ಪಾದನಾ ಕಾರ್ಯದಲ್ಲಿ ತೊಡಗುವಂತೆ ಸರಕಾರ ಪ್ರೋತ್ಸಾಹಿಸುವುದು.

೧೯೮೭ರಲ್ಲಿ ಹರಾರೆಯಲ್ಲಿ ಚರ್ಚ್ ತರಬೇತಿ ಕೇಂದ್ರ ಒಂದನ್ನು ತೆರೆಯಿತು. ಅಲ್ಲಿ ಚರ್ಮ ಹದಮಾಡುವುದು ಮತ್ತು ಆಭರಣ ತಯಾರಿಕೆಯಲ್ಲಿ ತರಬೇತಿ ದೊರೆಯುವುದು. ಬೊಂಬಿನಿಂದ ತಟ್ಟೆ, ಬಟ್ಟಲು, ಲೋಟ ತಯಾರಿಕೆ, ಪೋಸ್ಟ್‌ಕಾರ್ಡ್ ವಿನ್ಯಾಸ—ಇವುಗಳಲ್ಲಿ ತರಬೇತಿ ದೊರೆಯುವುದು. ಅನಂತರ ಅವರು ತಮ್ಮ ಕಾಲಿನ ಮೇಲೆ ನಿಂತು ಉತ್ಪಾದನೆ ಕೈಗೊಳ್ಳಲು ಉತ್ತೇಜನ ನೀಡುವರು.

೧೯೯೨ರ ಸೆಪ್ಟೆಂಬರಿನಲ್ಲಿ ಇಂತಹ ಮಕ್ಕಳ ಆರೋಗ್ಯ ಪರೀಕ್ಷೆ ನಡೆಯಿತು. ಅನೇಕ ಮಕ್ಕಳು ಕ್ಷಯ, ಕಜ್ಜಿ ಮತ್ತು ಅಪೌಷ್ಟಿಕತೆಯಿಂದ ನರಳುತ್ತಿರುವುದಾಗಿ ತಿಳಿದು ಬಂದಿತು. ಅಂತಹ ಮಕ್ಕಳಿಗೆ ವಸತಿ ವ್ಯವಸ್ಥೆ ಆಯಿತು. ಅಲ್ಲಿ ಆಹಾರ ಮತ್ತು ವೈದ್ಯಕೀಯ ಚಿಕಿತ್ಸೆ ಏರ್ಪಾಡಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ಮಕ್ಕಳ ಜ್ಞಾನಾಭಿವೃದ್ಧಿಗೆ ನೆರವು ದೊರೆಯಿತು.

ದೇವರ ಮಕ್ಕಳು ಬಹುತೇಕ ಅಪರಾಧಿಗಳ ಗುಂಪಿಗೆ ಸೇರಿದವರು ಎಂಬ ತಪ್ಪು ಕಲ್ಪನೆ ಇದೆ. ಇದು ಸರಿಯಲ್ಲ. ಕೆಲವರು ಸ್ವಾವಲಂಬಗಳಾಗಿ ದುಡಿಯುತ್ತಿರುವರು. ಸಿಹಿತಿಂಡಿ, ತರಕಾರಿ, ಹಣ್ಣು ಮುಂತಾದ ಪದಾರ್ಥಗಳನ್ನು ದಿನಗೂಲಿಯ ಮೇಲೆ ಮಾರುವರು. ಈ ತೆರನಾದ ದುಡಿಮೆಯಿಂದ ಸಂಸಾರಕ್ಕೆ ನೆರವು ದೊರೆಯುವುದು. ಮನೆಯಿಲ್ಲದವರು ಮಾದಕ ಪದಾರ್ಥಗಳ ಬಳಕೆಗೆ ಒಳಗಾಗಿ ಹಣ ಪೋಲುಮಾಡುವರು.

ಕೆಲವರು ಅಂಗಡಿಗಳಲ್ಲಿ ಪೊಟ್ಟಣ ಕಟ್ಟುವುದು ಮುಂತಾದ ಕಸಬುಗಳಲ್ಲಿ ತೊಡಗಿರುವರು.ಅವರ ವರಮಾನ ವಾರಕ್ಕೆ ತೊಂಬತ್ತು ಜಿಂಬಾಬ್ವೆ ಡಾಲರು. ಕೆಲವರು ಟ್ಯಾಕ್ಸಿಗೆ ಪ್ರವಾಸಿಗರನ್ನು ಹೊಂಚಿ ದಿನಕ್ಕೆ ಹದಿನೈದು ಡಾಲರು ಸಂಪಾದಿಸುವರು.

ಹಲವು ಮಕ್ಕಳು ಜೇಬುಗಳ್ಳರು. ಮತ್ತೆ ಕೆಲವರು ಮನೆಗಳ್ಳತನ ಮುಂತಾದ ಕೆಟ್ಟ ಕೆಲಸಗಳಲ್ಲಿ ತೊಡಗಿರುವರು.

ಜಿಂಬಾಬ್ವೆ ವಿಶ್ವವಿದಾಲಯದ ಇಬ್ಬರು ಉಪನ್ಯಾಸಕರು ನಡೆಸಿದ ಸರ್ವೇಕ್ಷಣೆಯ ಪ್ರಕಾರ ಸೇಕಡ ೧೪ ಮಂದಿ ಹಿರಿಯ ಮಕ್ಕಳು ಕುಡಿತ ಮುಂತಾದ ದುಶ್ಚಟಗಳಲ್ಲಿ ನಿರತರು. ಚಿಕ್ಕಮಕ್ಕಳು ಗ್ಲೂ ಸೇವಿಸುವರು.

ಇಂಡೆಕ್ಸ್ ಎಂಬ ನಿಯತ ಕಾಲಿಕದಲ್ಲಿ ವರದಿ ಆಗಿರುವಂತೆ ಹದಿನೈದು ವರ್ಷದ ಪ್ರತಿ ಐದು ಮಕ್ಕಳ ಪೈಕಿ ಇಬ್ಬರು ಲೈಂಗಿಕ ದುಶ್ಚಟಗಳಲ್ಲಿ ತೊಡಗಿರುವರು ಈ ತೆರನಾದ ದುಶ್ಚಟಗಳಲ್ಲಿ ನಿರತರಾಗಿರುವವರು ವಿವಿಧ ವರ್ಗಕ್ಕೆ ಸೇರಿದವರು—ವ್ಯಾಪಾರಿಗಳು, ವಿವಿಧ ತೆರನಾದ ಉದ್ಯೋಗಿಗಳು. ಸಾಂಪ್ರದಾಯಿಕ ವೈದ್ಯರು ಮತ್ತು ಹಿರಿಯ ಅನಾಥಮಕ್ಕಳು. ಹೀಗಾಗಲು ಕಾರಣ ಏನು? ಈ ಸಮಸ್ಯೆಗೆ ಪರಿಹಾರ ಏನು? ಎಂಬುದನ್ನು ತಿಳಿಯಲು ಸಾಕಷ್ಟು ಸಂಶೋಧನೆಗಳು ನಡೆದಿದೆ.

ಸ್ಯಾಮ್‌ಮಾನ್ಯುಯಲ್. ವಯಸ್ಸು ೧೨. ಅವನ ದೈನಂದಿನ ಚಟುವಟಿಕೆ ಬೆಳಗ್ಗೆ ಐದು ಗಂಟೆಗೆ ಪ್ರಾರಂಭ. ಹೊಟೇಲಿನ ಕಸದ ತೊಟ್ಟಿಯಲ್ಲಿ ಬಿದ್ದಿರುವ ಎಂಜಲನ್ನು ಆರಿಸಿ ತಿನ್ನುವುದು. ಇದರಿಂದ ಅವನ ದೈನಂದಿನ ಕಾರ್ಯ ಚಟುವಟಿಕೆ ಪ್ರಾರಂಭ. ಅವನ ಹಿನ್ನೆಲೆ ಯಾರಿಗಾದರೂ ಕನಿಕರ ಉಂಟುಮಾಡದೆ ಇರದು. ಅವನ ತಂದೆ ತಾಯಂದಿರು ಮೊಜಾಂಬಿಕ್ ಯುದ್ಧದಲ್ಲಿ ಮಡಿದರು. ಅನಂತರ ಅವನು ವಿಧಿಯಿಲ್ಲದೆ ಜಿಂಬಾಬ್ವೆಗೆ ಬಂದನು. ಅಲ್ಲಿ ಅವನು ಅನೇಕ ದಿನ ಹಸಿದ ಹೊಟ್ಟೆಯಲ್ಲಿ ಮಲಗುತ್ತಿದ್ದನು. ಒಂದು ರೀತಿಯಲ್ಲಿ ಅವನ ಅದೃಷ್ಟ ಖುಲಾಯಿಸಿತು. ಕೆಲವರು ಮಧ್ಯಹ್ನ ಊಟಮಾಡಿ ಉಳಿದಿದ್ದನ್ನು ಅವನಿಗೆ. ನೀಡುವರು. ಅದೇ ಅವನ ಮಧ್ಯಾಹ್ನದ ಭೋಜನ.

ಶಾಲೆ ಸೇರಿ ಓದಲು ಅವನಿಗೆ ಇಚ್ಛೆ. ರಸ್ತೆಯಲ್ಲಿ ನಿಲ್ಲಿಸಿರುವ ಕಾರನ್ನು ಕಾಯುವುದು ಅವನ ಕೆಲಸ. ಅದರಿಂದ ಅವನ ಸಂಪಾದನೆ ಹತ್ತು ಡಾಲರು. ಶಾಲೆಯ ವೆಚ್ಚವನ್ನು ಸರಿತೂಗಿಸಲು ಅವನ ಸಂಪಾದನೆ ಸಾಲದು. ಅವನಿಗೆ ನೆರವು ನೀಡುವ ಇಲಾಖೆಯ ಬಗ್ಗೆ ಅರಿವಿಲ್ಲ.

ಅನೇಕ ಮಕ್ಕಳು ಶಾಲೆಗೆ ಹೋಗುವುದಿಲ್ಲ. ಕಾರಣ, ಅವರ ತಂದೆ ತಾಯಂದಿರಿಗೆ ಮಕ್ಕಳನ್ನು ಶಾಲೆಗೆ ಕಳುಹಿಸಲು ಹಣವಿಲ್ಲ. ಮೊದಲನೆಯದಾಗಿ ಅವರು ನಿರುದ್ಯೋಗಿ

ಗಳು. ಎರಡನೆಯದಾಗಿ, ಮಕ್ಕಳ ಶಿಕ್ಷಣಕ್ಕೆ ಸರಕಾರದಿಂದ ದೊರೆಯುವ ನೆರವಿನ ಮಾಹಿತಿ ಅವರ ಕಿವಿಗೆ ಬಿದ್ದಿಲ್ಲ. ಮೂರನೆಯದಾಗಿ ಅವರ ಸಂಪಾದನೆ ಶಿಕ್ಷಣದ ವೆಚ್ಚವನ್ನು ಸರಿತೂಗಿಸಲು ಸಾಲದು.

ಸಿಬನ್‌ಗಿಲಿ ಮುಂಗಯಾನಿ. ವಯಸ್ಸು ೧೩. ಚರ್ಚಿನಿಂದ ನೀಡುವ ಆಹಾರ ಅವಳಿಗೆ ತೃಪ್ತಿ. ಅಲ್ಲಿಂದ ನೀಡುವ ಬ್ರೆಡ್ ಮತ್ತು ಸ್ವಲ್ಪ ತರಕಾರಿ ಅವಳಿಗೆ ಸಾಕು. ಅದನ್ನು ತಿನ್ನುತ್ತಿದ್ದಾಗ ಅವಳಿಗೆ ಹಾಕಿದ ಪ್ರಶ್ನೆ ರುಚಿಸಲಿಲ್ಲ. ಅವಳ ತಂದೆಗೆ ಐದು ಮಕ್ಕಳು. ಇವಳು ೬ನೆಯ ತರಗತಿಯಲ್ಲಿ ಓದುವಳು. ತಂದೆ ತಾಯಂದಿರ ಜೀವನ ಪ್ಲಾಸ್ಟಿಕ್ಸ್ ಚೀಲದ ಮಾರಾಟದಿಂದ. ಈ ಅಲ್ಪಸಂಪಾದನೆಯಿಂದ ಮಕ್ಕಳ ಶಿಕ್ಷಣದ ಖರ್ಚನ್ನು ಭರಿಸಲು ಹೇಗೆ ಸಾಧ್ಯ? ಶಿಕ್ಷಣಕ್ಕೆ ನೆರವು ನೀಡುತ್ತಿದ್ದ ಸಮಾಜ ಕಲ್ಯಾಣ ಇಲಾಖೆಯನ್ನು ವಿಚಾರಿಸಿದಾಗ ಅದು ಒಂದುಬಾರಿ ಹತ್ತು ಕೆ.ಜಿ. ಜೋಳದ ಹಿಟ್ಟನ್ನು ಮಾತ್ರ ನೀಡಿತು. ಅಷ್ಟು ವಿನಹ ಇನ್ನಿತರ ಯಾವ ಸಹಾಯವೂ ದೊರೆಯಲಿಲ್ಲ.

ನಿರುದ್ಯೋಗ ಸಮಸ್ಯೆಯ ಪರಿಣಾಮವಾಗಿ ಅನೇಕ ಮಕ್ಕಳು ಹೊಲಮನೆಯಲ್ಲಿ ಶಾಲೆಯ ನಂತರ ಕೆಲಸ ಮಾಡುವುವು. ಹದಿನಾರು ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ಸೇರಿಸಿಕೊಳ್ಳಲು ತಡೆ ಹಾಕಿರುವ ಕಾನೂನು ಕಡತದಲ್ಲೇ ಉಳಿದಿದೆ.

ಫ್ಯಾನಿಯ ಮಾರ ಎಂ. ವಯಸ್ಸು ೧೩. ವಾರದಲ್ಲಿ ಐದು ದಿವಸ ಮನೆಗೆಲಸ ಮಾಡುವಳು. ಪ್ರತಿದಿನ ಬೆಳಗಿನ ಒಪ್ಪತ್ತು ಮಾತ್ರ ಕೆಲಸ. ಅವಳ ಸಂಪಾದನೆ ತಿಂಗಳಿಗೆ ಒಂದು ನೂರು ಡಾಲರು. ಅವಳ ಮನೆಯಲ್ಲಿ ೫ ಮಂದಿ. ಅವಳು ದಿನದ ಕೆಲಸದ ನಂತರ ತರಕಾರಿ ಮಾರುವಳು. ಇಲ್ಲವೆ ಭಿಕ್ಷೆ ಬೇಡುವಳು. ಇದೆಲ್ಲಾ ಏಕೆ? ಅವಳ ತಂದೆ ಇತ್ತೀಚೆಗೆ ಕೆಲಸದಿಂದ ವಜಾ ಆದನು. ಅದರಿಂದ ಅವಳು ವಿಧಿಯಿಲ್ಲದೆ ಸಂಸಾರಕ್ಕೆ ನೆರವು ನೀಡಲು ದುಡಿಯಬೇಕಾಯಿತು. ಇದೇ ರೀತಿ ಬಹುಮಂದಿ ಮಕ್ಕಳು ಹೊಲಮನೆಗಳಲ್ಲಿ ಕೆಲಸ ಮಾಡುವರು. ಕಳೆ ಕೀಳುವುದು, ಹತ್ತಿ ಆಯ್ಕೆ, ಗಿಡಗಳಿಗೆ ಕ್ರಿಮಿನಾಶಕ ಔಷಧಿ ಹೊಡೆಯುವುದು ಅವರ ಕೆಲಸ.

ಗೌರಿಕಾಯಿ ಸಂಸಾರಕ್ಕೆ ಸಹಾಯ ಮಾಡಲು ವಾರದಲ್ಲಿ ಮೂರು ದಿವಸ ಕೆಲಸ ಮಾಡುವಳು. ಅದರಿಂದ ಅವಳಿಗೆ ದೊರೆಯುವ ಹಣ ತಿಂಗಳಿಗೆ ೩೦ ಡಾಲರು. ಚರ್ಚಿನ ಯಜಮಾನ ಇಲ್ಲದಿದ್ದಾಗ ಕಾರುಗಳನ್ನು ನೋಡಿಕೊಳ್ಳುವುದರಿಂದ ೧.೫ ಅಥವಾ ಎರಡು ಡಾಲರು ದೊರೆಯುವುದು. ಆಕೆ ದೂರದರ್ಶನ ಸಿಬ್ಬಂದಿಯನ್ನು ನೋಡಲು ನಾಚಿಕೆ.

ಟಿಕೋಮ ಎರಡನೆಯ ತರಗತಿ. ಅವಳ ಮನೆಯಲ್ಲಿ ನಾಲ್ಕುಮಂದಿ. ಅವರ ಪೈಕಿ ಇವಳೇ ದೊಡ್ಡವಳು. ಅವಳ ತಂದೆ ನಿರುದ್ಯೋಗಿ. ತಾಯಿಯ ಕಸಬು ಪ್ಲಾಸ್ಟಿಕ್ಸ್ ಚೀಲ ಮಾರಾಟ. ಶಾಲೆಯ ನಂತರ ಕಾರಿನ ಕಾವಲು ಕಾಯುವಳು "ನಿಜವಾಗಿ ನಾನೇ ಅದೃಷ್ಟಶಾಲಿ. ನನ್ನ ಮನೆಯಲ್ಲಿ ಶಾಲೆಗೆ ಹೋಗುವವಳು ನಾನೊಬ್ಬಳೇ. ಸಮಾಜ ಕಲ್ಯಾಣ ಇಲಾಖೆ ನನ್ನ ಶಾಲಾ ಶುಲ್ಕ ನೀಡುವುದು" ಎಂದು ಅವಳು ಸಂತೋಷಪಡುವಳು.

ಕೆನಿಯದಿಂದ ೧೯೯೪ರ ಏಪ್ರಿಲ್‌ನಲ್ಲಿ ತಿಳಿದುಬಂದಿದ್ದು. ಒಂದು ದಿನ ಮದುವೆಯ

ಮೆರವಣಿಗೆ ಹೋಗುತ್ತಿತ್ತು. ಬೀದಿ ಮಕ್ಕಳು ಎದುರಿಗೆ ಬರುತ್ತಿದ್ದ ಮೆರವಣಿಗೆಯ ತಂಟೆಗೆ ಹೋಗಲಿಲ್ಲ. ಮೆರವಣಿಗೆಯಲ್ಲಿ ಒಯ್ಯುತ್ತಿದ್ದ ವಸ್ತ್ರ ಮತ್ತು ಆಭರಣದ ಕಡೆಗೆ ತಿರುಗಿಯೂ ಸಹ ನೋಡಲಿಲ್ಲ. ಆ ಹುಡುಗರ ಗುಂಪು ನೇರವಾಗಿ ಮದುವೆ ಮನೆಯ ಭೋಜನ ಕೋಣೆಗೆ ನುಗ್ಗಿತು. ಅಲ್ಲಿ ಅತಿಥಿಗಳಿಗೆ ಇಟ್ಟಿದ್ದ ಭಕ್ಷ್ಯ ಭೋಜ್ಯಗಳನ್ನು ತಮ್ಮ ಚೀಲಗಳಿಗೆ ತುಂಬಿಕೊಂಡರು. ಅಲ್ಲಿಟ್ಟಿದ್ದ ಮದ್ಯವನ್ನು ತೃಪ್ತಿಯಾಗಿ ಕುಡಿದು ತಮ್ಮೊಂದಿಗೆ ಒಂದು ಪೆಟ್ಟಿಗೆ ಮದ್ಯವನ್ನು ಒಯ್ದರು. ಪಾಪ, ಆ ಬೀದಿ ಮಕ್ಕಳು ಎಷ್ಟು ದಿನದಿಂದ ಹಸಿದಿದ್ದರೋ ?

ರಸ್ತೆ ಮಕ್ಕಳ ಸಮಸ್ಯೆ ಚೀನವನ್ನೂ ಸಹ ಬಿಟ್ಟಿಲ್ಲ. ಹೊಟ್ಟೆಗಿಲ್ಲದೆ, ಮಾಡಲು ಕೆಲಸವಿಲ್ಲದೆ, ಚೀನದ ರಾಜಧಾನಿ ಬೀಜಿಂಗಿಗೆ ಮಕ್ಕಳು ಬರುವರು. ಅಲ್ಲಿ ರಸ್ತೆಯ ಬದಿಯಲ್ಲಿ "ಯಾವುದೇ ಕೆಲಸವನ್ನು ಮಾಡಬಲ್ಲೆ" ಎಂಬ ಹಲಗೆಯನ್ನು ತಗುಲಿಸಿಕೊಂಡು ಚಳಿಯಲ್ಲಿ ನಡುಗುತ್ತ ನಿಂತಿರುವ ಚಿತ್ರ ಯಾರಿಗಾದರೂ ಮರುಕವನ್ನು ಉಂಟುಮಾಡದೆ ಇರದು. ಇಂತಹ ಮಕ್ಕಳ ಸಂಖ್ಯೆ ೨ ಲಕ್ಷ. ಚೀನಾದಲ್ಲಿರುವ ಮಕ್ಕಳ ಸಂಖ್ಯೆ ೩೦೦ ಮಿಲಿಯನ್. ಆ ಹುಡುಗನನ್ನು ಪ್ರಶ್ನೆ ಮಾಡಿದವರಿಗೆ ದೊರೆಯುವ ಉತ್ತರ "ನಾನು ಬಡರೈತನ ಮಗ. ಇಲ್ಲಿ ಕೆಲಸ ಹುಡುಕುವುದು ನನ್ನ ಉದ್ದೇಶ. ನಾನು ಈಗತಾನೇ ರೈಲಿನಿಂದ ಬಂದೆ."

ಚೀನಾದಲ್ಲಿ ಹೂವು ಭೋಗವಸ್ತು. ಹೂವು ಮಾರುವುದು ಒಂದು ರೀತಿಯಲ್ಲಿ ಮರ್ಯಾದೆಯ ಕಸಬು. ಹೂವಾಡಿಗರು ಬೀದಿ ಮಕ್ಕಳ ಕೈಲಿ ಹೂ ಮಾರಿಸುವರು. ದೊಡ್ಡವರು ಮಕ್ಕಳ ಮುದ್ದು ಮುಖ ನೋಡಿ ಕನಿಕರಪಟ್ಟು ಹೂವುಕೊಳ್ಳುವರಂತೆ.

ಯೂನಿಸೆಫ್ ಮಕ್ಕಳ ಕಲ್ಯಾಣಕ್ಕೆ ಹಲವಾರು ವರ್ಷಗಳಿಂದ ಇಲ್ಲಿ ಕೆಲಸ ಮಾಡುತ್ತಿದೆ. ಯೂನಿಸೆಫ್, ಮಹಿಳಾ ಸಂಘ ಸರ್ಕಾರದೊಡನೆ ಸೇರಿ ಪಾಂಕ್ಸೈ ಕ್ಷೇತ್ರದಲ್ಲಿ ಒಂದು ಸರ್ವೆ ನಡೆಸಿತು. ರಸ್ತೆ ಮಕ್ಕಳಾಗಲು ಅವರು ಕಂಡು ಹಿಡಿದಿರುವ ಕಾರಣಗಳು ಹೀಗಿವೆ. ಶಾಲೆಗಳನ್ನು ನಾನಾ ಕಾರಣಗಳಿಗಾಗಿ ಮಧ್ಯದಲ್ಲೇ ಬಿಡುವವರ ಪ್ರಮಾಣ ಸೇಕಡ ೭೦. ಅವರು ಬೀದಿ ಮಕ್ಕಳಾಗಲು ಕಾರಣಗಳು ಹೀಗಿದೆ. ೧) ಬಡತನ, ೨) ಭಗ್ನ ಸಂಸಾರದ ಪರಿಣಾಮ, ೩) ಕೆಲಸ ಮಾಡುವ ಕೌಶಲ್ಯ ಇಲ್ಲದಿರುವುದು.

ರಸ್ತೆ ಮಕ್ಕಳ ಸಮಸ್ಯೆಯನ್ನು ಪರಿಹರಿಸಲು ಸರಕಾರ ಕೆಲವು ಕಾರ್ಯಕ್ರಮಗಳನ್ನು ಕೈಕೊಂಡಿದೆ. ಬೀದಿ ಮಕ್ಕಳ ಸುಧಾರಣೆಯ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮೂರು ತಂಡ ತರಬೇತಿಯನ್ನು ಏರ್ಪಡಿಸಿದೆ. ಈ ಸಮಸ್ಯೆಯನ್ನು ಪರಿಹರಿಸುವ ವಿಧಾನವನ್ನು ತಿಳಿಯಲು ಫಿಲಿಪೈನ್ಸ್‌ಗೆ ಚೀನಾ ಸರಕಾರ ಅಧಿಕಾರಿಗಳನ್ನು ನಿಯೋಜಿಸಿತು. ರಸ್ತೆ ಮಕ್ಕಳ ವಿಚಾರದಲ್ಲಿ ಸಾಕಷ್ಟು ಮಾಹಿತಿಯನ್ನು ದೂರದರ್ಶನ ನೀಡುತ್ತಿದೆ.

೧೦–೧೨ ವಯಸ್ಸಿನ ಮಕ್ಕಳಿಗೆ ಮೊಲ, ಕೋಳಿಮರಿ ಮತ್ತು ಹಂದಿ ಸಾಕಣೆಯಲ್ಲಿ ತರಬೇತಿ ನೀಡುತ್ತಿದೆ. ಹಾಗೆ ತರಬೇತಿ ಪಡೆದಿರುವರು ಸಾವಿರ. ೧೬ ವರ್ಷದ ಮಕ್ಕಳಿಗೆ ಬೂಡ್ಸ್ ತಯಾರಿಕೆಯಲ್ಲಿ ತರಬೇತಿ ಕೊಡುವರು.

ಮಕ್ಕಳು ರಾಷ್ಟ್ರದ ಆಸ್ತಿ. ಅದೃಷ್ಟ ಇದ್ದರೆ ಮಹಾತ್ಮಗಾಂಧೀಜಿಯಂತೆ ವಿಶ್ವ ಮಾನ್ಯ ವ್ಯಕ್ತಿ ಆಗಬಹುದು. ಯಾರ ಅದೃಷ್ಟ ಹೇಗಿದೆಯೊ? ಯಾರು ಬಲ್ಲರು? ಆದ್ದರಿಂದ ಮಕ್ಕಳ ರಕ್ಷಣೆಯಲ್ಲಿ ಜಾತಿ, ಮತ, ಜನಾಂಗ ಮತ್ತು ರಾಷ್ಟ್ರ ಎಂಬ ಅಲ್ಪ ಭಾವನೆಗಳು ಅಡ್ಡ ಬರಬಾರದು.

ಮೊದಲಾಗಿ ಪ್ರತಿ ಮನೆಯಲ್ಲಿ ಮಕ್ಕಳನ್ನು ಗಂಡು, ಹೆಣ್ಣು ಬೇಧವಿಲ್ಲದೆ ಬೆಳೆಸತಕ್ಕದ್ದು.

ಮಕ್ಕಳು ದೈಹಿಕವಾಗಿ, ಬೌದ್ಧಿಕವಾಗಿ, ನೈತಿಕವಾಗಿ ಮತ್ತು ಸುಸಂಸ್ಕೃತರಾಗಿ ಅಭಿವೃದ್ಧಿ ಹೊಂದಲು ಅವಕಾಶ ಇರ ತಕ್ಕದ್ದು. ಮಕ್ಕಳಲ್ಲಿ ಅಪಾರ ಗುಪ್ತಶಕ್ತಿ ಅಡಗಿದೆ. ಅದು ಹೊರಹೊಮ್ಮಲು ಸೂಕ್ತ ಅವಕಾಶವನ್ನು ಕಲ್ಪಿಸಿ ಅವರನ್ನು ಸಮಾಜದ ಸೇವೆ ಸಲ್ಲಿಸಲು ಸಿದ್ಧಪಡಿಸ ತಕ್ಕದ್ದು.

ಹಸಿದಮಕ್ಕಳಿಗೆ ಅಶನ ಈಯಲುಬೇಕು. ರೋಗದಿಂದ ನರಳುವ ಮಕ್ಕಳಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ ಮತ್ತು ಆರೈಕೆ ಅನಿವಾರ್ಯ. ಮಕ್ಕಳು ಶಾರೀರಕವಾಗಿ, ಬೌದ್ಧಿಕವಾಗಿ ಬೆಳೆಯಲು ಅವಕಾಶ ಇರ ತಕ್ಕದ್ದು. ಅಂಗವಿಕಲ ಮಕ್ಕಳಿಗೆ ವಿಶೇಷ ಗಮನ ನೀಡಿ ಅವರ ಬಾಳು ಸುಖಮಯ ವಾಗುವಂತೆ ನೋಡಿಕೊಳ್ಳುವುದು ಒಳ್ಳೆಯದು. ತಪ್ಪುದಾರಿಯಲ್ಲಿ ನಡೆಯುವ ಹಾಗೂ ತೊಂದರೆಯಲ್ಲಿರುವ ಮಕ್ಕಳಿಗೆ ಸೂಕ್ತಶಿಕ್ಷಣ ನೀಡಿ ಅವರ ಜೀವನವನ್ನು ಸುಧಾರಿಸುವುದರಿಂದ ಅವರ ಭವಿಷ್ಯ ಉತ್ತಮವಾಗುವುದು.

ತಬ್ಬಲಿಮಕ್ಕಳನ್ನು ದೇವರ ಪಾಲಿಗೆ ಬಿಡದೆ ಮಕ್ಕಳ ಕಲ್ಯಾಣಕ್ಕೆ ಮೀಸಲಾದ ಸಂಸ್ಥೆಗಳು ಈ ದಿಸೆಯಲ್ಲಿ ಗಮನಹರಿಸ ತಕ್ಕದ್ದು.

ಮಕ್ಕಳ ರಕ್ಷಣೆಯಲ್ಲಿ ಸಮಾಜ ಕಲ್ಯಾಣ ಮತ್ತು ಭದ್ರತೆ ಇದೆ. ಅದರಿಂದ ಅವರ ರಕ್ಷಣೆ ಪ್ರಪ್ರಥಮಕಾರ್ಯ. ಎರಡನೆಯದಾಗಿ ಅವು ತಮ್ಮ ಜೀವನದ ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸುವಂತೆ ಸೂಕ್ತ ಶಿಕ್ಷಣ ಮತ್ತು ತರಬೇತಿ ಅನಿವಾರ್ಯ.

ಮಕ್ಕಳು ಜೀವನ ನಡೆಸಲು ಅವಕಾಶ ನೀಡುವುದಲ್ಲದೆ ಅವುಗಳು ಶೋಷಣೆಗೆ ಒಳಗಾಗದಂತೆ ನೋಡಿಕೊಳ್ಳತಕ್ಕದ್ದು.

ಮಕ್ಕಳ ರಕ್ಷಣೆ ಮತ್ತು ಕಲ್ಯಾಣಕ್ಕೆ ಯೂನಿಸೆಫ್ ಸಂಸ್ಥೆ ಇದೆ. ಅದು ಈಗಾಗಲೇ ಈ ದಿಸೆಯಲ್ಲಿ ಸೇವೆಸಲ್ಲಿಸುತ್ತಿದೆ. ಅವರ ಕೆಲಸ ದಿನೇದಿನೇ ಹೆಚ್ಚಾದಲ್ಲಿ ಆಶ್ಚರ್ಯವಿಲ್ಲ.

ಜೀವನದಲ್ಲಿ ನಿದ್ರೆಯು ಒಳ್ಳೆಯದು. ಸಾವು ಇನ್ನೂ ಒಳ್ಳೆಯದು. ಹುಟ್ಟದೇ ಇರುವುದು ತೀರಾ ಒಳ್ಳೆಯದು.

—ಹೆನ್ರಿಚ್

ದೇವರ ಮಗು

ಡಾ || ದೇಜಗೌ

— ೧ —

ನಾವು ಮದುವೆಯಾಗಿ ಹನ್ನೆರಡು ವರ್ಷ ಕಳೆದುವು. ನನ್ನ ಪತಿ ಕೆಂಪರಾಜ್ ಬೆಂಗಳೂರಿನ ಮಾರ್ಕೆಟ್ ಚೌಕದಲ್ಲಿ ಲೇವಾದೇವಿ ವ್ಯವಹಾರದ ಬ್ಯಾಂಕೊಂದನ್ನು ನಡಸುತ್ತಿದ್ದರು. ಅವರು ಬೆಳಗ್ಗೆ ೯ ಗಂಟೆಗೆ ಮನೆ ಬಿಟ್ಟರೆ, ಮರಳುತ್ತಿದ್ದುದೇ ರಾತ್ರಿ ಒಂಭತ್ತು ಗಂಟೆಗೆ. ಬಿಡುವಿಲ್ಲದ ಅವರ ದುಡಿಮೆಯಿಂದಾಗಿ ಅವರ ವ್ಯವಹಾರ ದಿನೇ ದಿನೇ ಕುದುರುತ್ತಿತ್ತು. ಶ್ರೀಮಂತರ ಮೊಹಲ್ಲಾದಲ್ಲೊಂದು ದೊಡ್ಡ ಬಂಗಲೆಯನ್ನು ಕಟ್ಟಿಸಿಕೊಂಡಿದ್ದೆವು.

ನನ್ನ ಪತಿ ಮೂರು ಹೊತ್ತೂ ತಮ್ಮ ವ್ಯವಹಾರದಲ್ಲಿ ಮುಳುಗಿದ್ದುದರಿಂದ ಮನೆಯ ಜವಾಬ್ದಾರಿಯನ್ನೆಲ್ಲ ನಾನೇ ಹೊರಬೇಕಾಗಿತ್ತು. ಸಂಸಾರ ನಿರ್ವಹಣೆಗೆ ಅಗತ್ಯವಾದ ಹಣವನ್ನು ಧಾರಾಳವಾಗಿ ಒದಗಿಸುತ್ತಿದ್ದರು. ತಾವು ಕೊಟ್ಟ ಹಣಕ್ಕೆ ಎಂದೂ ಲೆಕ್ಕ ಕೇಳಿದವರಲ್ಲ. “ಅದಕ್ಕೇಕೆ ಇಷ್ಟು ಖರ್ಚು ಮಾಡಿದೆ? ಇದನ್ನೇಕೆ ತಂದೆ? ಅದು ಅನಗತ್ಯವಾಗಿತ್ತು’ ಎಂದು ಅವರು ಮರೆತೂ ಕೇಳಿದವರಲ್ಲ. ‘ನೀವು ಕೊಟ್ಟ ಹಣಕ್ಕೆ ಲೆಕ್ಕ ಕೇಳಬೇಡವೆ?’ ಎಂದು ನಾನೊಮ್ಮೆ ತಮಾಷೆ ಮಾಡಿದೆ. ‘ಇದೇನು ಲಾವಣ್ಯ? ಹೀಗೆ ಕೇಳುತ್ತೀಯೆ. ನಮ್ಮ ಮನೆಯೇನು ಕಚೇರಿಯೆ? ನಾನೇನು ಲೆಕ್ಕಾಧಿಕಾರಿಯೆ? ನಾವಿಬ್ಬರು ಬೇರೆ ಬೇರೆಯೆ? ನೀನು ಮನೆಯ ಜವಾಬ್ದಾರಿಯನ್ನು ನನ್ನ ಮೇಲೆ ಹೊರಿಸಲಿಲ್ಲವಾಗಿ, ನಾನು ನಿರಾತಂಕವಾಗಿ ವ್ಯವಹಾರ ಕುದುರಿಸಿಕೊಂಡು, ಹಣ ಸಂಪಾದಿಸುತ್ತಿದ್ದೇನೆ. ಅಂದ ಮೇಲೆ ಆ ಸಂಪಾದನೆಯಲ್ಲಿ ನೀನೂ ಭಾಗಿಯಾಗಿದ್ದೀಯೆ. ಇನ್ನು ಮುಂದೆ ನಿನ್ನ ಹೆಸರಿನಲ್ಲಿಯೇ ಬ್ಯಾಂಕಿನಲ್ಲಿ ಲೆಕ್ಕ ತೆಗೆಯುತ್ತೇನೆ. ಆಗ ಹಣ ಬೇಕೆಂದು ನೀನು ನನ್ನನ್ನು ಕೇಳಬೇಕಾಗಿಲ್ಲ. ನಿನ್ನಂಥ ಮಡದಿ ಸಿಕ್ಕಿದ್ದೇ ನನ್ನ ಪುಣ್ಯ’ ಎಂಬುದಾಗಿ ಅವರು ಹೇಳಿ, ನನ್ನ ಮೇಲೆ ಪ್ರೇಮದ ಮಳೆಗರೆದರು.

ನಮ್ಮಿಬ್ಬರ ಪಾಲಿಗೆ ಮನೆ ಎಂದರೆ ಮಕ್ಕಳು; ಮಕ್ಕಳಿದ್ದರೆ ಮನೆ. ನಮಗೆ ಮೂವರು ಮಕ್ಕಳು: ಲತಾ, ಲಲಿತ, ಲಸಿತ. ಮೊದಲನೆಯವಳಿಗೆ ಹತ್ತು ವರ್ಷ, ಎರಡನೆಯವಳಿಗೆ ಎಂಟು ವರ್ಷ, ಮೂರನೆಯವಳಿಗೆ ಆರು ವರ್ಷ. ನಮಗೆ ಎರಡೇ ಮಕ್ಕಳು ಸಾಕಾಗಿತ್ತು. ಮೂರನೆಯ ಮಗುವಾದರೂ ಗಂಡಾದೀತು ಎಂದು ಯೋಚಿಸಿದೆವು. ಹೆಣ್ಣಾದಾಗ ನನಗೆ ದುಃಖವಾಯಿತು. ನನ್ನ ಪತಿ ಬಂದಾಗ ಅತ್ತುಬಿಟ್ಟೆ. ‘ಇದೇನೇ ಹುಚ್ಚಿ? ಅಜ್ಞೆಯಂತೆ ಅಳುತ್ತಿದ್ದೀಯೆ. ನೆಹ್ರೂ ಅವ

ಆಧಾರ: ರೀಡರ್ಸ್ ಡೈಜೆಸ್ಟ್‌ನಲ್ಲಿ ಕೆಲವು ತಿಂಗಳ ಹಿಂದೆ ಅಚ್ಚಾಗಿದ್ದೊಂದು ಕತೆ.

ರಿಗೆ ಗಂಡು ಸಂತಾನವಿತ್ತೆ? ಗಂಡುಮಗ ಸಾಧಿಸದಿದ್ದುದನ್ನು ಅವರ ಹೆಣ್ಣುಮಗಳು ಸಾಧಿಸಿ, ನೆಹ್ರೂ ವಂಶಕ್ಕೆ ಕೀರ್ತಿ ತರಲಿಲ್ಲವೆ? ನನ್ನಾಣೆ, ಅಳಕೂಡದು, ಚಿಂತಿಸಕೂಡದು' ಎಂದವರು ನನ್ನ ತಲೆಯನ್ನು ನೇವರಿಸಿ ಸಮಾಧಾನಪಡಿಸಿದರು.

ಲಸ್ಸಿ—ನಾನವಳನ್ನು ಕರೆಯುತ್ತಿದ್ದ ಮುದ್ದಿನ ಹೆಸರು—ದಿನದಿಂದ ದಿನಕ್ಕೆ ಮುದ್ದಾಗಿ, ಚೆಲುವಾಗಿ, ಮನೆಗೆ ಬೆಳಕಾಗಿ, ಎದೆಗೆ ತಂಪಾಗಿ ಬೆಳೆದಳು. ಅವಳ ತೊಟ್ಟಿಲನ್ನು ತೂಗಿ ಮಲಗಿಸುವಲ್ಲಿ ಅಕ್ಕಂದಿರಲ್ಲಿಯೇ ಸ್ಪರ್ಧೆ. ಅವಳ ಅಳುವ ಸದ್ದು ಕೇಳಿದ ಕೂಡಲೇ ಇಬ್ಬರೂ ಅವಳ ಬಳಿ ಹಾಜರು. ಅವಳನ್ನೆತ್ತಿಕೊಳ್ಳಲು ನಾನು ತಾನು ಎಂಬ ಮೇಲಾಟ. ಅವಳು ಅಂಬೆಗಾಲಿಡುತ್ತಿದ್ದಂತೆ ಕೈಗೆ ಸಿಕ್ಕಿದ ವಸ್ತುಗಳೆಲ್ಲ ಚೆಲ್ಲಾಪಿಲ್ಲಿ. ಸಾಮಾನುಗಳನ್ನು ಅವಳ ಕೈಗೆಟುಕದಂತೆ ಜೋಡಿಸುವ ಕೆಲಸ ಬೇರೆ ನನ್ನ ವೇಳೆಯನ್ನು ಕಸಿದುಕೊಳ್ಳುತ್ತಿತ್ತು. ಜೊಲ್ಲಿನೊಡನೆ ತೊದಲುಮಾತು ಸೋರುವಾಗ ಮೊದಮೊದಲು ಅದರರ್ಥ ತಿಳಿಯದೆ ನನ್ನಲ್ಲಿ ಕಣ್ಣೀರು ಬಂದದ್ದುಂಟು. ಕ್ರಮಕ್ರಮೇಣ ಅವಳ ಭಾಷೆ ನನಗರ್ಥವಾಗುವಂತಾಯಿತು. ಅದನ್ನು ಕೇಳುವುದೆ ಆನಂದ. ಅವಳ ಅಕ್ಕಂದಿರ ಮತ್ತು ತಂದೆಯ ನಡುವೆ ನಾನು ದುಭಾಷಿಯಾಗಬೇಕಾಯಿತು. ಅವಳು ಹುಟ್ಟಿದ ಮೇಲೆ ಅಪ್ಪ ಒಮ್ಮೊಮ್ಮೆ ಮಧ್ಯಾಹ್ನ ಊಟಕ್ಕೆ ಬಂದು ಹೋಗುತ್ತಿದ್ದರು. 'ನಾನು ಬರೋದು ಊಟಕ್ಕಲ್ಲ; ಈ ತುಂಟಿಯನ್ನು ನೋಡಲು. ಇವಳನ್ನೊಮ್ಮೆ ನನ್ನ ತೋಳುಗಳಲ್ಲಿ ಬಂಧಿಸಿಕೊಂಡರೆ ಆಯಾಸವೆಲ್ಲ ಪರಿಹಾರವಾಗುತ್ತದೆ; ಮನೋಯಾತನೆಗೆ ಇವಳಪ್ಪುಗೆಯೇ ಮದ್ದು' ಎನ್ನುತ್ತಿದ್ದರವರು.

ಅವಳಿಗೆ ಕಾಲು ಬಂದ ಮೇಲಂತು, ಮನೆಯಲ್ಲಿ ೨೦–೩೦ ಜನಗಳಿದ್ದಂಥ ಅನುಭವವಾಗುತ್ತಿತ್ತು; ಇಡೀ ಮನೆಯೇ ಸದ್ದುಗೂಡಾಗುತ್ತಿತ್ತು. ಅವಳಪ್ಪ ಗಾಡಿಗಟ್ಟಳೆ ಆಟದ ಸಾಮಾನುಗಳನ್ನು ತಂದಿಟ್ಟರೂ ಅಡುಗೆ ಮನೆಯಲ್ಲಿ ನನ್ನಂತೆಯೇ ಕೆಲಸ ಮಾಡಬೇಕೆಂದು ಚಂಡಿ ಹಿಡಿಯುತ್ತಿದ್ದಳು. ಚಂಡಿ ಹಿಡಿದಾಗ ನನಗೆ ಅಳು ಬರುತ್ತಿತ್ತು. ಕೂಡಲೇ ನನ್ನ ಕೈಹಿಡಿದೆಳೆದುಕೊಂಡು, ಬಾಗಿಸಿಕೊಂಡು ನನ್ನ ಕೆನ್ನೆಗೆ ಮುತ್ತು ಕೊಟ್ಟು, ಕಣ್ಣೀರು ಹರಿಸಿ, ತಪ್ಪಾಯ್ತಮ್ಮ ಎಂದು ಸಂತೈಸುತ್ತಿದ್ದಳು. ಮನೆಯ ಕೈತೋಟದಲ್ಲಿ ಹೂತಳಿರುಗಳನ್ನು ಉಳಿಯಗೊಡುತ್ತಿರಲಿಲ್ಲ. 'ನಿನ್ನನ್ನು ಚಿಗುಟಿದರೆ ನೋವಾಗುವುದಿಲ್ಲವೆ, ಪಾಪು? ತಳಿರು ಕಿತ್ತರೆ ಗಿಡ ಬೆಳೆಯುತ್ತದೆಯೆ? ಗಿಡಗಳೆಲ್ಲ ಒಣಗಿದರೆ ತೋಟ ಹಾಳಾಗುತ್ತದೆ. ಆಗ ನೆರಳಿಲ್ಲ, ಹೂವಿಲ್ಲ, ಹಕ್ಕಿಗಳು ಬರುವುದಿಲ್ಲ.' ಎಂದ ಕೂಡಲೇ, 'ನಿಜವೇನಮ್ಮ, ಅವುಗಳಿಗೆ ನೋವಾಗುತ್ತದೆಯೆ? ಇನ್ನು ಮೇಲೆ ನಾನೇ ಅವುಗಳಿಗೆ ನೀರು ಹಾಕುತ್ತೇನಮ್ಮ' ಎಂದು ಲಸ್ಸಿ ಭರವಸೆ ನೀಡುತ್ತಿದ್ದಳು. ಮನೆಯಲ್ಲಿ ಯಾರಿಗೆ ಕೇಳಿಸದಿದ್ದರೂ, ಅಪ್ಪನ ಕಾರಿನ ಶಬ್ದ ದೂರದಿಂದಲೇ ಅವಳಿಗೂ ಪಪ್ಪಿಗೂ ಕೇಳಿಸುತ್ತಿತ್ತು. ಇಬ್ಬರೂ ಸ್ಪರ್ಧೆಯಿಂದ ಬಾಗಿಲೆಡೆಗೆ ಓಡುತ್ತಿದ್ದರು. ಅವಳನ್ನು ಕಾರಿನಲ್ಲಿ ಕೂರಿಸಿಕೊಂಡು ಒಂದು ಸುತ್ತು ಬೀದಿಯಲ್ಲಿ ಬಳಸಿ ಬರಬೇಕು. ಅವಳ ತೊಡೆಯ ಮೇಲೆ ಪಪ್ಪಿಯೂ ಕುಳಿತಿರಬೇಕು. ಸ್ಟಿಯರಿಂಗ್

ಹಿಡಿದು ತಾನೂ ಕಾರು ಬಿಡುವುದಾಗಿ ಹಟ ಮಾಡುತ್ತಿದ್ದುದುಂಟು. ತನ್ನ ಮಂಚದ ಸನಿಹದಲ್ಲಿ ಪಪ್ಪಿ ಇದ್ದರೆ ಮಾತ್ರ ಅವಳಿಗೆ ನಿದ್ದೆ ಬರುತ್ತಿತ್ತು.

ಅವಳ ನಾಲ್ಕನೆಯ ಹುಟ್ಟುಹಬ್ಬದ ಸಮಯದಲ್ಲಿ ನನ್ನ ತಂಗಿ ಪಪ್ಪಿಗಿಂತ ತುಸು ದಢೂತಿಯಾದ ಶೌನಕವೊಂದನ್ನು ತಂದು, ಅದಕ್ಕೆ 'ಅಭಿಮನ್ಯು' ಎಂದು ಹೆಸರಿಟ್ಟು ಅವಳಿಗೆ ಬಹುಮಾನ ನೀಡಿದಳು. ಅವಳಿಗಾದ ಆನಂದ ಅಷ್ಟಿಷ್ಟಲ್ಲ. ಅಭಿಮನ್ಯು ಅವಳ ಎಡೆಬಿಡದ ಸಂಗಾತಿಯಾಯಿತು. ಪಪ್ಪಿ ಅಭಿಮನ್ಯುಗಳೊಡನೆ ಕುಣಿಯುತ್ತಿದ್ದಳು, ಕೇಕೆ ಹಾಕುತ್ತಿದ್ದಳು, ಸವಾರಿ ಮಾಡುತ್ತಿದ್ದಳು. ಪಪ್ಪಿಗಿಂತ ಅಭಿಮನ್ಯುವಿಗೆ ಒಂದು ಸ್ಥಾನ ಮೇಲಾಯಿತು. ಏಕೆಂದರೆ ಅಭಿ ಅವಳ ಆಜ್ಞೆಯನ್ನು ವಿಧೇಯತೆಯಿಂದ ಪಾಲಿಸುತ್ತಿತ್ತು. ಪಪ್ಪಿ ಎಲ್ಲೆಲ್ಲಿಯೋ ಸುತ್ತಾಡಿ ಬರುತ್ತಿತ್ತು. ಅಭಿ ಹಾಗಲ್ಲ. ಆದ್ದರಿಂದ ಅದಕ್ಕವಳು ಅದನ್ನು ತನ್ನ ಹಾಸುಗೆಯಲ್ಲಿಯೇ ತಬ್ಬಿಕೊಂಡು ಮಲಗಿಸುತ್ತಿದ್ದಳು. ನಿದ್ದೆ ಬರುವ ತನಕ ನಾನವಳನ್ನು ತಬ್ಬಿಕೊಂಡಿರಬೇಕಾಗಿತ್ತು, ಇಲ್ಲವೆ ಮೈತಟ್ಟಬೇಕಾಗಿತ್ತು.

ರಾತ್ರಿ ಎಷ್ಟು ಹೊತ್ತಿಗೆ ಮಲಗಿದರೂ, ಬೆಳಗಾಗ ಆರೂವರೆ ಗಂಟೆ ಹೊತ್ತಿಗೆ ಎಚ್ಚರವಾಗುತ್ತಿತ್ತು. ಕೂಡಲೇ ಅಪ್ಪನ ಸೊಳ್ಳೆ ಪರದೆಯನ್ನೆತ್ತಿ, 'ಅಪ್ಪ, ಅಪ್ಪ' ಎಂದು ಕೂಗುತ್ತಿದ್ದಳು. ಅವರು ಮಲಗಿದಂತೆ ನಟಿಸುತ್ತಿದ್ದಾಗ ಅವರ ಎದೆಯ ಮೇಲೊ ಬೆನ್ನಿನ ಮೇಲೋ ಕುಳಿತು ಸವಾರಿ ಮಾಡುತ್ತಿದ್ದಳು. ಅವಳು ಗೊರಕೆಯನ್ನು ನಟಿಸುತ್ತಿದ್ದಾಗ, ಕಚಗುಳಿ ಇಡುತ್ತಿದ್ದಳು. ಅಪ್ಪ ಒಡನೆಯೆ ಮೇಲೆದ್ದು 'ಕಳ್ಳಿ' ಎಂದು ತಬ್ಬಿಕೊಂಡರೆ 'ನಾನು ಕಳ್ಳಿಯಲ್ಲ' ಎಂದು ಅಳು ನುಡಿ ಹರಿಸುತ್ತಿದ್ದಳು. 'ಇಲ್ಲ, ನನ್ನಿನ್ನ- ನನ್ನ ಮಗಳು ಕಳ್ಳೀ ಅಲ್ಲ. ಬಿಡ್ತು ಅಂತೀನಿ' ಅಂದ ಮೇಲೆ ಅವರ ತೋಳ ಸೆರೆಯಿಂದ ತಪ್ಪಿಸಿಕೊಂಡು, ಬೇರೊಂದು ಕೋಣೆಯಲ್ಲಿ ಮಲಗಿದ್ದ ಅಕ್ಕಂದಿರ ಮಂಚದ ಮೇಲೆ ಧಾಳಿ ನಡೆಸುತ್ತಿದ್ದಳು. ಕೋಲಾಹಲ ಮಾಡುತ್ತಿದ್ದಳು. ಅವರಿಗೆ ಜೇನು ನಿದ್ದೆಯ ಹೊತ್ತು. ಅವರ ಹೊದಪುಗಳನ್ನೆಳೆದು ಕೆಳಗೆ ಬಿಸಾಡುತ್ತಿದ್ದಳು. 'ಅಯ್ಯೋ ಅಮ್ಮ, ಲಸ್ಸೀನ ನೋಡಮ್ಮ' ಎಂದವರು ಗೋಳ್ನುಡಿದಾಗ ಲಸ್ಸಿ 'ನಾನೇನೂ ಮಾಡಿಲ್ಲಮ್ಮ. ಇಬ್ಬರೂ ಸೇರಿಕೊಂಡು ನನಗೆ ಕಚುಗುಳಿಯಿಡುತ್ತಾರೆ, ಕೆಣಕುತ್ತಾರೆ. ನೋಡಮ್ಮ' ಎಂದು ಅವರ ಧ್ವನಿ ಮರಸುವಂತೆ ಕೂಗುತ್ತಿದ್ದಳು. 'ಬಾಮ್ಮ ಲಸ್ಸಿ ಇಲ್ಲಿ' ಎಂದು ನಾನು ಕರೆದರೆ 'ಇವರು ಬಿಡೋಲ್ಲ ಅಮ್ಮ' ಎಂದವಳು ನಟಿಸುತ್ತಿದ್ದಳು. 'ಇವಳು ಸುಳ್ಳುಬುರುಕಿ ಕಣಮ್ಮ' ಎಂದು ಲಲಿತ ಕೂಗಿಕೊಂಡಳು. 'ಅಕ್ಕ ನನ್ನನ್ನು ಬಯ್ತಾಳೆ ನೋಡಮ್ಮ' ಎಂದು ಲಸ್ಸಿ ಅಳು ನಟಿಸಿದಳು. 'ತಪ್ಪಾಯ್ತು, ಐದು ಪೈಸೆ ಜುಲ್ಮಾನೆ ಕೊಡ್ತೀನಿ' ಎಂದು ಲಲಿತ ನುಡಿದಳು.

ಮನೆಯಲ್ಲಿ ಯಾರೂ ಕೆಟ್ಟ ಮಾತಾಡಕೂಡದೆಂದು ಎಲ್ಲರೂ ಕರಾರು ಮಾಡಿಕೊಂಡಿದ್ದರು. ಒಂದು ಕೆಟ್ಟ ಮಾತಿಗೆ ಐದು ಪೈಸೆ ಜುಲ್ಮಾನೆ ಕೊಡಬೇಕಾಗಿತ್ತು. 'ಕಳ್ಳಿ' ಎಂದದ್ದಕ್ಕೆ ಅಪ್ಪ ಮೊದಲೇ ಜುಲ್ಮಾನೆ ಕೊಟ್ಟಾಗಿತ್ತು. ಜುಲ್ಮಾನೆ ಹಣ

ಹುಂಡಿಯ ಡಬ್ಬವನ್ನು ಸೇರುತ್ತಿತ್ತು. ಡಬ್ಬ ತುಂಬಿದ ನಂತರ, ಅಲ್ಲಿ ಸಂಗ್ರಹಿಸಿದ ಮೊತ್ತವನ್ನು ಅನಾಥ ಶಿಶು ವಿಹಾರಗಳಿಗೆ ಕಳಿಸಲಾಗುತ್ತಿತ್ತು.

'ಲಸ್ಸಿಯನ್ನು ತುಂಬ ಹಚ್ಚಿಕೊಂಡಿದ್ದೀರಿ' ಎಂದು ನಾನು ಆಗಾಗ್ಗೆ ನನ್ನ ಪತಿಯನ್ನು ಕೇಳುತ್ತಿದ್ದೆ. "ಹಲವು ವ್ಯವಹಾರಗಳಲ್ಲಿ ತೊಡಗಿಕೊಂಡಿರುವ ಗಂಡನಿಗೆ ಚಿಂತೆಗಳು ಅಸಂಖ್ಯ. ಲಸ್ಸಿಯನ್ನು ನೋಡಿದಾಗ ಅವೆಲ್ಲ ಮಂಗಮಾಯವಾಗಿ, ಮನಸ್ಸು ಸ್ವರ್ಗಸುಖವನ್ನನುಭವಿಸುತ್ತದೆ. ನಿನಗೆ ಹೊಟ್ಟೆಕಿಚ್ಚೇನು?' ಎಂದವರು ಪ್ರತಿಪ್ರಶ್ನೆ ಎಸೆಯುತ್ತಿದ್ದರು. 'ನನಗೆ ಹೊಟ್ಟೆಕಿಚ್ಚೆ, ಪ್ರಿಯ? ನನ್ನನ್ನೇ ನೀವವಳಲ್ಲಿ ಕಾಣುತ್ತೀರೆಂಬುದು ನನಗೆ ಗೊತ್ತು.' 'ಸರಿಯಾಗಿ ಹೇಳಿದೆ, ಚತುರ ಮತಿ. ಅವಳ ಕೂದಲು ದುಂಬಿಯಂತಿದ್ದು, ಈಗಲೇ ಮಂಡಿಯನ್ನು ಮುಟ್ಟುವಷ್ಟು ನೀಳವಾಗಿ ಬೆಳೆದಿದೆ. ಮೂಗು ಸಂಪಿಗೆಯ ಮೊಗ್ಗಿನಂತಿದೆ. ಕಣ್ಣು ಬಾದಾಮಿ ಆಕಾರದಲ್ಲಿದೆ.' 'ನಿಜ, ನಿಜ, ಮುಖ ಒಟ್ಟಿನಲ್ಲಿ ನಿಮ್ಮನ್ನೆ ಹೋಲುತ್ತದೆ. ಮೊದಲು ತಪ್ಪು ನುಡಿದೆ. ನಿಮ್ಮ ಪ್ರತಿಬಿಂಬವನ್ನೇ ನೀವವಳಲ್ಲಿ ಕಾಣುತ್ತಿದ್ದೀರಿ.' 'ಒಮ್ಮೆ ನಿನ್ನನ್ನು, ಮತ್ತೊಮ್ಮೆ ನನ್ನನ್ನು ಅವಳಲ್ಲಿ ಕಾಣುತ್ತೇನೆ, ನಿಜ.' 'ಸದ್ಯ ಅವಳನ್ನು ಕಂಡರೆ ಅಕ್ಕಂದಿರಿಗೂ ಅಷ್ಟೇ ಪ್ರೀತಿ. ಹೊಟ್ಟೆ ಕಿಚ್ಚಂತು ಲವಲೇಶವೂ ಇಲ್ಲ. ಅವಳವರನ್ನು ಪೀಡಿಸಿದಷ್ಟೂ ಹರ್ಷಿಸುತ್ತಾರೆ. ಶಾಲೆಗೆ ಹೋಗುವಾಗ ಅವಳ ಕೆನ್ನೆ ತುಟಿ ಕೈಗಳಿಗೆ ಮುತ್ತಿನ ಮಳೆಯನ್ನು ಸುರಿಸಿ, ಬೇಗ ಬರುವುದಾಗಿ ಹೇಳಿ, ಬೀದಿಯ ತುದಿಗೆ ಹೋಗುವ ತನಕ ಹಿಂದು ಹಿಂದಕ್ಕೆ ನೋಡುತ್ತ, ಟಾಟಾ ಹೇಳುತ್ತ ಹೋಗುತ್ತಾರೆ.'

ಅಕ್ಕಪಕ್ಕದ ಮನೆಗಳಿಗೂ ಲಸ್ಸಿಯ ಧಾಳಿ ತಪ್ಪಿದ್ದಲ್ಲ. ಅವಳು ಬರುವುದನ್ನೇ ಆ ಮನೆಗಳ ಮಕ್ಕಳು ಕಾಯುತ್ತಿದ್ದರು. ಅವಳನ್ನು ಮಾತಾಡಿಸಲು ದೊಡ್ಡವರಿಗೂ ಇಷ್ಟ. 'ಜೂಗೆ ಹೋಗಿದ್ದೊ. ನವಿಲು ನೋಡಿದೆ. ಅದಕ್ಕೆ ಕೋಗಿಲೆಯ ದನಿ ಇರಬಾರದಿತ್ತೆ?' 'ಗುಲಾಬಿ ಹೂವು ಎಷ್ಟು ಚಂದ. ಅದರ ಸುತ್ತ ಮುಳ್ಳಿರಬಾರದಿತ್ತು.' 'ಮಾವು ಅದೆಷ್ಟು ಮಧುರ? ವಾಟೆಯೇಕೆ ಅಷ್ಟು ದಪ್ಪ? ಎಂದೆಲ್ಲ ಅವಳವರನ್ನು ಪ್ರಶ್ನಿಸುತ್ತಿದ್ದಳಂತೆ. 'ನೀವು ಪುಣ್ಯವತಿಯಮ್ಮ; ಎಂಥ ಬುದ್ಧಿವಂತೆಯನ್ನು ಪಡೆದಿದ್ದೀರಿ? ಪಾದರಸದಂತೆ ಚುರುಕು; ಕೈಕಾಲು ಮೂಡಿದ ಗುಲಾಬಿ ಹೂವಿನಂತೆ ಸುಂದರವಾದ ಚಿಟ್ಟೆಯಂತೆ ಓಡಾಡುತ್ತಾಳೆ. ಅವಳ ಆಟಪಾಟಗಳನ್ನು ನೋಡಿದರೆ ಅವಳೊಂದು ದೈವನವೋ ಎನಿಸುತ್ತದೆ; ಅವಳು ಹಾಕುವ ಪ್ರಶ್ನೆಗಳನ್ನು ಕೇಳಿದರೆ ಸರಸ್ವತಿಯೇ ಅವಳ ನಾಲಿಗೆಯಲ್ಲಿ ವಾಸಿಸುತ್ತಿದ್ದಾಳೆಯೋ ಎಂದು ತೋರುತ್ತದೆ. ನೀವ್ಯಾಕೆ ಇನ್ನೂ ಅವಳನ್ನು ನರ್ಸರಿ ಶಾಲೆಗೆ ಸೇರಿಸಿಲ್ಲ?' ಎಂದು ಅಕ್ಕಪಕ್ಕದ ಮನೆಯವರು ಕೇಳುತ್ತಿದ್ದರು.

ಆಗಲೇ ನನಗೆ ಹೊಳೆದದ್ದು, ಲಸ್ಸಿಗೆ ಇನ್ನೇನು ನಾಲ್ಕು ವರ್ಷ ತುಂಬಲಿದೆ; ಆರು ತಿಂಗಳ ಹಿಂದೆಯೇ ನರ್ಸರಿ ಶಾಲೆಗೆ ಕಳಿಸಿದ್ದರೆ, ಅಕ್ಷರಾಭ್ಯಾಸವಾದರೂ ಆಗುತ್ತಿತ್ತು ಎಂದು. ಅಕ್ಕಂದಿರ ಒಡನಾಟದಲ್ಲಿ ಕೆಲವು ಅಕ್ಷರಗಳನ್ನು ಕಲಿತಿದ್ದಳು; ಸುಲಭದ ಪದಗಳನ್ನು ಜೋಡಿಸಿ ಹೇಳು

ತ್ತಿದ್ದುದೂ ಉಂಟು. ನಾನು ಹೇಳಿಕೊಡು ತ್ತಿದ್ದ ದೇವರನಾಮಗಳನ್ನು ಹಾಗೂ ಶಿಶು ಗೀತೆಗಳನ್ನು ಕಲಿತುಕೊಂಡು, ಬಂದವರ ಮುಂದೆ ಸರಾಗವಾಗಿ ಹೇಳುತ್ತಿದ್ದಳು. ಆದರೂ ಸಮ ವಯಸ್ಸಿನ ಮಕ್ಕಳ ಜತೆ ಯಲ್ಲಿ, ಒಳ್ಳೆಯ ಉಪಾಧ್ಯಾಯಿನಿಯರ ಸಂಗದಲ್ಲಿ ಮಕ್ಕಳು ಬೆಳೆದದ್ದಾದರೆ, ಅವಳ ಬೌದ್ಧಿಕ ವಿಕಾಸ ಚುರುಕಾಗುತ್ತದೆ, ಸಾಮಾಜಿಕ ಪ್ರಜೆ ವಿಕಾಸಗೊಳ್ಳುತ್ತ ದೆಂಬುದು ನನಗಾಗ ಮನದಟ್ಟಾಯಿತು. ನನ್ನ ಪತಿಗೂ ಈ ವಿಷಯ ತಿಳಿಸಿದೆ. ಏಕೋ ಏನೋ ಒಲ್ಲದ ಮನಸ್ಸಿನಿಂದ ಸಮ್ಮತಿ ನೀಡಿದರು. ಮನೆಯಲ್ಲಿಯೇ ಪಾಠ ಹೇಳಿ ಸುವ ಮನಸ್ಸಿತ್ತೋ ಏನೋ ಅವರಿಗೆ. ನನ್ನ ಮಾತಿಗೆ ಅವರೆಂದೂ ಮರುಮಾತಾಡಿ ದವರಲ್ಲ.

ಶಾಲೆಯ ವಿಷಯ ವೆತ್ತಿದಾಗ ಲಸ್ಸಿಗೂ ಖುಷಿಯೋ ಖುಷಿ. ನೆರೆ ಹೊರೆಯ ಮಕ್ಕಳು ಸಮವಸ್ತ್ರ ಧರಿಸಿ ಶಾಲೆಗೆ ಹೋಗು ತ್ತಿದ್ದುದನ್ನವಳು ನೋಡಿದ್ದಳು. ಶಾಲೆಗೆ ಹೊರಡುವ ದಿನ ಅವಳೊಂದು ಷರತ್ತು ಹಾಕಿದಳು : 'ಪಪ್ಪಿ ಅಭಿಮನ್ಯುಗಳನ್ನು ಸಹ ನನ್ನ ಜತೆ ಕಳಿಸಬೇಕು' ಎಂದು. 'ಪಪ್ಪಿಯನ್ನವರು ಸೇರಿಸುವುದಿಲ್ಲಮ್ಮ. ಶಾಲೆಯಲ್ಲಿ ಸಾಕಷ್ಟು ಆಟದ ಸಾಮಾನು ಗಳಿವೆ. ಅಭಿಮನ್ಯುವೂ ಬೇಡ' ಎಂದು ಹೇಳಿ, ಅವಳನ್ನೊಪ್ಪಿಸಲು ನನಗೆ ಸಾಕೋ ಸಾಕಾಯಿತು. ನಾವೆಂದೂ ಮಕ್ಕಳನ್ನು ಹೊಡೆದವರಲ್ಲ, ಅವರ ಮೇಲೆ ರೇಗಿದವರೂ ಅಲ್ಲ. ನನ್ನ ಪತಿಯಂತು ಗಟ್ಟಿಯಾಗಿಯೂ ಅವರೊಡನೆ ಮಾತಾಡಿದವರಲ್ಲ. ಅವರು ಚಂಡಿ ಹಿಡಿದರೆ, ಹೇಳಿದ ಮಾತು ಕೇಳ ದಿದ್ದರೆ, ನನಗೆ ಗೊತ್ತಿದ್ದದ್ದು ಮಹಾತ್ಮ ಗಾಂಧಿ ಕಲಿಸಿದ್ದ ಸತ್ಯಾಗ್ರಹ ವಿದ್ಯೆ. ನನ್ನ ಕಣ್ಣಲ್ಲಿ ನೀರು ಕಂಡ ಕೂಡಲೇ, ನನ್ನ ಮುಖದಲ್ಲಿ ಬೇಸರ ನೋವು ಕಂಡ ಕೂಡಲೇ ಅವರು ದಾರಿಗೆ ಬರುತ್ತಿದ್ದರು.

ಮೊದಲ ದಿನ ನಾನು ಮತ್ತು ನನ್ನ ಪತಿ ಕಾರಿನಲ್ಲಿಯೇ ಲಸ್ಸಿಯನ್ನು ಮನೆಗೆ ಹತ್ತಿರವಿದ್ದ ಶಾಲೆಗೆ ಕರೆದೊಯ್ದೆವು. ಅವಳನ್ನು ಕಳಿಸಿಕೊಡಲು ಪಪ್ಪಿ ಅಭಿ ಮನ್ಯುವೂ ಬಂದಿದ್ದವು. ಕಾರಿನಿಂದಿಳಿಯು ತ್ತಿದ್ದಂತೆ, ಶಾಲೆಯ ಮಕ್ಕಳು ಅವಳ ಸುತ್ತ ಮುತ್ತಿಕೊಂಡರು. ಬೇರೆ ಕಡೆಯಿಂದ ಬಂದ ಮರಿಯನ್ನು ಹಿಂಡಿನ ಜಿಂಕೆ ಮರಿಗಳು ಮೂಸುವಂತೆ, ನೆಕ್ಕುವಂತೆ, ಅಲ್ಲಿಯ ಮಕ್ಕಳು ಲಸ್ಸಿಯ ಕೆನ್ನೆಯನ್ನು ಸವರು ತ್ತಿದ್ದರು, ಮೂಗಿನ ಮೇಲೆ ಬೆರಳಾಡಿಸು ತ್ತಿದ್ದರು. ಕೂದಲನ್ನು ನೇವರಿಸುತ್ತಿದ್ದರು. ಅಷ್ಟರಲ್ಲಿ ಉಪಾಧ್ಯಾಯಿನಿ ಬಂದು ಲಸ್ಸಿ ಯನ್ನೆತ್ತಿಕೊಂಡು ಮುದ್ದಾಡಿ ಮುಂಡಾಡಿ, ಬಿಸ್ಕತ್ತು ಕೊಟ್ಟು ಲಲ್ಲೆಗರೆದಳು. ನಾವು ಟಾಟಾ ಹೇಳಿ ಹಿಂದಿರುಗುವಾಗ ಅವಳು ಬಿಟ್ಟಕಣ್ಣಿಂದ ನಮ್ಮನ್ನು ನೋಡುತ್ತಿದ್ದಳೆ ವಿನಾ ಅಳಲಿಲ್ಲ. ಗಲಾಟೆ ಮಾಡಲಿಲ್ಲ. ಪತಿಯ ಮುಖದ ಮೇಲೆ ಏಕೊ ಏನೊ ವಿಷಾದದ ಛಾಯೆ ಸುಳಿದು ಮರೆ ಯಾಯಿತು.

ಮನೆಗೆ ಹಿಂದಿರುಗಿದಾಗ ಪಪ್ಪಿಯನ್ನೂ ಅಭಿಮನ್ಯುವನ್ನೂ ಕಾರಿನಿಂದ ಕೆಳಗೆ ಇಳಿಸ ಬೇಕಾದರೆ ಕಷ್ಟವಾಯಿತು. ಮನೆಯೊಳಗೆ, ಉದ್ಯಾನದಲ್ಲಿ ಲಸ್ಸಿಯ ಹಿಂದೆಯೇ ಓಡಾಡು ತ್ತಿದ್ದ ಪಪ್ಪಿ ಅವಳ ಮಂಚದ ಪಾದದಡಿ ಬಿದ್ದುಕೊಂಡಿತ್ತು. ಕರೆದರೂ ಬರುತ್ತಿರ

ಲಿಲ್ಲ. ಅಭಿಮನ್ಯುವಂತು ಮಂಚದ ಮೇಲೆ ಅವಳ ತಲೆದಿಂಬಿನ ಬಳಿ ನಿರ್ಜೀವವಾಗಿ, ನಿಷ್ಪಂದವಾಗಿ ಪವಡಿಸಿತ್ತು. ಮಧ್ಯಾಹ್ನ ೧೨ ಗಂಟೆಗೆ ನಾನೇ ಹೋಗಿ ಲಸ್ಸಿಯನ್ನು ಕರೆದುಕೊಂಡು ಬಂದೆ. ಗೇಟು ತೆರೆದು 'ಪಪ್ಪಿ, ಪಪ್ಪೀ, ಅಭಿ, ಅಭೀ' ಎಂದು ಲಸ್ಸಿ ಕೂಗುತ್ತಿದ್ದಂತೆ, ಪಪ್ಪಿ ಉತ್ಸಾಹದಿಂದ, ಆನಂದದಿಂದ, ಪ್ರೇಮೋನ್ಮಾದದಿಂದ ಬಗುಳುತ್ತ, ಹಾರಿಬಂತು; ಅವಳ ಮೇಲೆ ನೆಗೆಯುತ್ತ, ಸುತ್ತ ಕುಣಿಯುತ್ತ, ಅವಳ ಕೈಯನ್ನು ನೆಕ್ಕುತ್ತ, 'ನನ್ನನ್ನು ಬಿಟ್ಟು ಎಲ್ಲಿಗೆ ಹೋಗಿದ್ದೆ?' ಎಂದು ಕೇಳುವಂತೆ ಗೊರಗುಡುತ್ತಿತ್ತು. ಲಸ್ಸಿ ಅದನ್ನಪ್ಪಿಕೊಂಡು 'ನನ್ನ ಚಿನ್ನ, ನನ್ನ ಮುದ್ದೆ' ಎಂದು ಅದರ ತಲೆಯನ್ನು ನೇವರಿಸಿದಳು. ನಾಲ್ಕು ದಾಪಿನಲ್ಲಿ ಮಲಗುವ ಕೋಣೆಯನ್ನು ಸೇರಿ, ಅಭಿಮನ್ಯುವನ್ನೆತ್ತಿಕೊಂಡು 'ಮಾತಾಡು ಮರಿ, ನಿನಗೆ ಕೋಪವೆ? ಓದು ಕಲಿಯಲು ಹೋಗಿದ್ದೆ ಕಣೋ. ನಿನಗಿಲ್ಲಿಯೆ ಕಲಿಸುತ್ತೇನೆ' ಎಂದವಳು ತನ್ನಪ್ಪುಗೆಯಲ್ಲಿ ಸೇರಿಸಿಕೊಂಡಳು. ಪಪ್ಪಿ ಅವಳನ್ನು ಮೂಸುತ್ತ, ನೆಗೆಯುತ್ತ ಕೆಳಗೆ ಓಡಾಡುತ್ತಿದ್ದರೆ, ಅಭಿಮನ್ಯು ಅವಳ ಒಂದು ತೋಳಿನಿಂದ ಮತ್ತೊಂದು ತೋಳಿಗೆ, ಹಾರಾಡುತ್ತಿದ್ದನು; ಅವಳ ನೆತ್ತಿಯನ್ನೇರಿ ಕುಳಿತುಕೊಳ್ಳುತ್ತಿದ್ದನು.

'ಸಾಕು ಬಾರವ್ವ, ಚಿನ್ನ. ಪಪ್ಪಿಯೂ ಅನ್ನ ತಿಂದಿಲ್ಲ. ನೀನೂ ಸಾಕಾಗಿದ್ದೀಯೆ. ಉಣ್ಣು ಬಾ. ಆಮೇಲೆ ನಿನ್ನನ್ನು ತಟ್ಟಿ ಮಲಗಿಸುತ್ತೇನೆ' ಎಂದು ನಾನವಳನ್ನು ಕರೆದೆ. ಪಪ್ಪಿ ಅಭಿಮನ್ಯು ಇಬ್ಬರೂ ಅವಳ ಗಂಟಿಕೊಂಡೇ ಬಂದುವು. ಊಟ ಮುಗಿದ ನಂತರ ಪಪ್ಪಿ ಅಭಿಮನ್ಯುಗಳನ್ನು ತಬ್ಬಿಕೊಂಡೇ ಲಸ್ಸಿ ಆಯಾಗಿ ಮಲಗಿದಳು. ಇದು ಅವಳ ನಿತ್ಯದ ಪರಿಪಾಠ.

ಅಕ್ಕಂದಿರು ಶಾಲೆಯಿಂದ ಹಿಂದಿರುಗಿದ ನಂತರ ಅವರೊಡನೆ ಕುಣಿದದ್ದೂ ಕುಣಿದದ್ದೇ. ಒಮ್ಮೆ ಆಟವಾಡುವಾಗ ಕಾಲು ಜಾರಿ ಬಿದ್ದು, ಏಳೆಂಟು ದಿನ ಲಸ್ಸಿ ಹಾಸಿಗೆ ಹಿಡಿದಾಗ, ಅಕ್ಕಂದಿರಿಗಾದ ಸಂಕಟ ಅಷ್ಟಿಷ್ಟಲ್ಲ. ಅವಳು ಸ್ವಲ್ಪ ನರಳಿದರೆ ಸಾಕು, ಲತಾ ಲಲಿತರ ಕಣ್ಣಲ್ಲಿ ನೀರು ಬಳಬಳನೆ ಸುರಿಯುತ್ತಿದ್ದುವು. ಅವರ ಮೂಕವೇದನೆಯನ್ನು ಕಂಡು, ನೋವನ್ನದುಮಿಕೊಳ್ಳುತ್ತ ಲಸ್ಸಿ ಮುಗುಳುನಗೆ ಸೂಸುತ್ತಿದ್ದಳು.

ಬೇಸಗೆಯ ಕಾಲವಾದ್ದರಿಂದ ಒಂದು ರಾತ್ರಿ ತಾರಸಿಯ ಮೇಲೆ ಮಲಗುವುದೆಂದು ಲಸ್ಸಿ ಹಟ ಹಿಡಿದಳು. ಅವಳ ನಾಲಗೆಯಿಂದ ಅಪೇಕ್ಷೆಯ ಮಾತೊಂದು ಹೊರಡುವುದೆ ತಡ, ಮನೆಯವರೆಲ್ಲೂ ಅದನ್ನು ಪೂರೈಸಲು ಸಿದ್ಧರಿದ್ದರು. ಹಾಸುಗೆಗಳೆಲ್ಲ ಮೇಲಕ್ಕೆ ಹಾರಿದುವು. ಎಲ್ಲರೂ ತಾರಸಿ ಸೇರಿದ ಮೇಲೆ ಪಪ್ಪಿ ಅಭಿಮನ್ಯು ಕೆಳಗಿರುವುದುಂಟೆ? ಅಪ್ಪ ಅಮ್ಮನ ನಡುವೆ ಮಲಗಿದ್ದ ಲಸ್ಸಿ ಗಗನವನ್ನೆ ದಿಟ್ಟಿಸುತ್ತ 'ಅಬ್ಬ, ಎಷ್ಟೊಂದು ಚುಕ್ಕಿಗಳಪ್ಪ ಅಲ್ಲಿ. ಅವು ಕರೆದರೆ ನಮ್ಮ ಬಳಿ ಬರುತ್ತವೆಯೆ?' ಎಂದು ಕೇಳಿದಳು. 'ಇಲ್ಲಮ್ಮ, ಬರುವುದಿಲ್ಲ.' ಎಂದು ತಂದೆ ಉತ್ತರಿಸಿದರು. 'ನಾನೇ ಅವುಗಳಿರುವಲ್ಲಿಗೆ ಹೋದರೆ?' 'ಅದು ಸಾಧ್ಯವಿಲ್ಲ. ಹಾಗೆಲ್ಲ ಮಾತಾಡಬಾರದು, ಮಗು. ಸುಮ್ಮನೆ ನಿದ್ದೆ ಮಾಡು.' 'ಅವು ಕೈಗೆ ಸಿಕ್ಕಿದರೆ ಹಣೆಗೆ ಹಚ್ಚಿಕೊಳ್ಳಬಹುದಲ್ಲವೆ? ಆಗ ಕತ್ತಲೆಯ ಕೋಣೆಯಲ್ಲಿಯೂ ಬೆಳಕು ಚೆಲ್ಲುತ್ತದೆ.'

'ಅವು ತುಂಬ ದೂರದಲ್ಲಿವೆ. ಅಲ್ಲಿಗೆ ಯಾರೂ ಹೋಗಲಾರರು.' 'ಸತ್ತವರು ನಕ್ಷತ್ರಗಳಾಗುತ್ತಾರಂತಮ್ಮ' 'ಯಾರೇ ಹೇಳಿದವರು?' 'ನನ್ನ ತರಗತಿಯ ಸಂಗಾತಿ ತಾರೆ.' 'ಅದೆಲ್ಲ ಕಟ್ಟುಕತೆ. ನಂಬಬಾರದು, ನನ್ನ ಮುದ್ದೆ' ಹೀಗೆ ಮಾತಾಡುತ್ತಿದ್ದಂತೆ ಅವಳು ನಿದ್ದೆ ಹೋದಳು.

ಏಳೆಂಟು ದಿನಗಳಿಂದ ಲಸ್ಸಿ ಶಾಲೆಗೆ ಹೋಗಿರಲಿಲ್ಲವಾದ್ದರಿಂದ, ಅವಳ ತರಗತಿಯ ಉಪಾಧ್ಯಾಯಿನಿಯೇ ಅವಳನ್ನು ನೋಡುವ ಸಲುವಾಗಿ ಮನೆಗೆ ಬಂದಳು. ಅವಳ ಬರವಿನಿಂದ ಲಸ್ಸಿಗಾದ ಸಂಭ್ರಮ ಹೇಳತೀರದು. ನಾನು ಉಪಾಧ್ಯಾಯಿನಿಯನ್ನು ಉಪಚರಿಸಿದೆ. ನಾನು ಮಾತಾಡಿಕೊಳ್ಳುವಾಗ ಅವಳು ಪಪ್ಪಿಯೊಡನೆ ಆಟವಾಡಿಕೊಳ್ಳುತ್ತಿದ್ದಳು. 'ನೋಡಿಯಮ್ಮ, ಲಸ್ಸಿ ಶಾಲೆಗೆ ಬರುತ್ತಿಲ್ಲವಾದ್ದರಿಂದ ನನಗೆ ಮಾತ್ರವಲ್ಲ, ಮಕ್ಕಳಿಗೆಲ್ಲ ತುಂಬ ಬೇಸರ. "ಲಸ್ಸಿಗೆ ಹುಷಾರಿಲ್ಲವೆ? ಯಾವಾಗ ಬರುತ್ತಾಳೆ?" ಎಂದು ಪ್ರತಿನಿತ್ಯ ಕೇಳುತ್ತಾರೆ. ಐದಾರು ವರ್ಷಕ್ಕೆ ನಿಮ್ಮ ಮಗು ಅದೆಂಥ ಜಾಣೆ! ಅವಳು ಕೇಳುವ ಪ್ರಶ್ನೆಗಳಿಗೆ ನಾವೆಲ್ಲ ಡಂಗಾಗುತ್ತೇವೆ. "ಮೇಡಂ, ಗುಲಾಬಿಯಲ್ಲಿ ಹಲವು ಬಣ್ಣಗಳಿವೆಯಲ್ಲ; ಏಕೆ?" ಎಂದು ಕೇಳುತ್ತಾಳೆ. "ಒಂದೊಂದೂ ಒಂದೊಂದು ಬಣಕ್ಕೆ ಸೇರಿದುವಾದ್ದರಿಂದ" ಎಂದು ಉತ್ತರಿಸಿದರೆ "ಅಷ್ಟೊಂದು ಬಣ್ಣಗಳೇಕೆ?" ಎಂದು ಮರು ಪ್ರಶ್ನೆ ಎಸೆಯುತ್ತಾಳೆ. "ಕೋಳಿಮೊಟ್ಟೆಗಳ ಬಣ್ಣ ಒಂದೆಯಾದರೂ ಹುಟ್ಟುವ ಮರಿಗಳ ಬಣ್ಣ ಬೇರೆ ಬೇರೆಯಲ್ಲ, ಏಕೆ? ಹಸು ಕರಿಯದಾಗಲಿ, ಕೆಂಬಣ್ಣದ್ದಾಗಲಿ. ಹಾಲು ಮಾತ್ರ ಬಿಳಿ, ಏಕೆ?" ಎಂದು ಕೇಳುತ್ತಾಳೆ. ಏನುತ್ತರ ಹೇಳಿದರೂ ಅವಳಿಗೆ ತೃಪ್ತಿಯಾಗೊಲ್ಲ. "ಕೊನೆಗೆ ಅದೆಲ್ಲ ಭಗವದಿಚ್ಛೆ" ಎಂದು ಹೇಳಿಬಿಡುತ್ತೇನೆ. "ಭಗವಂತ ಹೇಗಿದ್ದಾನೆ? ಎಲ್ಲಿದ್ದಾನೆ? ಅವನನ್ನು ಭೇಟಿ ಮಾಡಬಹುದೆ?" ಎಂದು ಕೇಳುತ್ತಾಳೆ. "ದೊಡ್ಡವಳಾದ ಮೇಲೆ ನೋಡಬಹುದು" ಎಂದು ಹೇಳಿದ್ದೆ ತಡ "ನೀವು ನೋಡಿದ್ದೀರಾ?" ಎಂದು ಸವಾಲೊಡ್ಡುತ್ತಾಳೆ. ಅವಳ ಮಾತನ್ನು ಕೇಳುವುದೇ ಚಂದ. ಇಂಥ ಮಗಳನ್ನು ಪಡೆದದ್ದೇ ನಿಮ್ಮ ಪುಣ್ಯ.' ಏನು ಮಾತಾಡುವುದೊ ನನಗೆ ತಿಳಿಯಲಿಲ್ಲ. ಏಕೊ, ಏನೋ, ನನಗರಿವಿಲ್ಲದಂತೆಯೇ ನಿಟ್ಟುಸಿರೊಂದು ನನ್ನ ನಾಸಿಕದಿಂದ ಹೊರ ಹೊಮ್ಮಿತು.

ಉಪಾಧ್ಯಾಯಿನಿ ಲಸ್ಸಿಯನ್ನು ಹತ್ತಿರಕ್ಕೆ ಕರೆದು 'ಜಾಗ್ರತೆ ಶಾಲೆಗೆ ಬಂದುಬಿಡು ಮಗು. ಮುಂದಿನ ವಾರ ವಸಂತೋತ್ಸವ; ಶಾಲೆಯಲ್ಲಿ ವನಮಹೋತ್ಸವವನ್ನು ಆಚರಿಸುತ್ತೇವೆ' ಎಂದು ಹೇಳಿ ಹೋದರು. ಲಸ್ಸಿಯ ದಿನಚರಿ ಮತ್ತೆ ಪ್ರಾರಂಭವಾಯಿತು. ವನಮಹೋತ್ಸವದ ದಿನ ಶಾಲೆಯಿಂದ ಬರುವಾಗ ಅವಳೊಂದು ಎರಡೂವರೆ ಅಡಿ ಉದ್ದದ ಕಡ್ಡಿಯನ್ನು ಹಿಡಿದುಕೊಂಡು ಮನೆಗೆ ಬಂದಳು. ಅವಳಪ್ಪ ಮನೆಯಲ್ಲಿದ್ದರು. ತನ್ನ ಮಲಗುಕೋಣೆಯ ಕಿಟಕಿಯ ಬಳಿ ಅದನ್ನು ನೆಡಬೇಕೆಂದವಳು ಹಟ ಮಾಡಿದಳು. 'ಎಲೆಯಿಲ್ಲ, ಚಿಗುರಿಲ್ಲ. ಬೇರು ಸಹ ಸರಿಯಾಗಿ ಬಂದಿಲ್ಲ. ನೆಟ್ಟರೆ ಪ್ರಯೋಜನವೇನು?' ಎಂದು ಅಪ್ಪ ಹೇಳಿದರೂ ಅವಳು ಹಟ ಬಿಡಲಿಲ್ಲ, ಅವಳೇ ಪಿಕಾಸಿಯನ್ನು ತಂದಳು. ಅಪ್ಪ ಗುಳಿ ತೋಡಿದರು; ಅವಳೇ ಆ ಬೋಳು ಕಡ್ಡಿಯನ್ನು ನೆಟ್ಟಳು, ನೀರು ಹುಯ್ದಳು.

ಬೆಳಗಾಗ ಹಾಸುಗೆಯಿಂದೇಳುತ್ತಿದ್ದಂತೆ ಅವಳು ಅಕ್ಕಂದಿರ ಕೋಣೆಗೆ ಹೋಗಿ ಕೋಲಾಹಲ ವುಂಟುಮಾಡುತ್ತಿದ್ದಳಷ್ಟೆ. ಈಚೀಚೆಗಂತು ಆ ಪರಿಪಾಠ ನಿಂತು ಹೋಗಿತ್ತು. ಈಗವಳ ಗಮನವೆಲ್ಲ ತಾನು ನೆಟ್ಟ ಕಡ್ಡಿಯ ಮೇಲೆ. ಹಾಸುಗೆಯಿಂದೆದ್ದ ಕೂಡಲೇ ಅವಳು ಕಡ್ಡಿಯ ಬಳಿಗೆ ಓಡುತ್ತಿದ್ದಳು. ಪಪ್ಪಿಯೂ ಅವಳನ್ನು ಹಿಂಬಾಲಿಸುತ್ತಿತ್ತು. ತುದಿಯಿಂದ ತಾಳಿನವರೆಗೆ ಅದನ್ನು ಸವರುತ್ತಿದ್ದಳು; ಮುತ್ತಿಕ್ಕುತ್ತಿದ್ದಳು; ನೀರು ಹೊಯ್ಯುತ್ತಿದ್ದಳು; 'ಓ ರವಿದೇವ, ಇವಳು ನನ್ನ ಮುದ್ದು ಕಂದ. ಒಣಗಿಸಬೇಡಪ್ಪ. ಇವಳು ಬಿಡುವ ಮೊದಲ ಹೂವನ್ನು ನಿನಗರ್ಪಿಸುತ್ತೇನೆ' ಎಂದು ಪ್ರಾರ್ಥಿಸುತ್ತಿದ್ದಳು. ಹಬ್ಬ ಹರಿದಿನ ಬಂತೆಂದರೆ, ಕುಂಕುಮ ಅರಿಸಿನ ಹಚ್ಚಿ, ಕರ್ಪೂರ ಉರಿಸಿ ಪೂಜಿಸುತ್ತಿದ್ದಳು. ಅದಕ್ಕವಳು ಇಟ್ಟ ಹೆಸರು 'ಶಕುಂತಲಾ.'

ಒಂದು ದಿನ ಬೆಳಗ್ಗೆ ಶಕುಂತಲೆಯ ಬಳಿಗೆ ಹೋದ ಅವಳು ಮನೆಯ ಚಾವಣಿಯೇ ಎದ್ದು ಹೋಗುವಂತೆ ಕೂಗಿಕೊಂಡಳು: 'ಬನ್ನಿ ಬನ್ನಿ, ಎಲ್ಲರೂ ಬನ್ನಿ. ನನ್ನ ಶಕುಂತಲೆ ಕಿಲಕಿಲನೆ ನಗುತ್ತಿದ್ದಾಳೆ ನೋಡಿ' ಎಂದು. ಏನಾಯಿತೊ ಎಂದು ಗಾಬರಿಯಿಂದ ಎಲ್ಲರೂ ಬಂದು ಮೈಯೆಲ್ಲ ಕಣ್ಣಾಗಿ ನೋಡಿದಾಗ, ಆ ಕಡ್ಡಿಯಲ್ಲಿ ಚಿನ್ನದ ಮುಳಾಮು ಸವರಿದಂತೆ ಮಿರುಗುತ್ತಿದ್ದ ಮೂರ್ನಾಲ್ಕು-ಬೇಳೆಯಗಲದ ಎಲೆಗಳು ಕಣ್ಣಿಗೆ ಬಿದ್ದುವು. ಲಸ್ಸಿ ಕೈ ಚಪ್ಪಾಳೆ ತಟ್ಟಿಕೊಂಡು 'ಜೀವ ಬಂತು ಬಾಲೆಗೆ' ಎಂದು ಅದರ ಸುತ್ತ ಕುಣಿದದ್ದೂ ಕುಣಿದದ್ದೇ. ಪಪ್ಪಿಯೂ ಆನಂದದಿಂದ ಬಾಲವಲ್ಲಾಡಿಸುತ್ತಾ ಅವಳ ಹಿಂದೆ ಓಡಾಡುತ್ತಿತ್ತು, ಹಾರಾಡುತ್ತಿತ್ತು; ಬೌಬೌ ಎಂದು ನಿನದಿಸುತ್ತಿತ್ತು. ಅದರ ಕಣ್ಣುಗಳಲ್ಲಿ ಕಾಂತಿ ಮಿರುಗುತ್ತಿತ್ತು. ಅಂದಿನಿಂದ ಶಕುಂತಲೆ ಉದ್ಯಾನವ ರಾಣಿಯಾದಳು.

ರಜಾದಿನಗಳಲ್ಲೊಂದು ದಿನ ಲತಾ ಕತ್ತರಕ ಯಂತ್ರದಿಂದ ಹುಲ್ಲು ಕತ್ತರಿಸುತ್ತಿದ್ದಳು. ಅಕಸ್ಮಾತ್ತಾಗಿ ಕತ್ತರಕದ ಚಾಚು ಮೊಳೆಯೊಂದು ಶಕುಂತಲೆಗೆ ತಗುಲಿತು. ಅದರ ಒಂದೆರಡು ಎಲೆ ಮುರಿದು ಬಿದ್ದುವು. 'ಅಯ್ಯೊ;' ಎಂದು ಲತಾ ಕಿರಿಚಿಕೊಂಡಳು. ಮನೆಯವರೆಲ್ಲರೂ ಓಡೋಡಿ ಬಂದರು. ಕೆಳಗೆ ಬಿದ್ದಿದ್ದ ಎಲೆಗಳನ್ನು ನೋಡಿದ ಕೂಡಲೇ ಲಸ್ಸಿಗೆ ಬವಳಿ ಬಂದಂತಾಯಿತು. 'ಅಯ್ಯೋ, ನನ್ನ ಶಕುಂತಲೆಗೆ ನೋವಾಯಿತಲ್ಲೆ' ಎಂದು ಶಕುಂತಲೆಯನ್ನು ತಬ್ಬಿಕೊಂಡು ಅಳಲಾರಂಭಿಸಿದಳು. ಲತಾ ಲಲಿತೆಯರೂ ಲಸ್ಸಿಯನ್ನು ತಬ್ಬಿಕೊಂಡು 'ತಪ್ಪಾಯ್ತು, ನನ್ನ ಚಿನ್ನ' ಎಂದು ಗೋಳ್ಗರೆಯಲಾರಂಭಿಸಿದರು. ಪಪ್ಪಿಯೂ ನಿಷ್ಪಂದವಾಗಿ ಅವರನ್ನೆ ನೋಡುತ್ತಿತ್ತು. ತನಗೇನೂ ನೋವಾಗಲಿಲ್ಲವೆಂಬಂತೆ ಶಕುಂತಲೆ ನಗುತ್ತಿದ್ದಳು. 'ಹೇಗೂ ಅದು ಬಲಿತ ಎಲೆ. ಈ ಹೊತ್ತಲ್ಲ, ನಾಳೆಯಾದರೂ ಅವು ಬಿದ್ದು ಹೋಗುತ್ತವೆ. ತುದಿಯಲ್ಲಿ ಅದೆಷ್ಟು ಹೊಸ ಎಲೆಗಳು ಬಂದಿವೆ, ನೋಡು' ಎಂದು ಮಕ್ಕಳನ್ನು ನಾನೂ ಅವರೂ ಸಮಾಧಾನ ಪಡಿಸಿದೆವು. ಲಸ್ಸಿಯೇ ಸಮಾಧಾನಪಡಿಸುವ ತನಕ ಲತಾಳ ಅಳು ನಿಲ್ಲಲಿಲ್ಲ.

ಲತಾ ಲಲಿತೆಯರ ನೆರವಿನಿಂದ ಲಸ್ಸಿ ಎಲೆ ಬಿದ್ದ ಜಾಗದಲ್ಲಿ ಗಿಡದ ಸುತ್ತ

ಕೆಮ್ಮಣ್ಣು ಬಟ್ಟೆ ಕಟ್ಟಿ, ಮುದ್ದಿಸಿ, ‘ಈಗ ಮಲಗಿಕೊ, ನಿದ್ದೆ ಮಾಡು. ನಾಳೆಯ ಹೊತ್ತಿಗೆ ಎಲ್ಲ ಸರಿಹೋಗುತ್ತದೆ’ ಎಂದು ಮುತ್ತಿಕ್ಕಿ ಶಕುಂತಲೆಯನ್ನು ಸಂತೈಸಿದಳು. ‘ಹಳೆಯ ಎಲೆ ಇಂದಲ್ಲ ನಾಳೆ ಬಿದ್ದು ಹೋಗುತ್ತವೆ’ ಎಂಬ ಅಪ್ಪ-ಅವ್ವರ ಮಾತು ಅವಳ ತಲೆಯಲ್ಲಿ ಗುಂಯ್ಗುಡುತ್ತಿತ್ತು. ಒಮ್ಮೊಮ್ಮೆ ನಿದ್ದೆಯಲ್ಲಿ ಅದೇ ಮಾತುಗಳನ್ನು ಕನವರಿಸುತ್ತಿದ್ದಳು. ಅದರ ಎಲೆ ಮೊಗ್ಗುಗಳನ್ನು ನೋಡಿದಾಗ ದಾಸವಾಳವೆಂದು ಖಚಿತವಾಯಿತು.

ಅವಳ ಆರನೆಯ ಹುಟ್ಟುಹಬ್ಬವನ್ನು ತುಂಬ ವಿಜೃಂಭಣೆಯಿಂದ ಆಚರಿಸಲಾಯಿತು. ಆ ದಿನ ಬೆಳಗಿನಿಂದಲೇ ಲತಾ ಲಲಿತ ಲಸಿತರ ಮತ್ತು ಪಪ್ಪಿಯ ಸಡಗರ ಅಪಾರ. ಆಳುಗಳು ಶಕುಂತಲೆಗೊಂದು ಗುಡಿಯನ್ನು ನಿರ್ಮಿಸಿದರೆಂಬಂತೆ ಬಟ್ಟೆಯ ಚಪ್ಪರವನ್ನು ನಿರ್ಮಿಸಿದರು. ಅವಳನ್ನು ಬಣ್ಣಬಣ್ಣದ ವಿದ್ಯುದ್ದೀಪಗಳಿಂದ ಅಲಂಕರಿಸಲಾಯಿತು. ಶ್ವೇತ ಶುಭ್ರ ವಸ್ತ್ರವನ್ನು ಮುಚ್ಚಿದ ಮೇಜೊಂದನ್ನು ಅವಳ ಮುಂದಿರಿಸಲಾಯಿತು. ಅಪರಾಹ್ನ ನಾಲ್ಕು ಗಂಟೆಯ ತನಕ ಅಕ್ಕತಂಗಿಯರು ಸುತ್ತಮುತ್ತಣ ಜಾಗವನ್ನು ಶುಚಿಗೊಳಿಸುತ್ತ, ಆಸನಗಳನ್ನು ವ್ಯವಸ್ಥೆಗೊಳಿಸುತ್ತ, ಭಜನೆ ಮಾಡುತ್ತ ಚಪ್ಪರವನ್ನು ಬಿಟ್ಟಲುಗಲಿಲ್ಲ. ಐವತ್ತು ಅರುವತ್ತು ಮಂದಿ ಗೆಳತಿಯರೂ ಮೂರ್ನಾಲ್ಕು ಮಂದಿ ಉಪಾಧ್ಯಾಯನಿಯರೂ ಹುಟ್ಟು ಹಬ್ಬಕ್ಕೆ ಬಂದಿದ್ದರು. ಲಸಿಕ ಸರ್ವಾಲಂಕಾರ ಭೂಷಿತೆಯಾಗಿ ಶಕುಂತಲೆಯ ಪಕ್ಕದಲ್ಲಿಯೇ ಕುರ್ಚಿಯಲ್ಲಿ ಕುಳಿತಿದ್ದಳು. ಅಕ್ಕಂದಿರೇ ಅತಿಥಿಗಳನ್ನು ಬರಮಾಡಿಕೊಳ್ಳುತ್ತಿದ್ದರು. ಬಂದವರನ್ನೆಲ್ಲ ಮೂಸುತ್ತ, ಅವರ ಸುತ್ತ ಚಂಗನೆ ನೆಗೆಯುತ್ತ, ಪಪ್ಪಿಯೂ ಚಪ್ಪರದಲ್ಲೆಲ್ಲ ಓಡಾಡುತ್ತಿತ್ತು. ಶಕುಂತಲೆಯ ಮತ್ತೊಂದು ಪಕ್ಕದ ಸಣ್ಣ ಮೇಜಿನ ಮೇಲೆ ಅಭಿಮನ್ಯುವೂ ಕಣ್ಣು ಪಿಳುಕಿಸುತ್ತ ವಿರಾಜಮಾನವಾಗಿತ್ತು. ಹಾಡುಗಳ ಮಧ್ಯೆ ಆರು ಮೋಂಬತ್ತಿಗಳನ್ನು ಹತ್ತಿಸಿ ಕೇಕ್ ಕತ್ತರಿಸಿದ ನಂತರ ಶಕುಂತಲೆಗೆ ಮತ್ತು ಲಸಿತಳಿಗೆ ಆರತಿ ಎತ್ತಲಾಯಿತು. ಉಡುಗೊರೆಗಳ ವಿತರಣೆಯ ನಂತರ ತಿಂಡಿ ತೀರ್ಥಗಳನ್ನು ಬಂದವರಿಗೆಲ್ಲ ಹಂಚಲಾಯಿತು. ‘ಏನು ಪ್ರಸನ್ನತೆ, ಎಂಥ ಗಾಂಭೀರ್ಯ, ಎಂಥ ತೇಜಸ್ಸು, ಸಾಕ್ಷಾತ್ ಲಕ್ಷ್ಮೀ ಸರಸ್ವತೀಯರೆ ಒಂದಾಗಿ ಇವಳ ಮೈಯಲ್ಲಿ ಸೇರಿಕೊಂಡಿರುವಂತೆ ತೋರುತ್ತದೆ’ ಎಂದು ಬಂದವರೆಲ್ಲ ಹೇಳಿಕೊಳ್ಳುತ್ತಿದ್ದರು.

– ೨ –

ಮುಂದಿನ ಐದಾರು ತಿಂಗಳಲ್ಲೊಂದು ದಿನ ಶಾಲೆಯಿಂದ ಬರುತ್ತಿದ್ದಂತೆಯೆ ‘ನನಗೇಕೊ ಸುಸ್ತಾಗುತ್ತಿದೆ, ಅಮ್ಮ’ ಎಂದು ಹೇಳಿ ಲಸಿತ ಹಾಸುಗೆಯನ್ನು ಹಿಡಿದಳು. ‘ಊಟ ಬೇಡಮ್ಮ, ಒಂದು ಲೋಟ ಹಾಲು ಸಾಕು’ ಎಂದಳು. ನಾನು ಮತ್ತು ನನ್ನ ಪತಿ ಅವಳ ಬಳಿಯೇ ಮಲಗಿಕೊಂಡೆವು. ಅವಳು ಆಗಾಗ್ಗೆ ಕನವರಿಸುತ್ತಿದ್ದಳು. ‘ಅಗೋ, ಆಗಸದಲ್ಲಿ ನಕ್ಷತ್ರ. ನನ್ನನ್ನು ಕರೆಯುತ್ತಿದೆ’ ಎಂದು ಕನವರಿಸುತ್ತಿದ್ದಳು. ಅವಳ ಮೈ ಅಲುಗಿಸಿ, ಎಬ್ಬಿಸಿ ‘ಏನು ಚಿನ್ನ, ಹೇಗಾಗುತ್ತಿದೆ?’ ಎಂದು ನಾನು ಕೇಳಿದೆ. ‘ನಾನು ಪಪ್ಪಿ ಸಮೇತ ನಕ್ಷತ್ರಗಳೊಡನೆ ಆಟವಾಡು

ತ್ತಿದ್ದೆ, ಅಮ್ಮ' ಎಂದಳು. ನನಗೇಕೋ ಗಾಬರಿಯಾಯಿತು. ನನ್ನ ಪತಿ ಅವಳ ಮೈಯನ್ನು ಮುಟ್ಟಿ ನೋಡಿ 'ಜ್ವರ ಕಾಯುತ್ತಿದೆ' ಎಂದರು.

ನಾವಿಬ್ಬರೂ ಬೆಳಕು ಹರಿಯುವುದನ್ನೆ ಕಾಯುತ್ತಿದ್ದೆವು. ಕುಟುಂಬದ ವೈದ್ಯರು ಬಂದು ನೋಡಿ ಮದ್ದು ಕೊಟ್ಟರು. ಎರಡು ಮೂರು ದಿನಗಳಾದರೂ ಜ್ವರ ಆರಲಿಲ್ಲ. ಇಂಜಕ್ಷನ್ ಕೊಟ್ಟರು. ಜ್ವರ ಬಿಟ್ಟು ಬಿಟ್ಟು ಬರುತ್ತಿತ್ತು. 'ಅಮ್ಮ, ಶಾಲೆಗೆ ಹೋಗಬೇಡವೆ? ಏಳೆಂಟು ದಿನಗಳಾದುವಲ್ಲ!' ಎಂದು ಲಸಿತ ಮೇಲಿಂದ ಮೇಲೆ ಕೇಳುತ್ತಿದ್ದಳು. 'ಜ್ವರ ವಾಸಿಯಾದ ನಂತರ ಹೋಗುವಿಯಂತೆ. ನಿನ್ನ ಕೆಲವು ಗೆಳತಿಯರೂ ಉಪಾಧ್ಯಾಯಿನಿಯರೂ ನೀನು ಮಲಗಿದ್ದಾಗ ಬಂದು ನೋಡಿಕೊಂಡು ಹೋದರು.' ಎಂದು ಹೇಳಿದೆ. ಜ್ವರ ಕಾಯುತ್ತಿದ್ದಾಗಲೂ ದಿನಕ್ಕೆರಡು ಬಾರಿಯಾದರೂ ಶಕುಂತಲೆಯ ಬಳಿಗೆ ಹೋಗಿ, ಅವಳನ್ನು ಮುದ್ದಾಡಿ, ಮುಂಡಾಡಿ ಬರುತ್ತಿದ್ದಳು. ಊಟ ತಿಂಡಿಗಳ ಆಸೆ ಇಲ್ಲದೆ ಪಪ್ಪಿಯೂ ಲಸ್ಸಿಯ ಪಾದದ ಬಳಿ ಬಿದ್ದಿರುತ್ತಿತ್ತು. ಅಭಿಮನ್ಯುವೂ ಅವಳ ತಲೆದೆಸೆಯಲ್ಲಿ ಹಗಲಿರುಳು ಕುಳಿತಿರುತ್ತಿದ್ದ.

ಒಂದು ದಿನ ಬೆಳಗ್ಗೆ ಹಠಾತ್ತನೆ ಮನೆಗೆ ಬಂದ ಕುಟುಂಬದ ವೈದ್ಯರು 'ಲಸ್ಸಿಯನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಿದರೆ ಮೇಲೆ'ಂದು ತಿಳಿಸಿದರು. ಅಷ್ಟು ಹೊತ್ತಿಗೆ ಲಸ್ಸಿಗೆ ಎದೆನೋವು ಶುರುವಾಗಿತ್ತು. ಎರಡು ಮೂರು ದಿನ ಪರೀಕ್ಷಿಸಿದ ನಂತರ 'ಎದೆಯಲ್ಲಿ ಕೆಟ್ಟ ಹುಣ್ಣು ಬೆಳೆಯುತ್ತಿರುವಂತೆ ತೋರುತ್ತದೆ' ಎಂದು ಪ್ರಕಟಿಸಿದಾಗ ನನ್ನ ಮತ್ತು ನನ್ನ ಪತಿ ಮೂರ್ಛೆ ಬೀಳುವುದೊಂದು ಉಳಿದಿತ್ತು. ಮಕ್ಕಳನ್ನು ಪಡೆದು ನೋವನ್ನು ಅನುಭವಿಸುವುದಕ್ಕಿಂತ ಬಂಜೆಯಾಗಿದ್ದರೆ ಚೆನ್ನಾಗಿರುತ್ತಿತ್ತು ಎಂದು ನಾವಿಬ್ಬರೂ ಮಾತಾಡಿಕೊಂಡೆವು. ಕೆಲವು ಕ್ಷಣ ಜೀವನದ ಬಗ್ಗೆ ಜಿಹಾಸೆ ಮೂಡಿತು. 'ನಾವೇ ಧೈರ್ಯಚ್ಯುತರಾದರೆ ಲಸ್ಸಿಯ ಗತಿಯೇನು?' ಎಂದು ಅವಳ ಉಪಚಾರದಲ್ಲಿ ಮಗ್ನರಾದೆವು.

ಎರಡು ಮೂರು ವಾರಗಳ ತರುವಾಯ ಲಸ್ಸಿ ಮಧ್ಯರಾತ್ರಿ ನನ್ನನ್ನೆಬ್ಬಿಸಿ 'ಅಮ್ಮ, ನನ್ನ ಶರೀರವೊಂದು ಬೆಂಕಿಯ ಗುಡಾಣವಾದಂತಿದೆ' ಎಂದಳು. ಒಡನೆಯೇ ಕೆಮ್ಮಲಾರಂಭಿಸಿದಳು. ಮಾರನೆಯ ಬೆಳಗ್ಗೆ ವಸ್ತ್ರಸ್ನಾನ ಮಾಡಿಸುವಾಗ ಅವಳ ಎದೆಯ ಮೇಲೆ ಬೊಕ್ಕೆ ಕಾಣಿಸಿತು.

ಸ್ನೇಹಿತರ ಸಲಹೆಯಂತೆ ಅವಳನ್ನು ಮದ್ರಾಸಿನ ಅಪಾಲೋ ಆಸ್ಪತ್ರೆಗೆ ಕೊಂಡೊಯ್ದೆವು. ಅಲ್ಲಿ ಹಲವು ತಜ್ಞರು ಅವಳನ್ನು ಪರೀಕ್ಷಿಸಿದರು. ತಜ್ಞರಲ್ಲಿ ಏಕಾಭಿಪ್ರಾಯ ಸಾಧ್ಯವೆ? ಆ ಬೊಕ್ಕೆ ಕೆಟ್ಟ ಹುಣ್ಣೆಂದು ಬಹುಮತ ಮೂಡಿತು. ಶಸ್ತ್ರಾಗಾರದಂತೆ ರಾಶಿ ರಾಶಿ ಉಪಕರಣಗಳು ತುಂಬಿದ್ದ, ಮಹಾಪಘಾತವಾಗಿದ್ದಂತೆ ಸುತ್ತಲೂ ದಾದಿಯರು ಹಾಗೂ ವೈದ್ಯರು ನೆರೆದಿದ್ದ ಆ ಕತ್ತಲು ಬೆಳಕಿನ ಕೋಣೆಯಲ್ಲಿ ಆ ಕಡೆ ಈ ಕಡೆ ಹೊರಳಿಸಿ, 'ಉಸಿರು ಬಿಡು, ಉಸಿರು ಕಟ್ಟು' ಎಂದು ಏನೇನೊ ಶಸ್ತ್ರಗಳನ್ನು ಬಳಸಿ ವೈದ್ಯರು ಪರೀಕ್ಷಿಸುವಾಗ ಲಸ್ಸಿಗೆ ಚಿತ್ರಹಿಂಸೆಯಾಗುತ್ತಿತ್ತು. ಕೊನೆಗೊಂದು ದಿನ ಶಸ್ತ್ರಚಿಕಿತ್ಸೆ ಮಾಡಿ, ಶವದಂತಿದ್ದ ಅವಳ ದೇಹವನ್ನು ಸ್ಟ್ರೆಚರ್‌ನಲ್ಲಿ

ಮಲಗುಕೋಣೆಗೆ ತಂದು, ಮಂಚದ ಮೇಲೆ ದಾದಿಯರು ಇಳಿಸಿದಾಗ, ನಾನು ಅಳು ತಡೆದುಕೊಳ್ಳಲಾಗಲಿಲ್ಲ. ನನ್ನ ಪತಿ ಕೋಣೆಯ ಮೂಲೆಯಲ್ಲಿ ಗರಬಡಿದವರಂತೆ ನಿಷ್ಪಂದವಾಗಿ ನಿಂತಿದ್ದರು.

ಸಂಜೆಯ ಹೊತ್ತಿಗೆ ಅವಳ ಪ್ರಜ್ಞೆ ಚೇತರಿಸಿಕೊಂಡಿತು. 'ಅಮ್ಮ' ಎಂದು ಸುತ್ತಲೂ ನನ್ನನ್ನರಸಿದಳು. ದುಃಖಿಸುತ್ತ ಅವಳ ಮೇಲೆ ಬಾಗಿದಾಗ ನನ್ನ ಕಣ್ಣಿಂದ ಶಾಖಾಶ್ರು ಅವಳ ಮುಖದ ಮೇಲೆ ಹರಿದುವು. 'ಅಳಬೇಡಮ್ಮ. ನನಗೇನಾಗಿದೆ? ನನ್ನಾಣೆ ಅಳಬೇಡಮ್ಮ. ಈಗ ನಾನೆಲ್ಲಿದ್ದೇನೆ?' ಎಂದು ನನ್ನ ಮುಖವನ್ನು ಮುದ್ದಾಡಿ ಲಲ್ಲೆಗರೆದಳು. 'ಈಗ ಮದ್ರಾಸಿನ ಆಸ್ಪತ್ರೆಯಲ್ಲಿದ್ದೇವೆ' ಎಂದು ನಾನು ಉತ್ತರ ನೀಡಿದೆ. 'ಹಿಂದೆಂದೂ ಕಾಣದ ಯಾವುದೋ ಲೋಕಕ್ಕೆ ಹೋಗಿಬಂದೆನಮ್ಮ! ಅದೆಷ್ಟು ಸುಂದರ! ಮನಮೋಹಕ! ಅದೊಂದು ನಕ್ಷತ್ರಲೋಕ! ನಾನೂ ಅವುಗಳಲ್ಲೊಂದಾಗಿದ್ದೆ....' 'ಬೇಡ ಮಗು, ದಮ್ಮಯ್ಯ, ಹಾಗೆಲ್ಲ ಹೇಳಬೇಡ.' 'ಇಲ್ಲಮ್ಮ. ಅಪ್ಪ ಏಕೆ ಹಾಗೆ ನಿಂತಿದ್ದಾರೆ. ಲತಾಕ್ಕ ಲಲಿತಕ್ಕರೆಲ್ಲಿ? ಪಪ್ಪಿ? ಅಭಿ?' ನನ್ನ ಪತಿ ಯಾಂತ್ರಿಕವಾಗಿ ಮೌನವಾಗಿ ಅವಳ ಕೈಹಿಡಿದುಕೊಂಡರು. 'ಅಕ್ಕಗಳು ಮತ್ತು ಪಪ್ಪಿ ಊರಲ್ಲಿ ಮನೆ ನೋಡಿಕೊಳ್ಳುತ್ತಿದ್ದಾರೆ. ಇಗೋ ಅಭಿ!' ಎಂದು ನಾನು ಅಭಿಮನ್ಯುವನ್ನು ಅವಳ ಪಕ್ಕದಲ್ಲಿ ಕೂರಿಸಿದೆ. ಕಣ್ಣು ಮುಚ್ಚಿಕೊಂಡೇ 'ಅಭಿ, ನೀನೂ ನನ್ನೊಡನೆ ಹೊಸ ಲೋಕಕ್ಕೆ ಬರಬಹುದಿತ್ತು' ಎಂದು ನುಡಿದು ಲಸ್ಸಿ ತೆಪ್ಪಗಾದಳು. ಅವಳ ಮುಖದ ಮೇಲೆ ಶಾಂತಿ ತಾಂಡವವಾಡುತ್ತಿತ್ತು.

ಮದ್ರಾಸಿನಿಂದ ಮನೆಗೆ ಹಿಂದಿರುಗಿದ ನಂತರವೂ ಪ್ರತಿ ದಿನ ಅವಳಿಗೆ ರಾಸಾಯನಿಕ ಔಷಧೋಪಚಾರ ನಡೆಯುತ್ತಿತ್ತು. ಔಷಧ ಸೇವಿಸಿದ ಸ್ವಲ್ಪ ಹೊತ್ತಿನಲ್ಲಿ ಅವಳ ಮೈ ಗಡಗಡನೆ ನಡುಗುತ್ತಿತ್ತು. ಆಗವಳು ಅಭಿಯನ್ನು ತಬ್ಬಿಕೊಂಡು ಕಂಬಳಿಯೊಳಗೆ ನರಳುತ್ತಿದ್ದಳು. ಪಪ್ಪಿ ಮ್ಲಾನವದನದಿಂದ ಅವಳನ್ನೇ ನೋಡುತ್ತಿತ್ತು. ಆಗಾಗ್ಗೆ ಆಸ್ಪತ್ರೆಗೆ ಹೋಗಿ ವಿದ್ಯುತ್ಕಿರಣ ಪ್ರಯೋಗಕ್ಕೆ ಅವಳು ತನ್ನೆದೆಯನ್ನೊಡ್ಡಬೇಕಾಗಿತ್ತು. ಆ ಸಮಯದಲ್ಲಿ ನಾನು ಅಭಿಯನ್ನು ಕಂಕುಳಲ್ಲೆತ್ತಿಕೊಂಡು ಬಾಗಿಲಲ್ಲಿ ನಿಂತಿರುತ್ತಿದ್ದೆ.

ಲಸ್ಸಿಯ ಜೀವನ-ಮರಣಗಳ ಈ ಹೊಯ್ದಾಟದಲ್ಲಿ ನಾನು ಬಾಹ್ಯಜಗತ್ತನ್ನೇ ಮರೆತಿದ್ದೆ. ನನ್ನ ಪತಿ ಯಾಂತ್ರಿಕವಾಗಿ ತಮ್ಮ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದರು. ಲತಾಲಲಿತೆಯರು ಶಾಲೆಯಿಂದ ಬಂದ ಮೇಲೆ ಅವಳ ಹತ್ತಿರ ಕುಳಿತಿದ್ದು, ಅವಳೊಡನೆ ಇಸ್ಪೀಟು ಮೊದಲಾದ ಲಘು ಕ್ರೀಡೆಗಳಲ್ಲಿ ತೊಡಗುತ್ತಿದ್ದರು. ಆಗಾಗ್ಗೆ ಅವಳ ಮುಂದೆ ಕತೆಗಳನ್ನೋದುತ್ತಿದ್ದರು. ಹತ್ತಿರದಲ್ಲಿ ಯಾರೂ ಇಲ್ಲದಾಗ ಲಸ್ಸಿ ಶಿಶು ಸಾಹಿತ್ಯ ವಾಚನದಲ್ಲಿ ಮಗ್ನಳಾಗಿರುತ್ತಿದ್ದಳು. ರಾತ್ರಿಯ ವೇಳೆ ಅವಳಿಗೆ ನಿದ್ದೆ ಹತ್ತುವ ತನಕ ನಾನು ಕತೆ ಹೇಳುತ್ತಿದ್ದೆ; ಇಲ್ಲವೆ ಲೋಕವ್ಯವಹಾರವನ್ನು ಕುರಿತು ಮಾತನಾಡುತ್ತಿದ್ದೆವು. ಎಷ್ಟು ದಿನ ಖಾಯಿಲೆಯಲ್ಲಿ ನರಳಬೇಕಾಗುತ್ತದೆಯೋ ಎಂದು ಲಸ್ಸಿ ಚಿಂತಿಸುತ್ತಿದ್ದಂತೆ ನನಗೆ ಭಾಸವಾಗುತ್ತಿತ್ತು. ಸಾವಿನ ಬಗ್ಗೆಯೂ ಅವಳಿಗೆ ಶಂಕೆ ಮೂಡಿದ್ದಿರಬಹುದು. ಆದರೆ ಆ ಬಗ್ಗೆ ಅವ

ಕೆಂದೂ ನನ್ನನ್ನು ಪ್ರಶ್ನಿಸಲಿಲ್ಲ. ಪ್ರಶ್ನಿಸಿದ್ದರೆ ಏನು ಹೇಳಬೇಕೊ ನನಗೆ ಗೊತ್ತಿರಲಿಲ್ಲ. ಹಾಗೆಲ್ಲ ಕೇಳಿದರೆ ನನಗೆ ನೋವಾಗಬಹುದೆಂದವಳು ತಿಳಿದಿದ್ದಂತೆ ಅವಳ ನೇತ್ರ ಭಾವದಿಂದಲೇ ನನಗೆ ಅರ್ಥವಾಗುತ್ತಿತ್ತು. ತನಗೆ ತೊಂದರೆ ಆದರೂ ಸುತ್ತಮುತ್ತಣವರಿಗೆ ತೊಂದರೆಯಾಗಬಾರದೆಂದು ಅವಳು ನಟಿಸುತ್ತಿದ್ದಿರಬೇಕೆಂದು ನನಗೂ ನನ್ನ ಪತಿಗೂ ಅರಿವಾಗುತ್ತಿತ್ತು.

ಕೆಲವು ತಿಂಗಳ ವೈದ್ಯೋಪಚಾರದ ನಂತರ ಅವಳ ಎದೆಯ ಮೇಲಿನ ಬೊಕ್ಕೆ ತಗ್ಗಿತು. ಅವಳ ಕೈಕಾಲುಗಳಲ್ಲಿ ಶಕ್ತಿ ಸಂಚರಿಸಿ, ಮನೆ ಮತ್ತು ತೋಟಗಳಲ್ಲಿ ಅಡ್ಡಾಡಲಾರಂಭಿಸಿದಳು. ಪಪ್ಪಿ ಅಭಿಮನ್ಯುಗಳಿಗೂ ಹೊಸ ಚೇತನ ಬಂದಂತಾಗಿ, ಅವಳೊಡನೆ ಓಡಾಡುತ್ತಿದ್ದುವು. ಬೆಳಗ್ಗೆ ಮತ್ತು ಸಂಜೆ ಬೈಸಿಕಲ್ಲಿನ ಮೇಲೆ ಒಂದೆರಡು ಮೈಲಿ ಸವಾರಿ ಮಾಡುತ್ತಿದ್ದಳು. ಹತ್ತಿರದ ಕೊಳದಲ್ಲಿ ಈಜಾಡಿ ಬರುತ್ತಿದ್ದಳು. ಗೆಳತಿಯರ ಮನೆಗಳಿಗೂ ಹೋಗಿ ಆಟವಾಡುತ್ತಿದ್ದಳು. ಅವಳನ್ನು ನೋಡಿ ಶಕುಂತಲೆ ಕಿಲಕಿಲನೆ ನಗಲಾರಂಭಿಸಿದಳು. ಮಬ್ಬು ಕವಿದಿದ್ದ ಮನೆಯಲ್ಲಿ ಮತ್ತೆ ಬೆಳಕು ಹಬ್ಬಿತು. ಗೋಡೆ ಕಂಬ ತೊಲೆಗಳಿಗೂ ಜೀವ ಬಂದಂತೆ ಆಯಿತು. ಬಹು ದಿನಗಳಿಂದ ನಗುವನ್ನೇ ಕಾಣದ ಅಕ್ಕತಂಗಿಯರ ಮುಖಗಳಲ್ಲಿ ನಗೆಯಲರು ಮಲರಿತು. ಆದರೂ ನನ್ನ ಮತ್ತು ನನ್ನ ಪತಿಯ ಎದೆಯಲ್ಲಿ ಸಂಶಯ ಭೀತಿಗಳು ಸಂಚು ಹೂಡುತ್ತಿದ್ದುವು; ಮೇಲೆ ಮೇಲೆ ನಗುವನ್ನು ನಟಿಸುತ್ತಿದ್ದೆವು.

ಮನೆಯಲ್ಲಿ ಆ ಸಂತೋಷವಿದ್ದದ್ದು ಹತ್ತು ಹದಿನೈದು ದಿನ ಮಾತ್ರ. ಮತ್ತೆ ಲಸ್ಸಿ ಜ್ವರದ ಕಾವಿನಿಂದ ಸೋತು ಹೋದಳು. ಬೊಕ್ಕೆ ಹಿಂದಿಗಿಂತ ದಪ್ಪವಾಯಿತು; ಕೆನ್ನೆಗಳು ಗುಳಿ ಬಿದ್ದುವು; ಕಣ್ಣಿನ ಬಳಿ ಎದ್ದು ಕಾಣುತ್ತಿದ್ದುವು; ಮುಖ ಬಿಳಿಚಿಕೊಂಡಿತು. ವಿದ್ಯುತ್ ಕಿರಣ ಪ್ರಯೋಗ ಮತ್ತು ರಾಸಾಯನಿಕ ಔಷಧೋಪಚಾರಗಳನ್ನು ಹೆಚ್ಚು ಪ್ರಮಾಣದಲ್ಲಿ ನಡೆಸಲಾಯಿತು. ಇದ್ದಕ್ಕಿದ್ದಂತೆ ಒಂದು ದಿನ ಅಪರಾಹ್ನ ಅಕ್ಕಪಕ್ಕಗಳಲ್ಲಿ ಪಪ್ಪಿ ಅಭಿಮನ್ಯುಗಳನ್ನು ಮಲಗಿಸಿಕೊಂಡಿರುವಾಗಲೇ ಅವಳು ಮೂರ್ಛೆ ಹೋದಳು. ಅವಳ ಉಸಿರಾಟ ತುಂಬ ನಿಧಾನವಾಯಿತು. ವೈದ್ಯರು ಬಂದು ನಾಡಿಯ ಮಿಡಿತಕ್ಕಾಗಿ ಹುಡುಕಾಡಿದರು; ಅವರ ಮುಖದ ಮೇಲೆ ವಿಷಾದದ ಛಾಯೆ ಸುಳಿಯಿತು.

'ಕಂತು ಹೋಯಿತೆ?' ಎಂದು ನಾನು ಕೇಳಿದೆ.

'ಹೌದು, ಎಲ್ಲ ಮುಗಿಯಿತು.'

ನನ್ನ ದೊಡ್ಡ ಮಕ್ಕಳು ಲಸ್ಸಿಯ ಕೆನ್ನೆಗೆ ಮುತ್ತಿಕ್ಕುತ್ತ ಅವಳ ಕೈಗಳನ್ನೆದೆಗೊತ್ತಿಕೊಳ್ಳುತ್ತ, ರೋದಿಸಲಾರಂಭಿಸಿದುವು. ಪಪ್ಪಿಯ ಕಣ್ಣುಗಳಲ್ಲಿ ನೀರಿಣಿಕುತ್ತಿದ್ದುವು. ಅಭಿಮನ್ಯು ಮುಖವಡಿಯಾಗಿ ಬಿದ್ದಿತ್ತು. ಸುದ್ದಿ ತಿಳಿದ ಪತಿ ಓಡೋಡಿ ಬಂದು ಮಗಳ ತಲೆದೆಸೆಯಲ್ಲಿ ಕುಳಿತರು; ಅವಳು ಅಳಲಿಲ್ಲ. ಮಾತಾಡಲಿಲ್ಲ. ಬೆಪ್ಪಮರಿದಂತಿದ್ದರು. ನನ್ನ ಕಣ್ಣುಗಳು ಎಂದೋ ಬತ್ತಿ ಹೋಗಿದ್ದುದರಿಂದ ನೀರು ಬರಲಿಲ್ಲ. 'ಆ ಸುಂದರ ಪುಷ್ಪ ಭೂಮಿಗೆ ಸಲ್ಲದು; ಅದು ತನಗೆ ಬೇಕೆಂದು ದೇವರು ಸೆಳೆದುಕೊಂಡ' ಎಂದು ಬಂದ ಜನ ನಿಟ್ಟುಸಿರುಗರೆದರು.

ಪಪ್ಪಿಗೆ ಅನ್ನ ನೀರು ಸೇರಲಿಲ್ಲ; ಕೊರಗಿ ಸೊರಗಿ ಹನ್ನೊಂದು ದಿನಗಳೊಳಗಾಗಿ


ಅದೂ ಲಸಿತಳನ್ನು ಹಿಂಬಾಲಿಸಿತು. ಅಭಿಮನ್ಯು ಮಾತ್ರ ಏಕಾಂಗಿಯಾಗಿ ಯಾವಾಗಲೂ ಲಸಿತಳ ಮಂಚದ ಮೇಲೆ ದೀನನಂತೆ ಕುಳಿತಿರುತ್ತಿತ್ತು.

— ೩ —

ಆ ಮನೆಯ ಒಂದೊಂದು ಗೋಡೆಯೂ ಕಂಬವೂ ಒಂದೊಂದು ವಸ್ತುವೂ ಲಸ್ಸಿಯ ನೆನಪನ್ನು ಮನಸ್ಸಿಗೆ ತರುತ್ತಿದ್ದುವು. ಅಲ್ಲಿ ಬಾಳುವುದೇ ಕಷ್ಟವಾಯಿತು. ಲತಾಲಲಿತೆಯರಿಗೂ ಅಲ್ಲಿಯ ವಾಸ ದುಸ್ಸಹವಾಯಿತು. ಆ ಮನೆಯನ್ನು ಯಾವುದಾದರೂ ಶಾಲೆಗೆ ದಾನಮಾಡಿ ಬಿಡುವುದೆಂದು ನಿಶ್ಚಯಿಸಿದೆವು. ನಗರದ ಮತ್ತೊಂದು ವಿಸ್ತರಣದಲ್ಲಿ ಸಣ್ಣ ಮನೆಯನ್ನು ಬಾಡಿಗೆಗೆ ತೆಗೆದುಕೊಂಡೆವು. ಲಸ್ಸಿ ಬಳಸುತ್ತಿದ್ದ ಸಾಮಾನುಗಳನ್ನು ದಾನಮಾಡಿದೆವು. ದಾಸವಾಳದ ಕಸಿಕಟ್ಟಿದ ಕೊಂಬೆಯೊಂದನ್ನು ಬಾಡಿಗೆ ಮನೆಯ ನಮ್ಮ ಮಲಗು ಕೋಣೆಯ ಪಕ್ಕದಲ್ಲಿ ನೆಟ್ಟೆವು; ದಿನಕ್ಕೆರಡು ಮೂರು ಬಾರಿಯಾದರೂ ಅದನ್ನು ನೋಡದಿದ್ದರೆ ನನಗೆ ಸಮಾಧಾನವಿಲ್ಲ. ಒಂದೊಂದು ದಿನ ಸಂಜೆ ಬಿಡುವಿದ್ದಾಗ ಅದರ ಬಳಿ ಕುರ್ಚಿ ಹಾಕಿಗೊಂಡು ನಾವಿಬ್ಬರೂ ಕೂರುತ್ತಿದ್ದೆವು. ಮಲಗುಕೋಣೆಯ ಮೇಜಿನ ಮೇಲೆ ಸದಾಲಂಕೃತವಾದ ಲಸ್ಸಿಯ ಭಾವಚಿತ್ರ ಸದಾ ನಗುತ್ತಿತ್ತು.

ಆಗಾಗ್ಗೆ ಅದಕ್ಕೆ ದಾಸವಾಳದ ಹೂವು ಮುಡಿಸುತ್ತಿದ್ದೆವು.

ದೊಡ್ಡ ಮಕ್ಕಳು ಮದುವೆಯಾಗಿ ಗಂಡಂದಿರ ಮನೆಗೆ ಹೋದನಂತರ, ನಾವಿಬ್ಬರೇ ಒಬ್ಬರನ್ನೊಬ್ಬರು ನೋಡಿಕೊಂಡು ಕಾಲ ನೂಕುತ್ತಿದ್ದೆವು; ಲಸ್ಸಿಯ ಬಳಿ ಹೋಗುವ ದಿನವನ್ನೇ ಕಾಯುತ್ತಿದ್ದೆವು.



ನಾವು ಇತರರನ್ನು ನಿಂದಿಸುವಾಗ ನಾವು ಪರಿಪೂರ್ಣರೆಂದು ಭಾವಿಸುತ್ತೇವೆ. ಆದರೆ ಇತರರು ನಮ್ಮನ್ನು ನಿಂದೆ ಮಾಡುತ್ತಿದ್ದಾರೆ, ಎಂಬ ಕಲ್ಪನೆಯನ್ನು ಕೂಡಾ ನಾವು ಮಾಡುವುದಿಲ್ಲ. ಹಾಗೆ ನೋಡಿದರೆ ನಾವೂ ನಿಂದಿಸಿಕೊಳ್ಳಲ್ಪಡುವವರೇ.

—ಎಮರ್ಸನ್

ಸ್ವಾತಂತ್ರ್ಯದ ಶಿಲ್ಪಿ: ಥಾಮಸ್ ಜೆಫರ್‌ಸನ್

ಗೋಪಾಲ ಆಶ್ರಿತ

೨೫೦ ವರ್ಷಗಳ ಹಿಂದೆ ಹುಟ್ಟಿದ ಈ ಮಹಾನಾಯಕ, ಸ್ವಾತಂತ್ರ್ಯ ಪ್ರೇಮಿಗಳಿಗೆಲ್ಲ ಪ್ರೇರಕ ಶಕ್ತಿಯಾಗಿದ್ದಾನೆ.

"ಶ್ವೇತ ಭವನದಲ್ಲಿ ಥಾಮಸ್ ಜೆಫರಸನ್ ಒಬ್ಬನೇ ಕುಳಿತು ಊಟ ಮಾಡಿದ ನಂತರ ಮತ್ತೆ ಅಸಾಧಾರಣ ಮೇಧಾಶಕ್ತಿ ಮತ್ತು ಮಾನವ ಜ್ಞಾನದ ಸಮೂಹವೆಲ್ಲ ಒಂದೆಡೆ ಸೇರಿದ್ದು ಇಂದೆಂದೇ ನನಗೆನಿಸುತ್ತದೆ" – ಅಧ್ಯಕ್ಷ ಜಾನ್ ಕೆನೆಡಿ.

–೧೯೬೨ ರಲ್ಲಿ ನೋಬೆಲ್ ಪ್ರಶಸ್ತಿ ವಿಜೇತರನ್ನು ಭೋಜನ ಕೂಟಕ್ಕೆ ಆಹ್ವಾನಿಸಿದಾಗ.

೧೭೭೬ರ ಜುಲೈ ೪ (ಗುರುವಾರ)ರಂದು ಫಿಲೆಡೆಲ್ಫಿಯಾದ ಸೂರ್ಯೋದಯ ಬಹಳ ಪ್ರಕಾಶಮಾನವಾದದ್ದಾಗಿತ್ತು. ರಾಜಕೀಯ ಅಗ್ನಿಪರೀಕ್ಷೆ ತೀವ್ರವಾಗುತ್ತಿದ್ದಂತೆ ಅಂದು ಬೆಳಗ್ಗೆ ೯ ಗಂಟೆಗೆ, ಬ್ರಿಟನ್ನಿನಿಂದ ಮುಕ್ತರಾಗಲು ತಯಾರಿಸಲಾದ ಸ್ವಾತಂತ್ರ್ಯ ಘೋಷಣೆಯ ಬಗ್ಗೆ ಚರ್ಚಿಸಲು ೧೩ ವಲಸೆ ನಗರ (colony) ಗಳಿಂದ ಪ್ರತಿನಿಧಿಗಳು ಬಂದು ಸೇರಿದ್ದರು. ಶಾಸನ ಸಭೆಯ ಹಿಂದಿನ ಒಂದು ಸಾಲಿನಲ್ಲಿ ಈ ಘೋಷಣೆಯ ಲೇಖಕ ಕುಳಿತಿದ್ದನು. ಅವನೇ ಥಾಮಸ್ ಜೆಫರ್‌ಸನ್. ಸ್ಥೂಲಕಾಯದ ೩೩ ವರ್ಷದ, ವರ್ಜಿನಿಯಾದ ಈ ಪ್ರತಿನಿಧಿಯ ಕೂದಲು ಕೆಂಪು ಬಣ್ಣದ್ದು, ಮುಖದಲ್ಲಿ ಅಲ್ಲಲ್ಲಿ ಮಚ್ಚೆಗಳಿದ್ದವು. ೧.೬೮ ಮೀಟರ್ ಎತ್ತರವಿರುವುದು ಸಾಮಾನ್ಯವಾಗಿದ್ದ ಆ ಕಾಲದಲ್ಲಿ ಜೆಫರ್‌ಸನ್‌ನ ಎತ್ತರ ೧-೮೮ ಮೀಟರಿತ್ತು. ಬಹಳ ಸಂಕೋಚ ಪ್ರವೃತ್ತಿಯವನಾಗಿದ್ದರಿಂದ ಈತನು ಮಾತಾಡಲು ಮುಂದುವರಿಯುತ್ತಿರಲಿಲ್ಲ. ಆದರೆ ಈ ವ್ಯಕ್ತಿ ೧೭ ದಿನಗಳವರೆಗೆ ಹಗಲು ರಾತ್ರಿ, ಒಂದು ಬಾಡಿಗೆ ಕೋಣೆಯಲ್ಲಿ ಕುಳಿತು, ತನ್ನ ವಿಚಾರಗಳನ್ನು ಶಬ್ದಗಳನ್ನಾಗಿ ರೂಪಿಸುವಲ್ಲಿ ಸಾಕಷ್ಟು ಶ್ರಮ ವಹಿಸಿದ್ದನು. ಈ ಶಬ್ದಗಳೇ ಅಮೆರಿಕೆಯ ಪ್ರಜಾಸತ್ತೆಯ ಮುಖ್ಯ ಅಂಗವಾಗಿವೆ: ೧) ಎಲ್ಲ ಮನುಷ್ಯರನ್ನು ಒಂದೇ ತೆರನಾಗಿ ಸೃಷ್ಟಿಸಲಾಗಿರುತ್ತದೆ. ೨) ಈ ಮನುಷ್ಯರಿಗೆ ತಮ್ಮ ಜೀವನ, ಸ್ವಾತಂತ್ರ್ಯ ಮತ್ತು ಸುಖಕ್ಕಾಗಿ ಪ್ರಯತ್ನಿಸುವ ಹಕ್ಕನ್ನು ಆ ಸೃಷ್ಟಿಕರ್ತ ನೀಡಿದ್ದಾನೆ. ೩) ಸರಕಾರ ಯಾವಾಗಲೂ ಜನರ ಇಚ್ಛೆಯಂತೆ ಮಾತ್ರ ಅಧಿಕಾರ ನಡೆಸಬಲ್ಲದು

೧೯೯೩ರ ಜುಲೈ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಲೊವೆಲ್ ಪೋಂಟೆ ಅವರ ಲೇಖನದ ಅನುವಾದ.

ಮತ್ತು ಅದನ್ನು (ಸರಕಾರವನ್ನು) ಜನರು ಕಿತ್ತೊಗೆಯಲೂಬಹುದು.

ಈ ತೀವ್ರಗಾಮಿ ವಿಚಾರಗಳ ಬಗ್ಗೆ ಪ್ರತಿನಿಧಿಗಳು ಚರ್ಚಿಸುತ್ತಿದ್ದಂತೆ, ಜೆಫರ್‌ಸನ್ ಒಂದು ಕಡೆ ಸುಮ್ಮನೆ ಕುಳಿತು ತಾನೇ ತಯಾರಿಸಿದ ಮಣೆಯನ್ನು ಅಡ್ಡ ಇಟ್ಟು ಕೊಂಡು, ಕಾಗದದ ಮೇಲೆ ತನಗೆ ತೋಚಿದ್ದನ್ನು ಬರೆಯ ಹತ್ತಿದನು. ವಿಚಿತ್ರವೆಂದರೆ, ಆತನ ನೆಚ್ಚಿನ ವಿಷಯವಾಗಿದ್ದ ವೈಜ್ಞಾನಿಕ ಅವಲೋಕನ (Scientific observation) ದಲ್ಲೂ ಆಗಾಗ ತನ್ನ ಸಮಯ ಕಳೆಯುತ್ತಿದ್ದನು. ಯಾವಾಗಲೂ ಆತನ ಜೇಬಿನಲ್ಲೊಂದು ಉಷ್ಣ ಮಾಪಕ (Thermometer) ಇರುತ್ತಿತ್ತು. ಆಗಾಗ ಅದರ ಸಹಾಯದಿಂದ ಉಷ್ಣಾಂಶ ಅಳೆಯುತ್ತಿದ್ದನು. ಅಂದು ಮಧ್ಯಾಹ್ನ ೧ ಗಂಟೆಗೆ ಉಷ್ಣಾಂಶ ೨೪.೫°cಗೆ ಏರಿತ್ತೆಂದು ದಾಖಲೆಗಳಿಂದ ನಮಗೆ ತಿಳಿದುಬರುತ್ತದೆ.

ಅಂದು ಮಧ್ಯಾಹ್ನ ಪ್ರತಿನಿಧಿಗಳು ಜೆಫರ್‌ಸನ್ ತಯಾರಿಸಿದ ಈ ಹೊಸ ದಾಖಲೆಗೆ ತಮ್ಮ ಅನುಮೋದನೆಯನ್ನಿತ್ತರು. ಒಬ್ಬ ವಿದ್ವಾಂಸ ಇದನ್ನು "ಮೊದಲ ಹೊಸ ರಾಷ್ಟ್ರದ ಜನನ" ಎಂದು ಕರೆದನು.

ಥಾಮಸ್ ಜೆಫರ್‌ಸನ್ ಅತಿ-ವಿರಳವಾದ ಗುಣಗಳ ಸಂಗಮವಾಗಿದ್ದನು. ಅವನು ಕೇವಲ ವಿಚಾರವಂತನಾಗಿರಲಿಲ್ಲ. ತಾನು ವಿಚಾರಿಸಿದ್ದನ್ನು ಕಾರ್ಯರೂಪಕ್ಕಿಳಿಸುವ ಕರ್ಮಯೋಗಿಯೂ ಆಗಿದ್ದನು. ರಾಜ್ಯಶಾಸ್ತ್ರ, ತತ್ತ್ವಜ್ಞಾನಿಯಾಗುವದರ ಜೊತೆಗೆ ಅವನೊಬ್ಬ ಒಳ್ಳೆಯ ನಾಯಕನೂ ಆಗಿದ್ದನು. ವಿಜ್ಞಾನದ ವಿದ್ಯಾರ್ಥಿಯಾಗಿದ್ದ ಈ ವ್ಯಕ್ತಿ ನವೀನತೆಯನ್ನು ಕಲ್ಪಿಸುತ್ತಿದ್ದನು. ಅಪಾಯವನ್ನೆದುರಿಸುವುದಲ್ಲದೆ, ಹೊಸ ಅಲೆಯೊಂದನ್ನೆಬ್ಬಿಸುವ ಪ್ರವೃತ್ತಿ ಅವನದಾಗಿತ್ತು. ಜ್ಞಾನಾರ್ಜನೆ ಅವನಲ್ಲಿ ಬೇರೂರಿತ್ತು. ೧೯೯೦ರ ದಶಕಕ್ಕಿಂತಲೂ, ಪುನರುಜ್ಜೀವನ (Renaissance) ಯುಗದ ಪ್ರಭಾವ ಅವನ ಮೇಲಾಗಿತ್ತು. ಆದರೂ ಈತನಿಗೆ ಆಧುನಿಕ ವಿಶ್ವದ ಕಲ್ಪನೆಯಿತ್ತು ಮತ್ತು ಆ ಕಲ್ಪನೆಗೆ ತಕ್ಕಂತೆ ಅನೇರಿಕೆಯನ್ನು ರೂಪಿಸಲು ಪ್ರಯತ್ನಿಸಿದನು.

ಕ್ರಿಯಾಶೀಲ ರಾಜಕೀಯ:–೧೭೪೩ರ ಏಪ್ರಿಲ್ ೧೩ರಂದು ಶೇಡವೆಲ್ ಎಂಬಲ್ಲಿ ಜೆಫರ್‌ಸನ್ನನ ಜನನವಾಯಿತು. ಇಂದು ಕಾರ್ಲೋಟ್ಸ್‌ವೈಲ್ (ವರ್ಜಿನಿಯಾ) ಎಂದು ಕರೆಯಲಾಗುತ್ತಿರುವ ಅರಣ್ಯ ಪ್ರದೇಶದಲ್ಲಿ ಈತನ ತಂದೆಯ ತೋಪುಗಳಿದ್ದವು. ಮಗ ಬೆಳೆದು ದೊಡ್ಡವನಾದಾಗ ಆತನಿಗೆ ಸುಮಾರು ೧೦೦೦ ಹೆಕ್ಟೇರು ಜಮೀನು ತಂದೆಯಿಂದ ಆಸ್ತಿಯಾಗಿ ಬಂತು. ಈ ಕುಟುಂಬದ ದಂತ ಕತೆಯ ಪ್ರಕಾರ, ಟಾಮ ತನ್ನ ೫ನೇ ವಯಸ್ಸಿನಾಗಲೇ ಮನೆಯ ಪುಸ್ತಕ ಭಂಡಾರದಲ್ಲಿನ ೨೦ಕ್ಕಿಂತಲೂ ಹೆಚ್ಚು ಪುಸ್ತಕಗಳನ್ನು ಓದಿದ್ದನಂತೆ. ಮುಂದೆ ಫ್ರೆಂಚ್, ಸ್ಪ್ಯಾನಿಶ್ ಮತ್ತು ಇಟ್ಯಾಲಿಯನ್ ಭಾಷೆಗಳಲ್ಲೂ ಪಾಂಡಿತ್ಯ ಪಡೆದನು. ಗ್ರೀಕ್ ಮತ್ತು ಲ್ಯಾಟಿನ್ನಿನ ಉತ್ತಮ ಗ್ರಂಥಗಳನ್ನು ಓದಲು ಕಲಿತಿದ್ದನಂತೆ.

ಕಾಲೇಜಿನಲ್ಲಿ ಐಸಾಕ್ ನ್ಯೂಟನ್ ಮತ್ತು ಫ್ರಾನ್ಸಿಸ್ ಬೇಕನ್ನರ ಕೃತಿಗಳನ್ನು ಓದಿ ಜೀರ್ಣಿಸಿಕೊಂಡನು. ಆದರೆ ಅವನ ಮೇಲೆ ವಿಶೇಷ ಪ್ರಭಾವ ಬೀರಿದ ತತ್ವಜ್ಞಾನಿಯೆಂದರೆ ಇಂಗ್ಲೆಂಡಿನ ಜಾನ್‌ಲಾಕ್.

ನ್ಯಾಯಯುತವಾದ ಸರಕಾರವಿರುವುದು ವ್ಯಕ್ತಿಗತ ಹಕ್ಕುಗಳನ್ನು ಕೊಡಿಸುವುದಕ್ಕಾಗಿ ಮತ್ತು ಅದು ಕೆಲಸ ಮಾಡುವುದು ಕೂಡಾ ಜನರ ಪರ ಒಪ್ಪಿಗೆಯಿಂದ ಆಗಿರಬೇಕೆಂದು ಈ ತತ್ವಜ್ಞಾನಿ ನಂಬಿದ್ದನು.

ಸ್ವಾತಂತ್ರ್ಯದ ಘೋಷಣೆಯನ್ನು ಅಂಗೀಕರಿಸಿದ ನಂತರ ಜೆಫರ್‌ಸನ್ ತನ್ನೂರಿಗೆ ಮರಳಿ ಬಂದು, ವರ್ಜಿನಿಯಾದ ಹೊಸ ಶಾಸನ ಸಭೆಗೆ ಪ್ರತಿನಿಧಿಯಾಗಿ ಆರಿಸಲ್ಪಟ್ಟನು. ಸುಧಾರಣೆಯ ಬಗ್ಗೆ ಆಸಕ್ತಿಯುತನಾಗಿದ್ದ ಜೆಫರ್‌ಸನ್ ನಂತರದ ವರ್ಷಗಳಲ್ಲಿ ಹತ್ತಾರು ಮಸೂದೆಗಳನ್ನು ಸಿದ್ಧಪಡಿಸಿಕೊಟ್ಟನು. ವರ್ಜಿನಿಯಾದ ಧಾರ್ಮಿಕ ಸ್ವಾತಂತ್ರ್ಯಕ್ಕಾಗಿ ಕಾನೂನು [Virginia's Statute for Religious Freedom] ಎಂಬ ಲಿಖಿತ ಶಾಸನ ತನ್ನ ಜೀವನದ ಮಹಾಸಾಧನೆಯೆಂದು ಜೆಫರ್‌ಸನ್ ಪರಿಗಣಿಸಿದನು.

ಇಂದು ಅಮೆರಿಕೆಯಲ್ಲಿ ಚರ್ಚ್ ಮತ್ತು ಸರಕಾರ ಬೇರೆ ಬೇರೆ ಸಂಸ್ಥೆಗಳೆಂಬ ಭಾವನೆ ಸಾಮಾನ್ಯವಾಗಿದೆ. ಆದರೆ ೧೭೭೬ ರಲ್ಲಿ ಹೊಸದಾಗಿ ಸ್ಥಾಪಿತವಾದ ಅಮೆರಿಕೆಯ ಪ್ರಾಂತಗಳೆಲ್ಲ–ಜನರ ನಂಬಿಕೆಗಳೇನಿದ್ದರೂ–ಸರಕಾರ ಚರ್ಚೊಂದಕ್ಕೆ ಬೆಂಬಲಿಸುವಂತೆ ಜನರನ್ನು ಒತ್ತಾಯಿಸಿದವು. ಆದರೆ ಜೆಫರ್‌ಸನ್ ತಯಾರಿಸಿದ ಲಿಖಿತ ಶಾಸನದಲ್ಲಿ "ತಾನು ನಂಬದ ಹಾಗೂ ಅಸಹ್ಯಪಟ್ಟುಕೊಳ್ಳುವ ವಿಚಾರಗಳ ಪ್ರಚಾರಕ್ಕಾಗಿ ಹಣ ನೀಡುವಂತೆ ಒಬ್ಬ ವ್ಯಕ್ತಿಯನ್ನು ಒತ್ತಾಯಿಸುವುದು ಪಾಪಕರ ಹಾಗೂ ಕ್ರೂರ ಆಳ್ವಿಕೆಯೆನಿಸುತ್ತದೆ" ಎಂದು ಬರೆಯಲಾಗಿತ್ತು. ಚರ್ಚ್ ಮತ್ತು ಸರಕಾರದ ಮಧ್ಯದ ಸಂಬಂಧ ಕಡಿದು ಹೋಗುವಂತೆ ಮಾಡಿದ್ದಕ್ಕೆ ತನ್ನನ್ನು ಜೀವನ ಪರ್ಯಂತ ಉಪದೇಶ ವೇದಿಕೆಯಿಂದ ಆಪಾದಿಸಲಾಗುತ್ತದೆಂಬುದು ಅವನಿಗೂ ತಿಳಿದಿತ್ತು.

ಅಮೆರಿಕೆಯ ಜನರು (ಪ್ರತಿನಿಧಿಗಳು) ಅಮೆರಿಕೆಯ ಸಂವಿಧಾನದ ರಚನೆಯ ಬಗ್ಗೆ ಚರ್ಚಿಸಲು ಪ್ರಾರಂಭಿಸಿದಾಗ, ಜೆಫರ್‌ಸನ್ ಫ್ರಾನ್ಸಿಗೆ ಮಂತ್ರಿ (Minister to France) ಯಾಗಿದ್ದನು. ಪ್ಯಾರಿಸ್ಸಿನಿಂದ ಒಂದು ಪತ್ರ ಬರೆದು, ಪತ್ರಿಕಾ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ ಒಂದು ಕಡೆ ಸೇರುವ ಸ್ವಾತಂತ್ರ್ಯ ಮತ್ತು ಧಾರ್ಮಿಕ ಸ್ವಾತಂತ್ರ್ಯ ಹಕ್ಕುಗಳ ಮಸೂದೆಗೆ ಸೇರಿಸದೆ ಸಂವಿಧಾನವನ್ನು ಅಂಗೀಕರಿಸಬಾರದೆಂದು ತನ್ನ ಅಭಿಪ್ರಾಯ ತಿಳಿಸಿದನು. ಅವರಲ್ಲಿ "ನಮಗೆ ಸಮಾಚಾರ ಪತ್ರಿಕೆಗಳಿಂದ ಸರಕಾರ ಬೇಕೋ ಅಥವಾ ಸರಕಾರವಿರದ ಸಮಾಚಾರ ಪತ್ರಿಕೆ ಬೇಕೋ ಎಂದು ಯಾರಾದರೂ ಕೇಳಿದರೆ ನಾನಂತೂ ಎರಡನೇಯದನ್ನೇ ಆಯ್ದುಕೊಳ್ಳ ಬಯಸುತ್ತೇನೆ" ಎಂದು ಬರೆದಿದ್ದನು. [ಕೆಲವು ವರ್ಷಗಳ ನಂತರ ಇದೇ ಪತ್ರಿಕಾರಂಗದ ಕಟು ಟೀಕೆಗೆ ಬಲಿಯಾದ ಜೆಫರ್‌ಸನ್ ಹೆಚ್ಚೆಚ್ಚು ಸಿಡುಕಿನ ಸ್ವಭಾವದವನಾದನು. "ಮುಂದೆ ಒಬ್ಬ ಸಂಪಾದಕರ ಬಹುಶಃ ಈ ರೀತಿ ಸುಧಾರಣೆಯ ಕೆಲಸ ಪ್ರಾರಂಭಿಸಬಹುದು. ತನ್ನ ಪತ್ರಿಕೆಯನ್ನು ನಾಲ್ಕು ಭಾಗಗಳನ್ನಾಗಿ ಮಾಡಿ ಅವುಗಳಿಗೆ ೧) ನಿಜಾಂಶಗಳು ೨) ಸಂಭವಗಳು ೩) ಸಾಧ್ಯತೆಗಳು ೪) ಸುಳ್ಳುಗಳು ಎಂದು ಶಿರೋನಾಮೆ ಇಡಬಹುದು. ಮೊದಲನೇ ಅಧ್ಯಾಯ ಮಾತ್ರ ಚಿಕ್ಕದಾಗಿರುತ್ತದೆ" ಎಂದು ಪತ್ರಿಕೆಗಳ ಬಗ್ಗೆ ೧೮೦೭ ರಲ್ಲಿ ಹೇಳಿದ್ದನು.]

ಆಸಕ್ತಿಯುಇತ ಹವ್ಯಾಸಗಳು :–ವಿಚಿತ್ರದ ಸಂಗತಿಯೆಂದರೆ ಜೆಫರ್‌ಸನ್ನನಿಗೆ ರಾಜಕೀಯ ವೆಂಬುದು ಒಂದು ಕರ್ತವ್ಯವಾಗಿತ್ತೇವಿನಃ ಒಂದು ಸುಖ ನೀಡಬಲ್ಲ ಕಸುಬಾಗಿರಲಿಲ್ಲ. "ವಿಜ್ಞಾನ ಕ್ಷೇತ್ರದಲ್ಲಿ ಏನಾದರೂ ಸಾಧಿಸಿ ಅದರಿಂದ ಅಮಿತಾನಂದ ಪಡೆಯಲೆಂಬುದೇ ವಿಧಿಯಿಚ್ಛೆಯಿತ್ತೇನೋ! ಆದರೆ ಈ ಕಾಲದ ವೈಪರೀತ್ಯಗಳು, ರಾಜಕಾರಣದ ಈ ಅಬ್ಬರಿಸುವ ಸಾಗರದಲ್ಲಿ ನನ್ನನ್ನು ತೊಡಗಿಸಿಕೊಳ್ಳುವಂತೆ ಒತ್ತಾಯಿಸಿವೆ." ಎಂದು ಒಮ್ಮೆ ಬರೆದನು.

ಜೆಫರ್‌ಸನ್ನನಿಗೆ ಶಿಲ್ಪಕಲೆಯೆಂದರೆ ಬಹಳ ಅಚುಮೆಚ್ಚಿನ ವಿಷಯವಾಗಿತ್ತು. ಆತನ 'ಸ್ವಪ್ನಸೌಧ' (Dream house) ಪುರಾತನ ರೋಮಿನ ಶಿಲ್ಪಕಲೆಯನ್ನಾಧರಿಸಿ ಯೋಜಿಸಲಾಗಿತ್ತು. ಈತನ ಜಮೀನಿನಲ್ಲಿದ್ದ ಒಂದು ಎತ್ತರವಾದ ಗುಡ್ಡದ ಮೇಲೆ ಈ ಕಟ್ಟಡ ನಿರ್ಮಿಸಲಾಯಿತು. ಅದಕ್ಕೆ 'ಮೊಂಟಿಸಿಲ್ಲೊ' [ಇಟಾಲಿಯನ್ನಿನಲ್ಲಿ 'ಚಿಕ್ಕ ಪರ್ವತ'] ಎಂದು ಹೆಸರಿಟ್ಟನು. ವಿಶ್ವದಾದ್ಯಂತ ಬಹಳಷ್ಟು ಮೆಚ್ಚುಗೆ ಪಡೆದ ಕೆಲವೇ ಸೌಧಗಳಲ್ಲಿ "ಮೊಂಟಿಸಿಲೊ" ಒಂದಾಗಿದೆ. ಇದರ ಪ್ರಸಿದ್ಧಿಯಿಂದ ಆಕರ್ಷಿತರಾದ ಸಾವಿರಾರು ಜನರು ಪ್ರತಿ ವರ್ಷ ಈ ಸೌಧವನ್ನು ನೋಡಲು ಬರುತ್ತಾರೆ.

ಅಧ್ಯಕ್ಷ ಜಾರ್ಜ್‌ವಾಶಿಂಗ್ಟನ್ನಿನ ಅಧಿಕಾರಾವಧಿಯಲ್ಲಿ ವಿದೇಶಾಂಗ ವ್ಯವಹಾರ ಮಂತ್ರಿ [Secretary of State] ಯಾಗಿದ್ದ ಜೆಫರ್‌ಸನ್ನನಿಗೆ ಅಮೆರಿಕೆಯ ಶಾಸನ ಸಭಾ ಭವನ ಕಟ್ಟಿಸುವ ಹೊಣೆ ನೀಡಲಾಗಿಯಿತ್ತು. ಈ ಭವನವನ್ನು ಪುರಾತನ ರೋಮಿನ ಶಿಲ್ಪ ಕಲೆಯನ್ನಾಧರಿಸಿ ಕಟ್ಟಬೇಕೆಂದು ಜೆಫರ್‌ಸನ್ ಸಲಹೆಯಿತ್ತನು. ಈ ಶೈಲಿಯನ್ನು ಅಮೆರಿಕೆಯ ಎಲ್ಲ ಸರ್ಕಾರಿ ಕಟ್ಟಡಗಳ ಶಿಲ್ಪ ಕಲೆಯಲ್ಲಿ ಕಾಣ ಬಹುದಾಗಿದೆ. ಒಂದು ದಶಕದ ನಂತರ ತಾನು ಅಧ್ಯಕ್ಷನಾದ ಮೇಲೆ ಲೊಂಬಾರ್ಡಿ ಪೊಪ್ಲಾರ ಸಸಿಗಳನ್ನು ಪೆನ್ಸಿಲ್ವೆನಿಯಾದ ಬೀದಿಯ ಎರಡೂ ಬದಿಗಳಲ್ಲಿ ನೆಡುವಂತೆ ಆದೇಶಿಸಿದನು.

ಹೊಸ ತಂತ್ರಜ್ಞಾನದ ಬಳಕೆಯ ಬಗ್ಗೆ ಜೆಫರ್‌ಸನ್ನನಿಗೆ ಬಹಳ ಉತ್ಸಾಹವಿತ್ತು. ಅದಕ್ಕಾಗಿ ಹಗಲಿರುಳು ತನ್ನನ್ನು ತೊಡಗಿಸಿಕೊಂಡಿರುತ್ತಿದ್ದನು. "ಹೊಸ ಯಂತ್ರ ಸಾಧನಗಳ ಬಗ್ಗೆ ಮತ್ತು ಮಾಹಿತಿ ಸಂಗ್ರಹಿಸುವದೆಂದರೆ ಅವನಿಗೆ ವಿಶೇಷ ಆಸಕ್ತಿಯಿತ್ತು. ಆತನೇನಾದರೂ ಇಂದು ಬದುಕಿದಿದ್ದರೆ, ಅವನೊಬ್ಬ ಕಂಪ್ಯೂಟರ್ ಹುಚ್ಚನಾಗಿರುತ್ತಿದ್ದನು" ಎಂದು ಜೆಫರ್‌ಸನ್ ಬಗ್ಗೆ ಅಧ್ಯಯನ ನಡೆಸಿದ ವಿದ್ವಾಂಸ ಡೌಗ್ಲಾಸ್ ವಿಲ್ಸನ್ ಹೇಳಿದ್ದಾನೆ.

ತನ್ನ ದೂರದರ್ಶಕದಿಂದ ಆಕಾಶ ವೀಕ್ಷಿಸುವುದು ಮತ್ತು ಗ್ರಹಣಗಳ ಬಗ್ಗೆ ಮಾಹಿತಿ ಸಂಗ್ರಹಿಸುವದೆಂದರೆ ಅವನಿಗೆ ಬಹಳ ಇಷ್ಟ. ತನ್ನ ವಾಹನಕ್ಕಾಗಿ ಹೊಸದಾಗಿ ಕಂಡು ಹಿಡಿದ ಪಥಮಾಪಕವನ್ನು ಜೋಡಿಸುವಂತೆ ಆದೇಶ ನೀಡಿದನು. ಅದರ ಸಹಾಯದಿಂದ ಸ್ಥಳಗಳ ಮಧ್ಯದ ಅಂತರ ತಿಳಿದುಕೊಳ್ಳಲು ಸಾಧ್ಯವಾಗುತ್ತಿತ್ತು. ಇದರ ಮೂಲಕ ಕೆಲವೊಂದು ರಾಜಕೀಯ ರಹಸ್ಯಗಳನ್ನು ಸೌಂಜ್ಞಾ (Code) ಭಾಷೆಯಲ್ಲಿಡುವ ವಿಧಾನ ಕಂಡು ಹಿಡಿದನು.

ಇವೆಲ್ಲಕ್ಕಿಂತ ಮಿಗಿಲಾಗಿ ಜೆಫರ್‌ಸನ್ನನಿಗೆ ನಿಸರ್ಗದ ಅಧ್ಯಯನ ಬಹಳ ಆಸಕ್ತಿಯುಇತ

ವಿಷಯವಾಗಿತ್ತು. "ಸಣ್ಣ ಹುಲ್ಲಿನ ಎಲೆಯ ಬಗ್ಗೆ ಕೂಡಾ ನನಗೆ ಆಸಕ್ತಿಯಿದೆ" ಎಂದು ಹೇಳುತ್ತಿದ್ದನು. ತಾನು ನೋಡಿದ ಎಷ್ಟೋ ಹೂ ಹಾಗೂ ಸಣ್ಣ ಗಿಡಗಳ ಇಂಗ್ಲೀಷ್ ಮತ್ತು ಲ್ಯಾಟಿನ್ ಹೆಸರುಗಳನ್ನು ಹೇಳು ತ್ತಿದ್ದನಲ್ಲದೆ ಪ್ರತಿಯೊಂದರ ಬಗ್ಗೆ ಒಂದು ಭಾಷಣ ಬಿಗಿಯುತ್ತಿದ್ದನು. "ಒಂದು ಉಪ ಯುಕ್ತ ಸಸ್ಯವನ್ನು ಸಂಸ್ಕೃತಿಗೆ ಸೇರಿಸು ವುದೇ ನಾಡಿಗೆ ನಾವು ಸಲ್ಲಿಸಬಹುದಾದ ಉದಾತ್ತ ಸೇವೆ" ಎಂದು ಹೇಳುತ್ತಿ ದ್ದನು.

ಪಳಿಯುಳಿಕೆಗಳನ್ನು ಸಂಗ್ರಹಿಸುವುದೂ ಅವನ ಹವ್ಯಾಸವಾಗಿತ್ತು. ಇತಿಹಾಸ ಪೂರ್ವ ಯುಗದ ಒಂದು ಸಸ್ತನಿ ಪ್ರಾಣಿಯ ಉಗುರು ಮತ್ತು ಆಧುನಿಕ ಆನೆಗಳ ವಂಶಕ್ಕೆ ಸೇರಿದ ಒಂದು ದೊಡ್ಡ ಸಸ್ತನಿ ಪ್ರಾಣಿಯ ಎಲುಬುಗಳನ್ನು ಜೆಫರ್‌ಸನ್ ಸಂಗ್ರಹಿಸಿದನು. ಜೀವಿಶಾಸ್ತ್ರದ ಬಗ್ಗೆ ವಿಶೇಷ ಆಸಕ್ತಿ ವಹಿಸಿದವರಲ್ಲಿ ಜೆಫರ್ ಸನ್ನನೇ ಮೊದಲಿಗನಾಗಿದ್ದನು.

ಸ್ವತಃ ಮಾಡಿನೋಡುವಲ್ಲಿನ ಜೆಫರ್‌ಸ ನ್ನನ ಮೇಧಾಶಕ್ತಿಯ ಪರಿಚಯ ಮೊಂಟಿ ಸಿಲ್ಲೊಕ್ಕೆ ಭೇಟಿಯಿತ್ತ ಸಹಸ್ರಾರು ಜನರಿ ಗಾಗುತ್ತದೆ. ಒಳಮಾಳಿಗೆಯ ಕೈವಾರಕ್ಕೆ ಒಂದು ವಾಯು ದಿಕ್ಸೂಚಿಯನ್ನು ಜೋಡಿಸಿ ಅದರ ಮೂಲಕ, ಹೊರಗೆ ಹೋಗದೆ, ವಾಯುವಿನ ದಿಕ್ಕನ್ನು ತಿಳಿದುಕೊಳ್ಳು ತ್ತಿದ್ದನು. ತನ್ನ ಮನೆಗೆ ಬಿರುಗಾಳಿ ಕಿಟಕಿ (Storm windows) ಗಳನ್ನಿಡಿಸಿದ್ದ ನಲ್ಲದೆ, ಚೌಕಟ್ಟಿನಲ್ಲಿ ಅಲಂಕಾರಕ ಪಟ್ಟಿ ಗಳಲ್ಲಿನ ತಿರುಳು ಬೀರುವಿನ (Dumb waiters) ಮೂಲಕ ನೆಲಮಾಳಿಗೆಯಿಂದ ಮಧ್ಯ ಸಾಗಿಸುವ ವ್ಯವಸ್ಥೆ ಮಾಡಿಸಿದ್ದನು. ಇಂದಿನ ಶೌಚಾಲಯಗಳಂತೆ ಒಂದು ರಹಸ್ಯ ಕರ ದ್ವಾರ ವ್ಯವಸ್ಥೆಯುಳ್ಳ ಶೌಚಾಲಯ ವನ್ನು ತನ್ನ ಕೋಣೆಯೊಳಗಿರುವಂತೆ ಯೋಜಿಸಿದ್ದನು. ಆತನನ್ನು ಕಾಣಲು ಬಂದ ಅನೇಕರಿಗೆ ಇದೊಂದು ಆಶ್ಚರ್ಯ ಕಾರಕ ಕಲ್ಪನೆಯೆನಿಸುತ್ತಿತ್ತು.

ಊಟದ ವಿಷಯದಲ್ಲಿ, ಈತನು ಮಾಂಸಾ ಹಾರದ ಪ್ರಮಾಣ ಕಡಿಮೆ ಮಾಡಿಸಿದ ನಲ್ಲದೆ, ಸಸ್ಯಾಹಾರಕ್ಕೆ ಆದ್ಯತೆ ನೀಡಿದನು. "ಜೆಫರ್‌ಸನ್ ಆರೋಗ್ಯಕರ ಆಹಾರದ ಪ್ರವಾದಿಯಾಗಿದ್ದನೆಂದೆನಿಸುತ್ತದೆ" ಯೆಂದು ವಿಲ್ಸನ್ ಬರೆದಿದ್ದಾನೆ.

ದಿಟ್ಟ ನಿರ್ಧಾರಗಳು (Bold solutions) :– ಸರಕಾರದ ವ್ಯವಹಾರಗಳಲ್ಲಿ ಜೆಫರ್‌ಸನ್ನನ ದಿಟ್ಟ ನಿಲುವು ಅಪಾಯಕಾರಿ ಯೆನಿಸುತ್ತಿದ್ದವು. ಉತ್ತರ ಆಫ್ರಿಕಾದ ಮೆಡಿಟರೇನಿಯನ್ ಕಡಲ ಭಾಗದ, ಕಡಲ ಗಳ್ಳರ ಹಾವಳಿಯನ್ನು ತಡೆಯಲು ಈ ಅಧ್ಯಕ್ಷ ಕ್ರಮ ತೆಗೆದುಕೊಳ್ಳಬೇಕಾಯಿತು. ಗ್ರೇಟ್ ಬ್ರಿಟನ್ ಮತ್ತು ಫ್ರಾನ್ಸಿನಂತೆ ಅಮೆರಿಕ ಕೂಡಾ ಒತ್ತೆಯಾಳುಗಳನ್ನು ಒಯ್ಯುವುದನ್ನು ತಡೆಯಲು ಹಣ ನೀಡಿತ್ತು. ಭಯೋತ್ಪಾದನೆಯೆಂಬುವು ಎಷ್ಟು ಸಾಮಾನ್ಯವಾಗಿತ್ತೆಂದರೆ, ಬೇರೆ ಬೇರೆ ತೆರನಾದ ಒತ್ತೆಯಾಳುಗಳಿಗೆ ಬೇರೆ ಬೇರೆ ಬೆಲೆ ನೀಡಬೇಕಾಗುತ್ತಿತ್ತು. ಒಬ್ಬ ಸಾಮಾನ್ಯ ಪ್ರಯಾಣಿಕನ ಬೆಲೆ ೪೦೦೦ ಡಾಲರ್ ಆಗಿತ್ತು.

ಈ ಕಡಲಗಳ್ಳರ ಬಂದರುಗಳ ಮೇಲೆ ಗುಂಡಿನ ಸುರಿಮಳೆ ಮಾಡಿ ನಾಶಪಡಿಸಲು ಜೆಫರ್‌ಸನ್ ಯುದ್ಧನೌಕೆಯನ್ನು ಕಳಿಸಲು

ನಿರ್ಧರಿಸಿದನು. ಅದರ ಜೊತೆಗೆ ಭೂಮಾರ್ಗವಾಗಿ ದಾಳಿ ಮಾಡಲು ಟ್ರಿಪೋಲಿ ದಂಡೆಯತ್ತ ಭಾರೀ ಸೈನ್ಯದಳ ಧಾವಿಸಿತು. ೧೮೦೫ರ ಸಮಯಕ್ಕೆ ಅಮೆರಿಕೆಯ ನೌಕೆಗಳ ಮೇಲಾಗುತ್ತಿದ್ದ ದಾಳಿ ನಿಂತಿತು.

ಜೆಫರ್‌ಸನ್ನನ ಮೊದಲ ಸಲದ ಅಧಿಕಾರಾವಧಿಯ ಪ್ರಾರಂಭದಲ್ಲಿ, ನೆಪೋಲಿಯನ್ ಲುಯಿಸಾನಾ ಭೂ ಭಾಗವನ್ನು (Territory) ಸ್ಪೇನಿನಿಂದ ಫ್ರಾನ್ಸಿಗೆ ಮರಳಿ ಪಡೆದುಕೊಂಡನು. ಸಾಗರದ ಮೇಲೆ ಹೋಗುತ್ತಿದ್ದ ನೌಕೆಗಳಿಗೆ, ಅಮೆರಿಕೆಯಿಂದ ಬಂದ ನೌಕೆಗಳ ಸರಕುಗಳನ್ನು ನ್ಯೂ ಬರ್ಲಿಯನ್ಸಿನಲ್ಲಿ ವರ್ಗಾಯಿಸಲಾಗುತ್ತಿತ್ತು. ಆದರೆ ಈ ರೀತಿಯಲ್ಲಿ ನ್ಯೂ ಬರ್ಲಿಯನ್ಸಿನಲ್ಲಿ ಸಂಗ್ರಹಿಸಿಡುವುದನ್ನು ೧೮೦೨ರಲ್ಲಿ ತಡೆಯಲಾಯಿತು. ಜೆಫರ್‌ಸನ್ನನ ಪ್ರತಿನಿಧಿಗಳು ನ್ಯೂ ಬರ್ಲಿಯನ್ಸನ್ನು ಕೊಳ್ಳುವ ಪ್ರಸ್ತಾಪವಿಟ್ಟಾಗ, ಫ್ರಾನ್ಸಿನ ವಿದೇಶಾಂಗ ಮಂತ್ರಿಯಾಗಿದ್ದ ಟಾಲಿರ್‍ಯಾಂಡ್ ಅದರ ಬದಲಾಗಿ ಲುಯಿಸಾನಾ ಪ್ರದೇಶವನ್ನೆಲ್ಲಾ ಕೊಳ್ಳಲು ಸಿದ್ಧರಿದ್ದಿರೇನೆಂದು ಕೇಳಿದನು. ನ್ಯೂ ಬರ್ಲಿಯನ್ಸ್ ಪಟ್ಟಣವನ್ನು ಕೊಳ್ಳಲು ಸುಮಾರು ೧೦ ಮಿಲಿಯನ್ ಡಾಲರ್ ಜೊತೆಗೆ ಸ್ವಲ್ಪ ಭೂಭಾಗ ಕೊಡಲು ಜೆಫರ್‌ಸನ್ ಸಿದ್ಧನಿದ್ದನು. ಆದರೆ ಕೇವಲ ೧೫ ಮಿಲಿಯನ್ ಡಾಲರ್‌ಗೆ, ಅಮೆರಿಕೆಯ ವಿಸ್ತಾರದ ಎರಡರಷ್ಟೆನಬಹುದಾದ (೨೧,೪೫೦೦೦ ಚ. ಕಿ. ಮೀಟರಿನಷ್ಟು) ಭೂ ಪ್ರದೇಶ ನೀಡಲು ಫ್ರಾನ್ಸ್ ಮುಂದೆ ಬಂತು. ವ್ಯವಹಾರ ಚತುರನಾಗಿದ್ದ ಜೆಫರ್‌ಸನ್ 'ಶತಕದ ಒಪ್ಪಂದಕ್ಕೆ' ೧೮೦೩ರಲ್ಲಿ ಸಹಿ ಹಾಕಿದನು.

ಯಾವಾಗಲೂ ಒಳ್ಳೆಯ ಉಡುಪು ಧರಿಸಿಕೊಂಡು ಠೀವಿಯಿಂದ ತಿರುಗಾಡುವುದೇ ಜೆಫರ್‌ಸನ್ನನ "ಜೀವನಶೈಲಿ"ಯಾಗಿತ್ತು. ಶ್ರೀಮಂತ ವರ್ಗಕ್ಕೆ ಸೇರಿದ ಈ ವ್ಯಕ್ತಿ ಸಾಮಾನ್ಯರ ಹಕ್ಕುಗಳಿಗಾಗಿ ಹೋರಾಡಿದನು. ಈ ನಿಲುವು ಆತನು ಅತಿಥೇಯನಾದಾಗ ಎದ್ದು ಕಾಣುತ್ತಿತ್ತು. ವಾಶಿಂಗ್ಟನ್ ಮತ್ತು ಜೊನ್ ಆಡಮ್ಸರಂತೆ ಆತನೆಂದೂ ಬಾಗಿ ಅತಿಥಿಗಳ ವಂದನೆ ಸ್ವೀಕರಿಸುತ್ತಿರಲಿಲ್ಲ. ತಾನೇ ಮುಂದೆ ಬಂದು ಹಸ್ತಲಾಘವ ಮಾಡುತ್ತಿದ್ದನು.

ಅತಿಥಿಗಳಿಗಾಗಿ ತಯಾರಿಸಲಾದ ಊಟ ಮತ್ತು ಮದ್ಯ ಒಳ್ಳೆಯದಾಗಿದ್ದರೆ, ಜೆಫರ್‌ಸನ್ ಸಮಾಧಾನ ಪಡುತ್ತಿದ್ದನು. ಈತನ ಅವಧಿಯಲ್ಲಿಯೇ ಶ್ಯಾಂಪೇನ್ ಮತ್ತು ಐಸ್‌ಕ್ರೀಮ್ ಜನಪ್ರಿಯವಾದವು. ಇನ್ನೊಂದು ವಿಚಿತ್ರ ಸಂಗತಿಯೆಂದರೆ, ಆತ ಯಾವಾಗಲೂ ಡಿಕ್ ಎಂಬ ವಿಚಿತ್ರ ಪಕ್ಷಿಯೊಂದನ್ನು ತನ್ನ ಹೆಗಲ ಮೇಲೆ ಕೂಡಿಸಿಕೊಂಡು ಊಟ ಮಾಡುತ್ತಿದ್ದನು. ನಿರ್ದಿಷ್ಟ ಆಸನದ ಮೇಲೆ ಕುಳಿತುಕೊಳ್ಳಬೇಕೆಂಬ ನಿಯಮವಿರುತ್ತಿರಲಿಲ್ಲ. ಯಾರು ಎಲ್ಲಿ ಬೇಕಾದರೂ ಕುಳಿತುಕೊಳ್ಳಬಹುದಾಗಿತ್ತು. ಒಮ್ಮೆ ಬ್ರಿಟಿಷ್ ರಾಯಭಾರಿಯ ಜೊತೆ ಮಾತುಕತೆ ನಡೆಸಿದಾಗ ಜೆಫರ್‌ಸನ್ ಸೂಟುಬೂಟು ಹಾಕಿಕೊಳ್ಳದೆ, ಆರಾಮ ಶಾಲೆಯಲ್ಲಿ ಹಾಕಿಕೊಳ್ಳುವ ಬಟ್ಟೆ ಮತ್ತು ಚಪ್ಪಲಿ ಹಾಕಿಕೊಂಡಿದ್ದನು. ಇದನ್ನು ಕಂಡು ಆ ರಾಯಭಾರಿ ಹುಬ್ಬೇರಿಸಿದ್ದನು.

ಒಂದು ಮುಖ್ಯ ವಿಷಯ ಮಾತ್ರ ಜೆಫರ್‌ಸನ್ನನಲ್ಲಿ ಬಹಳ ಆಳವಾಗಿ ಬೇರೂ

ರಿತ್ತು. ತಾನು ಗುಲಾಮರ ಒಡೆಯನಲ್ಲವೆಂಬ ಅಂಶ ಅವನನ್ನು ಪ್ರತಿ ದಿನ ಕಾಡುತ್ತಿತ್ತು. ಮಾನವ ಹಕ್ಕುಗಳಿಗಾಗಿ ತನ್ನನ್ನೂ ಅರ್ಪಿಸಿಕೊಂಡ ವ್ಯಕ್ತಿಯೊಬ್ಬನಲ್ಲಿ ಇಂಥ ಹೊಂದಾಣಿಕೆ ಸಾಧ್ಯವೆ? ಈ ಪ್ರಶ್ನೆಗೆ ಪ್ರೊ|| ವಿಲ್ಸನ್ "ಯಾವ ವ್ಯಕ್ತಿ ಗುಲಾಮರನ್ನಿಟ್ಟುಕೊಂಡ ಸಮಾಜದಲ್ಲಿ ಹುಟ್ಟಿದನೋ, ಯಾರ ಮನೆಯಲ್ಲಿ ಮತ್ತು ಅವರ ಬಂಧು ಬಳಗದವರ ಮನೆಗಳಲ್ಲಿ ಗುಲಾಮರಿದ್ದರೋ, ಯಾರಿಗೆ ಗುಲಾಮರ ದುಡಿಮೆಯ ಫಲವೇ ಆಸ್ತಿಯಾಗಿ ಬಂದಿತ್ತೋ, ಇಂಥ ವ್ಯಕ್ತಿ ಸಣ್ಣ ವಯಸ್ಸಿನಲ್ಲಿಯೇ 'ಗುಲಾಮಗಿರಿ ತಪ್ಪು ಮತ್ತು ಇದನ್ನು ಒತ್ತಾಯದಿಂದಲಾದರೂ ಕೊನೆಗಳಿಸಬೇಕು'ಯೆಂದು ನಿರ್ಧರಿಸಲು ಸಾಧ್ಯವೆ?" ಎಂದು ಪ್ರಶ್ನೆ ಹಾಕಿದ್ದಾನೆ.

ಈತನು ಗುಲಾಮಗಿರಿಯನ್ನು ಅನೇಕ ಶಾಸನ ಬದ್ಧ ಕ್ರಮಗಳ ಮೂಲಕ ರದ್ದುಗೊಳಿಸಲು ಪ್ರಯತ್ನಿಸಿದನು. ಗುಲಾಮರ ವ್ಯಾಪಾರವನ್ನು ಈತ ಬಹಳ ಕಟುವಾಗಿ ಖಂಡಿಸಿದನು. ಜೆಫರ್‌ಸನ್ ಖಂಡಿಸಿದ ಹೇಳಿಕೆಗಳನ್ನು ಸ್ವಾತಂತ್ರ್ಯ ಘೋಷಣಾ ಪತ್ರದಿಂದ ತೆಗೆದು ಹಾಕಬೇಕೆಂದು ಜಾರ್ಜಿಯಾ ಮತ್ತು ದಕ್ಷಿಣ ಕೆರೋಲಿನಾದ ಪ್ರತಿನಿಧಿಗಳು ಒತ್ತಾಯಿಸಿದರು. ಅವರ ಈ ಕ್ರಮದಿಂದ ಜೆಫರ್‌ಸನ್ ತಲ್ಲಣಗೊಂಡನು.

ಜೆಫರ್‌ಸನ್ನನ ಕನಸೊಂದು ಕೊನೆಗೂ ನನಸಾಯಿತು. ಅದೆಂದರೆ ವರ್ಜಿನಿಯಾದಲ್ಲೊಂದು ವಿಶ್ವವಿದ್ಯಾಲಯದ ಸ್ಥಾಪನೆ. ಮಾಂಟಿಸೆಲ್ಲೊದಿಂದ ಸುಮಾರು ೩ ಕಿ.ಮಿ. ದೂರದಲ್ಲಿ ಕಟ್ಟಲಾಗುತ್ತಿದ್ದ ಈ ಕಟ್ಟಡದ ಪ್ರಗತಿಯನ್ನು, ಜೆಫರ್‌ಸನ್ ತನ್ನ ಮನೆಯಲ್ಲಿಯೇ ಕುಳಿತು, ದೂರದರ್ಶಕದ ಮೂಲಕ ವೀಕ್ಷಿಸುತ್ತಿದ್ದನು. ೧೮೨೫ರ ಮಾರ್ಚ್ ೭ ರಂದು ವರ್ಜಿನಿಯಾ ವಿಶ್ವವಿದ್ಯಾಲಯ ಪ್ರಾರಂಭಗೊಂಡಿತು. ಜೆಫರ್‌ಸನ್ನನ ಸೂಚನೆಯಂತೆ,ವೈದ್ಯಕೀಯ ಕಾಲೇಜಿನಲ್ಲೊಂದು ಚಿಕಿತ್ಸಾಲಯದ ವ್ಯವಸ್ಥೆ ಮಾಡಲಾಯಿತು. ಇಲ್ಲಿ ಬಡವರು ಕಡಿಮೆ ಹಣ ಅಥವಾ ಪುಕ್ಕಟೆಯಾಗಿ ಚಿಕಿತ್ಸೆ ಪಡೆಯಬಹುದಾಗಿತ್ತು. ಸ್ಮೈಲಿಪೇನೆಗೆ ಚುಚ್ಚುಮದ್ದನ್ನು ಎಲ್ಲರಿಗೂ ಪುಕ್ಕಟೆಯಾಗಿ ನೀಡಲಾಗುತ್ತಿತ್ತು.

೧೮೨೬ರ ಜುಲೈ ೪ ರಂದು (ಮಧ್ಯಾಹ್ನ ೧೨.೫೦ಕ್ಕೆ) ಕೊನೆಯುಸಿರೆಳೆದನು. ತನ್ನ ಗೋರಿಯ ಮೇಲೆ ಮೂರು ಸಾಧನೆಗಳನ್ನು ಮಾತ್ರ ಬರೆಯತಕ್ಕದ್ದೆಂದು ಸೂಚಿಸಿದ್ದನು: ೧) ಸ್ವಾತಂತ್ರ್ಯ ಘೋಷಣಾಪತ್ರದ ಲೇಖಕ, ೨) ವರ್ಜಿನಿಯಾದ ಧಾರ್ಮಿಕ ಸ್ವಾತಂತ್ರ್ಯದ ಶಾಸನದ ಲೇಖಕ, ೩) ವರ್ಜಿನಿಯಾ ವಿಶ್ವವಿದ್ಯಾಲಯದ ಪಿತಾಮಹ. ತಾನೊಬ್ಬ ಅಧ್ಯಕ್ಷ, ಉಪಾಧ್ಯಕ್ಷ, ವರ್ಜಿನಿಯಾದ ರಾಜ್ಯಪಾಲ ಹಿರಿಯ ಮಂತ್ರಿ ಮತ್ತು ಕಾಂಗ್ರೆಸ್ಸಿನ ಸದಸ್ಯ, ಫ್ರಾನ್ಸಿಗೆ ಮಂತ್ರಿ ಮುಂತಾದವನ್ನು ಬರೆಯುವಂತಿರಲಿಲ್ಲ. ಈ ಎಲ್ಲ ಗೌರವಗಳು "ಜನರು ನನಗೆ ನೀಡಿದಂಥವು" ಎಂದು ಜೆಫರ್‌ಸನ್ ಹೇಳಿದ್ದನು. ತನ್ನನ್ನು ಜನರು "ನಾನು ಜನರಿಗಾಗಿ ಮಾಡಿದ ಕೆಲಸಗಳಿಗೆ" ನೆನೆಯಲೆಂಬುದೇ ಜೆಫರ್‌ಸನ್ನನ ಆಶೆಯಾಗಿತ್ತು.

ಕೆಲವು ಅಭಿಮಾನಿಗಳು ಈತನ ಹುಟ್ಟುಹಬ್ಬಕ್ಕೆ ರಜೆ ಘೋಷಿಸುವ ಸಲಹೆ ನೀಡಿದಾಗ ಜೆಫರ್‌ಸನ್ ಒಪ್ಪಲಿಲ್ಲ. "ಕೇವಲ

ಪ್ರಜಾಸತ್ತೆಯ ಹುಟ್ಟು ದಿನ-ಜುಲೈ ೪-ಇಂಥ ಗೌರವಕ್ಕೆ ಪಾತ್ರವೆಂದು ಅವನ ವಾದವಾಗಿತ್ತು. ಹೀಗಾಗಿ ಆತನನ್ನು ನೆನೆಯಲು ಒಂದು ಅಧಿಕೃತ ದಿನವಿಲ್ಲವಾದರೂ ಜೆಫರ್‌ಸನ್ ಮಾತ್ರ ಸ್ವಾತಂತ್ರ್ಯ ಪ್ರಿಯರೆಲ್ಲರ ಮನಮಂದಿರದಲ್ಲಿ ಚಿರಸ್ಥಾಯಿಯಾಗಿದ್ದಾನೆ.

ಜೆಫರ್ಸನ್ ಉವಾಚ

* "ನಾನು ನಿಷ್ಠುರವಾದ ಹಿಡಿತವುಳ್ಳ ಹಾಗೂ ಸರಳವಾಗಿರುವ ಸರಕಾರದ ಪರವಾಗಿದ್ದೇನೆ."
* "ನಾವು ಯಾವಾಗ ಬಿತ್ತಬೇಕು ಮತ್ತು ಬೆಳೆಯಬೇಕೆಂಬುದು ವಾಶಿಂಗ್ಟನ್ನಿನಿಂದ ನಿರ್ದೇಶಿತವಾಗುವದಾದರೆ, ನಮಗೆ ತೀವ್ರ (ಆಹಾರದ) ಕೊರತೆಯುಂಟಾಗುತ್ತದೆ.
* "ಜನರಲ್ಲಿ ಸಹಜವಾದ ಶ್ರೀಮಂತಿಕೆಯುಂಟು. ಇದಕ್ಕೆ ಸದ್ಗುಣ ಮತ್ತು ಜಾಣ್ಮೆಯೇ ಮುಖ್ಯ ಕಾರಣಗಳು (ಅಂಶಗಳು.)
* "ಒಬ್ಬ ವಿಚಾರವಂತ ಇನ್ನೊಬ್ಬನ ಮೇಲೆ ಅಧಿಕಾರ ನಡೆಸಿ ಸಂತೋಷಪಡಲು ಸಾಧ್ಯವೆಂಬುದು ನನಗೆ ತಿಳಿಯದಂತಾಗಿದೆ."
* "ಯಾವುದನ್ನು ನಾವು ಬಹಿರಂಗವಾಗಿ ಒಪ್ಪುವದಿಲ್ಲವೋ ಅಂಥ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು ಕೊರಗಬಾರದು. ಯಾವುದೇ ಕೆಲಸವನ್ನು ಗುಪ್ತವಾಗಿ ಮಾಡಬೇಕೆಂಬ ಚಪಲವುಂಟಾದರೆ, ಅದನ್ನು 'ನಾನು ಬಹಿರಂಗವಾಗಿ ಮಾಡುವೆನೆ?' ಎಂದು ಪ್ರಶ್ನಿಸಿಕೊಳ್ಳಬೇಕು. ಅದನ್ನು ಮಾಡುವಂತಿರಲಿಲ್ಲವೆಂದೆನಿಸಿದರೆ, ಅದೊಂದು ತಪ್ಪು ಕೆಲಸವೆಂದೇ ಅರ್ಥ."
* "ಕೋಪ ಬಂದಾಗ ಹತ್ತರವರೆಗೆ ಎಣಿಸಿ ಅನಂತರ ಮಾತನಾಡಬೇಕು. ಬಹಳ ಕೋಪ ಬಂದಿದ್ದರೆ, ನೂರರವರೆಗೆ ಎಣಿಸಬೇಕು."
* "ಹಿತರಕ್ಷಣೆಯ ನೆಪದಲ್ಲಿ ಜನರ ದುಡಿಮೆಯನ್ನು ವ್ಯರ್ಥಗೊಳಿಸುತ್ತಿರುವ ಸರಕಾರವನ್ನು ತಡೆಯುವದಾದರೆ, ಜನರು ಸಂತೋಷಪಡಬೇಕು."
* "ತಪ್ಪಿಗೆ ಮಾತ್ರ ಸರಕಾರದ ಬೆಂಬಲ ಬೇಕಾಗುತ್ತದೆ. ಸತ್ಯ ತಾನಾಗಿಯೇ ನಿಲ್ಲಬಲ್ಲದು."
* "ಪ್ರತಿಯೊಬ್ಬ ವ್ಯಕ್ತಿ ತಾನು ಕೂಡಾ ಅದರ ಒಂದು ಅಂಗವೆಂದು ತಿಳಿದುಕೊಂಡಂಥ ಸರಕಾರ ಮಾತ್ರ ಬಹಳ ಶಕ್ತಿಶಾಲಿಯಾಗಿರುತ್ತದೆ."
* ನೆರೆ ಹೊರೆಯವರನ್ನು ನಿನ್ನನ್ನು ಪ್ರೀತಿಸಿದಷ್ಟೇ ಪ್ರೀತಿಸು ಮತ್ತು ನಿನ್ನ ದೇಶವನ್ನು ನಿನಗಿಂತಲೂ ಹೆಚ್ಚು ಪ್ರೀತಿಸು."

ರಮಣ ಮಹರ್ಷಿಗಳು

ಡಿ. ಎನ್. ಶ್ರೀನಾಥ್

ಭಾರತೀಯ ಸಂಸ್ಕೃತಿ, ಧರ್ಮ ಮತ್ತು ರಾಷ್ಟ್ರದ ಭಾವನಾತ್ಮಕ ಏಕತೆಯನ್ನು ಅಕ್ಷುಣ್ಯಗೊಳಿಸುವಲ್ಲಿ ದಕ್ಷಿಣ ಭಾರತದ ಧರ್ಮಾಚಾರ್ಯರು ಅಭೂತಪೂರ್ವ ಕಾರ್ಯ ವೆಸಗಿದ್ದಾರೆ. ಈ ಸಂದರ್ಭವಲ್ಲಿ ಜಗದ್ಗುರು ಶಂಕರಾಚಾರ್ಯರು, ರಾಮಾನುಜಾಚಾರ್ಯರು, ವಲ್ಲಭಾಚಾರ್ಯರಂತಹ ಪ್ರಾಚೀನ ಗುರುವರ್ಯರ ಪರಂಪರೆಯಲ್ಲಿ ರಮಣ ಮಹರ್ಷಿಗಳ ಹೆಸರು ಆಧುನಿಕ ಕಾಲದಲ್ಲಿ ತನ್ನ ಉಲ್ಲೇಖನೀಯ ಸೇವಾ ಕಾರ್ಯಗಳು ಮತ್ತು ಶಿಕ್ಷಣ ಪ್ರಸಾರದಿಂದ ಅವಿಸ್ಮರಣೀಯ. ಭಾರತ ಮತ್ತು ವಿದೇಶದ ಸಾಧಕರು ಈ ಕಾರ್ಯವನ್ನು ಗೌರವದಿಂದ ನಡೆಸಿಕೊಂಡು ಬರುತ್ತಿದ್ದಾರೆ.

ರಮಣ ಮಹರ್ಷಿಗಳ ವಿದೇಶಿ ಪ್ರಶಂಸಕರು ರಮಣರ ತಮಿಳು ಮತ್ತು ಸಂಸ್ಕೃತ ಭಾಷೆಯ ರಚನೆಗಳನ್ನು ಇಂಗ್ಲೀಷಿಗೆ ಅನುವಾದಿಸಿದ್ದಾರೆ. ಇವರ ಬದುಕು ಮತ್ತು ಉಪದೇಶಗಳ ಬಗ್ಗೆ ಸೂಕ್ತ ಬೆಳಕು ಹರಿಸಿದ್ದಾರೆ. ಮಿ. ಆರ್ಥರ್ ಆಸ್‌ಬೋರ್ನ್ ರವರು "ರಮಣ್ ಮಹರ್ಷಿ ಎಂಡ್ ಪಾಥ್ ಆಫ್ ಸೆಲ್ಫ್ ನಾಲೆಜ್ಡ್" ಎಂಬ ಪುಸ್ತಕದಲ್ಲಿ ಮಹರ್ಷಿಗಳ ವ್ಯಕ್ತಿತ್ವ ಹಾಗೂ ತಪಸ್ಸಿನ ಬಗ್ಗೆ ; ಅಲ್ಲದೆ ಅವರ ಉಪದೇಶಗಳ ಬಗ್ಗೆಯೂ ಮಹತ್ವಪೂರ್ಣ ವಿಷಯಗಳನ್ನು ಸಂಕಲಿಸಿದ್ದಾರೆ. ಈ ಪುಸ್ತಕಕ್ಕೆ ಮಾಜಿ ರಾಷ್ಟ್ರಪತಿ ಡಾ॥ ರಾಧಾಕೃಷ್ಣನ್‌ರವರು ಮುನ್ನುಡಿಯನ್ನು ಬರೆದಿದ್ದಾರೆ. ಡಾ॥ ರಾಧಾಕೃಷ್ಣನ್‌ರವರ ಈ ಮಾತುಗಳು ಇಲ್ಲಿ ಉಲ್ಲೇಖನೀಯ—"ಪ್ರಸ್ತುತ ಗ್ರಂಥದಲ್ಲಿ ಆತ್ಮದ, ಧರ್ಮದ ವರ್ಣನೆಯಿದೆ. ಇದು ಮತಗಳು ಹಾಗೂ ಮಿಥ್ಯಾ ವಿಶ್ವಾಸಗಳು, ಧಾರ್ಮಿಕ ಪದ್ಧತಿಗಳು ಮತ್ತು ಕರ್ಮಕಾಂಡಗಳಿಂದ ಮುಕ್ತಿ ದೊರಕಿಸಿಕೊಡುತ್ತದೆ. ಅಲ್ಲದೆ ಸ್ವತಂತ್ರ ಆತ್ಮಗಳ ರೂಪದಲ್ಲಿ ಜೀವನ-ಯಾಪನೆ ಮಾಡಲು ಯೋಗ್ಯರನ್ನಾಗಿಸುತ್ತದೆ. ಎಲ್ಲಾ ಧರ್ಮಗಳ ಸಾರ ಒಂದು ಆಂತರಿಕ ವೈಯಕ್ತಿಕ ಅನುಭವ ಮತ್ತು ದಿವ್ಯಶಕ್ತಿಯೊಂದಿಗೆ ವ್ಯಕ್ತಿಗತವಾಗಿ ಸಂಬಂಧಿಸಿದೆ. ಇಲ್ಲಿ ಪೂಜಾ ಪುನಸ್ಕಾರ ಕಡಿಮೆಯಿದ್ದು, ಶೋಧನೆ ಅಧಿಕವಾಗಿದೆ. ಇದು ನಮ್ಮ ಸ್ವರೂಪವನ್ನು ಗುರುತಿಸುವಲ್ಲಿ ಹಾಗೂ ಮುಕ್ತಿಯ ಮಾರ್ಗದಲ್ಲಿ ಬಹು ಮುಖ್ಯವಾಗಿದೆ."

ರಮಣ ಮಹರ್ಷಿಗಳು ದಕ್ಷಿಣ ಭಾರತದ ಬ್ರಾಹ್ಮಣ ಕುಟುಂಬವೊಂದರಲ್ಲಿ

ಡಾ॥ ದುರ್ಗಾಶಂಕರ್ ಮಿಶ್ರ ಅವರ ಹಿಂದಿ ಲೇಖನದ ಅನುವಾದ.

೩೦-೧೨-೧೮೭೯ರಲ್ಲಿ ತಿರುಚುಳಿ ಎಂಬ ಕಸ್ಬೆಯಲ್ಲಿ ಹುಟ್ಟಿದರು. ಇಲ್ಲಿ ಭೂಮಿ ನಾಥೇಶ್ವರ ಮಹಾದೇವನ ಪ್ರಸಿದ್ಧ ಮಂದಿರ ವಿದೆ. ಮಹರ್ಷಿಗಳು ಮಂದಿರದಲ್ಲಿ ನಡೆಯು ತ್ತಿದ್ದ 'ರುದ್ರದರ್ಶನದ' ಮಹತ್ವಪೂರ್ಣ ಉತ್ಸವದ ರಾತ್ರಿ ಒಂದು ಗಂಟೆಗೆ ಜನ್ಮ ವಿತ್ತಿದ್ದರು. ತಂದೆ ಶ್ರೀ ಸುಂದರಮ್ ಅಯ್ಯರ್ ಹಾಗೂ ತಾಯಿ ಅಲಗಮ್ಮಾ. ರಮಣ ಮಹರ್ಷಿಗಳ ಬಾಲ್ಯದ ಹೆಸರು ವೆಂಕಟರಮಣ. ಇವರ ಹನ್ನೆರಡನೆಯ ವರ್ಷದಲ್ಲಿ ಇವರ ತಂದೆ ಇಹಲೋಕ ತ್ಯಜಿಸಿ ದರು. ಹೀಗಾಗಿ ತಮ್ಮ ತಾಯಿ, ಇಬ್ಬರು ಸಹೋದರರು ಹಾಗೂ ಓರ್ವ ಸಹೋದರಿ ಯೊಂದಿಗೆ ಮಧುರೆಯಲ್ಲಿದ್ದ ತಮ್ಮ ಚಿಕ್ಕಪ್ಪ ಶ್ರೀ ಸುಬ್ಬಯರ್‌ರ ಮನೆಗೆ ಇವರು ಹೋಗ ಬೇಕಾಯಿತು. ಚಿಕ್ಕಪ್ಪ ಇವರನ್ನು ಮಧುರೆಯ ಅಮೇರಿಕನ್ ಮಿಶನ್ ಹೈಸ್ಕೂಲಿಗೆ ಸೇರಿಸಿದರು. ಆದರೆ, ಇವರಿಗೆ ವಿದ್ಯಾಭ್ಯಾಸದಲ್ಲಿ ಆಸಕ್ತಿಯಿರಲಿಲ್ಲ. ಆಟ, ಅಲೆದಾಟವೆಂದರೆ ಇವರಿಗೆ ಪ್ರಾಣ.

ಮಹರ್ಷಿಗಳಿಗೆ, ಕಿಶೋರಾವಸ್ಥೆಯಲ್ಲಿ ಹೆಚ್ಚು ನಿದ್ರೆ ಬರುತ್ತಿತ್ತು. ಮಹರ್ಷಿಗಳು ಒಂದು ಕಡೆ ಹೀಗೆಂದು ಬರೆದಿದ್ದಾರೆ. "ನನ್ನ ಮಿತ್ರರು ನನ್ನೊಂದಿಗೆ ಸೇಡು ತೀರಿಸಿ ಕೊಳ್ಳುವಾಗ, ನಾನು ಪ್ರಗಾಢ ನಿದ್ರೆಯಲ್ಲಿ ಇರುವಾಗಲೇ ಬರುತ್ತಿದ್ದರು. ಅವರು, ಆಗ ನನ್ನನ್ನು ಬಯಸಿದಲ್ಲಿಗೆ ಕರೆದೊಯ್ದು ಮನಸಾರೆ ಹೊಡೆದು ಮತ್ತೆ ನನ್ನನ್ನು ನನ್ನ ಹಾಸಿಗೆಗೆ ತಂದು ಹಾಕಿಬಿಡುತ್ತಿದ್ದರು. ಕಾರಣ, ನಾನು ಎಚ್ಚರವಾಗಿರುವಾಗ ಯಾರೂ ನನ್ನನ್ನು ಮುಟ್ಟುವ ಧೈರ್ಯ ವನ್ನು ಮಾಡುತ್ತಿರಲಿಲ್ಲ."

೧೭ನೇ ವರ್ಷದಲ್ಲಿ ರಮಣ ಮಹರ್ಷಿಗಳು ಮದುರೆಯ ಸಮೀಪದ ಅರುಣಾಚಲ ಪರ್ವತದ ಪಾವಿತ್ರ್ಯತೆ ಹಾಗೂ ದಿವ್ಯತೆ ಯೆಡೆಗೆ ಆಕರ್ಷಿತರಾದರು. ಅವರು ಸಾಮಾನ್ಯವಾಗಿ ಅರುಣಾಚಲ ಪರ್ವತದಲ್ಲಿ ಸುತ್ತು ಹಾಕುತ್ತಿದ್ದರು. ಪರ್ವತವನ್ನು ಕಂಡು ಮುಗ್ಧರಾಗುತ್ತಿದ್ದರು. ಈ ಅರುಣಾಚಲ ಪರ್ವತದಲ್ಲಿ ತಮ್ಮ 'ರಮಣಾ- ಶ್ರಮ'ವನ್ನು ನಿರ್ಮಿಸಿ 'ಸಾಧನೆ'ಯಲ್ಲಿ ಮಗ್ನರಾಗಿರಲಾರಂಭಿಸಿದರು. ತಮಿಳಿನಲ್ಲಿ ಈ ಪರ್ವತದ ಹೆಸರು 'ತಿರೂವಣ್ಣಮಲೈ.' ಸ್ಕಂದ ಪುರಾಣದಲ್ಲಿ ಶಿವನು 'ಕಲಿಯುಗದಲ್ಲಿ ನಾನು ಅರುಣಾಚಲ ಪರ್ವತದ ರೂಪದಲ್ಲಿ ಭಕ್ತರಿಗೆ ಸದಾ ಸಿಗುವೆ' ಎಂದು ಆಶ್ವಾಸನೆ ನೀಡಿದ್ದಾನೆ.

'ಪೆರಿಯಾಪುರಾಣಮ್'ನ ೬೩ ತಮಿಳು ಶೈವಭಕ್ತರ ಜೀವನ ಕಥೆಗಳಿಂದ ರಮಣ ಮಹರ್ಷಿಗಳು ತುಂಬಾ ಪ್ರಭಾವಿತರಾದರು. ಇದರಿಂದಾಗಿ ಅವರಿಗೆ ಎಲ್ಲಾ ಸ್ವಪ್ನಗಳಿ ಗಿಂತ ಶ್ರೇಷ್ಠವಾದ ಶಕ್ತಿಯೊಂದಿದೆ, ಎಲ್ಲಾ ಮಹತ್ವಾಕಾಂಕ್ಷೆಗಳಿಗಿಂತ ಮಿಗಿಲಾದ ಶಕ್ತಿ ಯೊಂದಿದೆ ಹಾಗೂ ಈ ದಿವ್ಯಶಕ್ತಿಯ ಆಗಮನ ಈ ಪೃಥ್ವಿಯಲ್ಲಿ ಸಾಧ್ಯ ಎಂದು ಮನವರಿಕೆಯಾಯಿತು.

ಸ್ಕಂದ ಪುರಾಣದ ಕಥೆಯೊಂದರ ಪ್ರಕಾರ ಗೌತಮ ಋಷಿಗಳ ತಪಸ್ಸಿನಿಂದ ಪ್ರಸನ್ನ ಗೊಂಡು ಅರ್ಧನಾರೀಶ್ವರನ ರೂಪದಲ್ಲಿ ಶಿವನು ಈ ಸ್ಥಳದಲ್ಲೇ ಅವರಿಗೆ ದರ್ಶನ ಕೊಟ್ಟು ಪಾರ್ವತಿಗೆ "ನಾನೂ ಅರುಣ ಎಂಬ ಹೆಸರನ್ನು ಧರಿಸಿ ಈ ಅರುಣಾಚಲ ಪರ್ವತದಲ್ಲಿ ವಾಸಿಸುವೆ, ಈ ಅರುಣ ಕ್ಷೇತ್ರಕ್ಕೆ ಎಲ್ಲಾ ಸಿದ್ಧಿಗಳು ಸುಲಭವಾಗು

ತ್ತದೆ" ಎಂದಿದ್ದನಂತೆ. ಇಂದಿಗೂ ಈ ಪರ್ವತದಲ್ಲಿ ಅರುಣಾಚಲ ಮಹಾದೇವ ಮತ್ತು ಅರುಣಾದೇವಿಯ ವಿಶಾಲ ಮಂದಿರವಿದೆ. ಶಿವಭಕ್ತರು ಪ್ರತಿವರ್ಷ ಶಿವರಾತ್ರಿಯಂದು ಇಲ್ಲಿ ಕಲೆಯುತ್ತಾರೆ. ಇದೇ ಪರ್ವತದಲ್ಲಿ ರಮಣ ಮಹರ್ಷಿಗಳು ತಪಸ್ಸುಗೈದು ಸಿದ್ಧಿಯನ್ನು ಪಡೆದರು. ಉತ್ತರಭಾರತೀಯರಿಗೆ ಕಾಶಿ ಹೇಗೆ ಮಹತ್ವಪೂರ್ಣವೋ ಹಾಗೆಯೇ ದಕ್ಷಿಣ ಭಾರತೀಯರಿಗೆ ಅರುಣಾಚಲ ಮಹತ್ವದ್ದಾಗಿದೆ. ಕಾಶಿಯಲ್ಲಿ ಸತ್ತರೆ ಮುಕ್ತಿ ಸಿಗುತ್ತದೆ. ಆದರೆ ಅರುಣಾಚಲದ ಸ್ಮರಣೆಮಾತ್ರದಿಂದಲೇ ಮುಕ್ತಿ ಲಭ್ಯ ಎಂಬುದು ದಕ್ಷಿಣ ಭಾರತೀಯರ ನಂಬಿಕೆಯಾಗಿದೆ—

'ಶಾಣ್ಯಂತು ಮರಣಾನ್ಮುಕ್ತಿ : ಸ್ಮರಣಾದರುಣಾಚಲಮ್' ರಮಣ ಮಹರ್ಷಿಗಳು ಜೀವನ ಪರ್ಯಂತ ಅರುಣಾಚಲ ಪರ್ವತದಲ್ಲಿನ 'ರಮಣಾಶ್ರಮ'ದಲ್ಲೇ ಇದ್ದರು. ೧೪-೪-೧೯೫೦ರಂದು ಇಲ್ಲೇ ತಮ್ಮ ಇಹಲೋಕ ಯಾತ್ರೆಯನ್ನು ಕೊನೆಗೊಳಿಸಿದರು.

ರಮಣ ಮಹರ್ಷಿಗಳು ತಮಿಳು ಭಾಷಿಗಳಾಗಿದ್ದರು. 'ಆತ್ಮಬೋಧ', 'ನಾನು ಯಾರು?', 'ದರ್ಶದರ್ಶನ', 'ಭಾಷ್ಯ', 'ಶ್ರೀ ಅರುಣಾಚಲ ನವಮಣಿ ಮಾಲಾಈ', 'ಶ್ರೀ ಅರುಣಾಚಲ ಪದಿಕಮ್', 'ಶ್ರೀ ಅರುಣಾಚಲ ಅಷ್ಟಕಂ' ಮತ್ತು 'ಅರುಣಾಚಲ ಪಂಚರತ್ನಂ' ಗ್ರಂಥಗಳನ್ನು ಇವರು ತಮ್ಮ ಭಕ್ತ ಕಾವ್ಯಕಾಂತ ಶ್ರೀ ಗಣಪತಿ ಮುನಿಯ ಪ್ರಾರ್ಥನೆಯಿಂದಾಗಿ ಸಂಸ್ಕೃತದಲ್ಲಿ ಬರೆದರು. 'ಉಪದೇಶಿ ಸಾರಮ್' ಎಂಬ ಗ್ರಂಥವನ್ನು ಮಹರ್ಷಿಗಳು ಸಂಸ್ಕೃತದಲ್ಲಿ ಬರೆದರು.

ಮಿ॥ ಗ್ರಾಂಟ್ ಢಫ್‌ರವರು ಇಂಗ್ಲೇಂಡಿನಿಂದ ಮಹರ್ಷಿಗಳ ದರ್ಶನಕ್ಕಾಗಿ ಬಂದಾಗ ಇವರಿಂದ ಪ್ರಭಾವಿತರಾಗಿ "ರಮಣಾಶ್ರಮ"ದಲ್ಲಿ ಅನೇಕ ವರ್ಷಗಳಿದ್ದು ಭಾರತೀಯ ದರ್ಶನ ಹಾಗೂ ಧರ್ಮಗಳ ಬಗ್ಗೆ ಗಂಭೀರವಾಗಿ ಅಧ್ಯಯನ ಕೈಗೊಂಡರು.

ರಮಣ ಮಹರ್ಷಿಗಳು ಜಗದ್ಗುರು ಶ್ರೀ ಶಂಕರಾಚಾರ್ಯರ ಅದ್ವೈತ ದರ್ಶನದ ಸಮರ್ಥಕರಾಗಿದ್ದರು. ಮಹರ್ಷಿಗಳು ಜಗತ್ತನ್ನು ತ್ಯಜಿಸುವ ಅಥವಾ ಅದರಿಂದ ವಿಮುಖಗೊಳ್ಳಲು ಹೇಳುವುದಿಲ್ಲ. ಪ್ರತಿಯಾಗಿ ನಿರಂತರ ಆಂತರಿಕ ಜಿಜ್ಞಾಸೆಗೆ ಒತ್ತುಕೊಡುತ್ತಾರೆ. ಯಾರು, "ನಾನು ಯಾರು?" ಎಂಬ ರಹಸ್ಯವನ್ನು ಸಮ್ಯಕ್ ರೀತಿಯಿಂದ ತಿಳಿಯುತ್ತಾನೋ ಅವನೇ ಮುಕ್ತಗೊಳ್ಳುತ್ತಾನೆ." ಎಲ್ಲಾ ಧರ್ಮಾವಲಂಬಿಗಳು ರಮಣ ಮಹರ್ಷಿಗಳ ಉಪದೇಶವನ್ನು ಗೌರವಿಸುತ್ತಾರೆ. ಕಾರಣ ಎಲ್ಲರಿಗೂ ಅವರ ಉಪದೇಶಗಳ ಮಹತ್ವದ ಅರಿವಾಗುತ್ತದೆ.

ಸರ್ವಪಲ್ಲಿ ರಾಧಾಕೃಷ್ಣನ್ ಅವರು ಮಿ॥ ಗ್ರಾಂಟ್ ಡಫ್ ಅವರಿಗೆ, "ನೀವು ಮಹರ್ಷಿಗಳ ಸಾನಿಧ್ಯದಲ್ಲಿದ್ದೀರಿ. ಶ್ರೀ ಶಂಕರಾಚಾರ್ಯರಂತೆ ಅವರೂ ಪೂಜ್ಯರು" ಎಂದು ತಮ್ಮ 'ಫೈವ್ ಹಿಮ್ಸ್ ಟು ಶ್ರೀ ಅರುಣಾಚಲ್' ಎಂಬ ಪುಸ್ತಕದಲ್ಲಿ ಹೇಳಿದ್ದಾರೆ.

ಮಹರ್ಷಿಗಳು, ಆತ್ಮದ ಅನ್ವೇಷಣೆಗೆ ಮಹತ್ವ ಕೊಡುತ್ತಾರೆ. ಇದರಿಂದಲೇ ಪೂರ್ಣಾನಂದ ಸಾಧ್ಯ, ಎನ್ನುತ್ತಾರೆ.

ಶಂಕರಾಚಾರ್ಯರು ಈ ಜಗತ್ತನ್ನು ಮಿಥ್ಯೆ–ಮಾಯೆ' ಎಂದರು. ಬ್ರಹ್ಮ

ನೊಬ್ಬನೇ ಸತ್ಯ ಎಂದರು. ಅವರ ಈ ಮಾತನ್ನು ಅನೇಕರು (ವೈಷ್ಣವ ಭಕ್ತರು) ವಿಶೇಷವಾಗಿ—ಶ್ರೀ ಅರವಿಂದರು ವಿರೋಧಿಸಿದರು. ಆದರೆ ರಮಣರು ಶಂಕರರನ್ನು ಸಮರ್ಥಿಸುತ್ತಾ "ಸ್ವಪ್ನ, ಸ್ವಪ್ನಾವಸ್ಥೆಯಲ್ಲಿ ಸತ್ಯ; ಆದರೆ ಪದಾರ್ಥನಿಷ್ಠ ವಾಸ್ತವಿಕತೆಯಲ್ಲಿ ಅವಾಸ್ತವಿಕ; ಹಾಗೆಯೇ ಆತ್ಮದ ಅಭಿವ್ಯಕ್ತಿಯ ರೂಪದಲ್ಲಿ ವಿಶ್ವ ವಾಸ್ತವಿಕ; ಆದರೆ ಆತ್ಮಕ್ಕೆ ಹೊರಗಾಗಿ ಪದಾರ್ಥನಿಷ್ಠ ವಾಸ್ತವಿಕತೆಯ ರೂಪದಲ್ಲಿ 'ಅವಾಸ್ತವಿಕತೆ' ಎನ್ನುತ್ತಾರೆ.

ರಮಣರ ಪ್ರಕಾರ ಬ್ರಹ್ಮ ವಾಸ್ತವಿಕ, ವಿಶ್ವ ಅವಾಸ್ತವಿಕ ಹಾಗೂ ಬ್ರಹ್ಮವೇ ವಿಶ್ವ. ವಿಶ್ವವನ್ನು ಬ್ರಹ್ಮನಿಂದ ಬೇರೆಯಾಗಿ ನೋಡಿದಾಗ ಈ ದರ್ಶನ ಅಸತ್ಯ ಹಾಗೂ ಮಾಯೆಯಾಗುತ್ತದೆ. ಘಟನೆಗಳನ್ನು ಆತ್ಮರೂಪದಲ್ಲಿ ಅನುಭವಿಸಿದಾಗ ಅದು ವಾಸ್ತವಿಕವಾಗುತ್ತದೆ; ಆತ್ಮದಿಂದ ಬೇರೆಯಾಗಿ ಕಂಡಾಗ ಅದು ಮಾಯೆಯಾಗುತ್ತದೆ.

ಎಲ್ಲರೂ ಕರ್ತವ್ಯ-ಭಾವನೆಯಿಂದ ಪ್ರೇರಿತರಾಗಿ ನಿರಭಿಮಾನಿಗಳಾಗಿ, ನಿಸ್ವಾರ್ಥತೆಯಿಂದ ಕಾರ್ಯವೆಸಗಿದರೆ ಶೋಷಣೆ ಹೇಳ ಹೆಸರಿಲ್ಲದಂತಾಗುತ್ತದೆ; ಪ್ರಯತ್ನಗಳು ಸರಿಯಾದ ದಿಶೆಯಲ್ಲಿ ಸಾಗುತ್ತವೆ. ಸಮನ್ವಯ ಭಾವನೆ ಬೆಳೆದು, ವಿಶ್ವದ ಅನೇಕ ಸಮಸ್ಯೆಗಳು ಬಗೆಹರಿಯುತ್ತವೆ ಎನ್ನುತ್ತಾರೆ ಮಹರ್ಷಿಗಳು.

'ವಿಧಾತನು ಜೀವಿಗಳ ಪ್ರಾರಬ್ಧ-ಕರ್ಮಾನುಸಾರ ಅವುಗಳ ಭಾಗ್ಯವನ್ನು ನಿಯಂತ್ರಿಸುತ್ತಾನೆ. ನೀವೆಷ್ಟೇ ಪ್ರಯತ್ನಿಸಿದ್ದಾಗ್ಯೂ ಭಾಗ್ಯದಲ್ಲಿದ್ದು ಆಗುವುದಿಲ್ಲ. ಹೀಗಾಗಿ ಶಾಂತಿಯಿಂದಿರುವುದೇ ಸರ್ವೋತ್ತಮ ಮಾರ್ಗ' ಎನ್ನುವ ಮಹರ್ಷಿಗಳು ಹೀಗೆನ್ನುತ್ತಾರೆ: 'ಶರೀರ ಮಾಡಬೇಕಾದ ಕ್ರಿಯೆಗಳೆಲ್ಲವೂ ಈ ಮೊದಲೇ ಅದು ಅಸ್ತಿತ್ವಕ್ಕೆ ಬರುವಾಗ ನಿರ್ಧರಿತಗೊಳ್ಳುತ್ತದೆ-ವ್ಯಕ್ತಿಯೊಬ್ಬ ನಾಟಕವೊಂದರಲ್ಲಿ ಪಾತ್ರವೊಂದನ್ನು ಅಭಿನಯಿಸುವುದಕ್ಕೂ ಮೊದಲು ಅವನ ಪಾತ್ರ ಏನೆಂಬುದನ್ನು ಈ ಮೊದಲೇ ರೂಪಿಸಲಾಗುವಂತೆ. ಹೀಗೆಯೇ ಯಾರು ಶಾಶ್ವತ ಆತ್ಮದೊಂದಿಗೆ ತನ್ನ ಏಕರೂಪವನ್ನು ಅನುಭವಿಸುವನೋ, ಅವನು ಮಾನವೀಯ ರಂಗ-ಮಂಟಪದಲ್ಲಿ ಭಯವಿಲ್ಲದೆ, ಚಿಂತೆಯಿಲ್ಲದೆ, ಆಸೆಯಿಲ್ಲದೆ, ನಿರಾಸೆಯಿಲ್ಲದೆ ಪಾತ್ರವನ್ನು ಅಭಿನಯಿಸುತ್ತಾನೆ.

ವ್ಯಕ್ತಿಯ ಎಲ್ಲಾ ಕ್ರಿಯೆಗಳೂ ನಿರ್ಧರಿತಗೊಂಡಾಗ ಇನ್ನು ಅವನ ವಾಸ್ತವಿಕತೆಯೇನು? ಎಂದು ಪ್ರಶ್ನಿಸಬಹುದು. ಆಗ ನಾನ್ಯಾರು? ಎಂಬ ವಾಸ್ತವಿಕ ಶೋಧನಾ ಮಾರ್ಗ ಈ ಪ್ರಶ್ನೆಗೆ ಉತ್ತಮ ಸಿದ್ಧತೆಯಾಗುತ್ತದೆ.

ಲಾಭಕ್ಕಿಂತಲೂ ಕರ್ತವ್ಯ ಮುಖ್ಯ. ಜಯಕ್ಕಿಂತಲೂ ಸಾಧನೆ ಮುಖ್ಯ. ಫಲಕ್ಕಿಂತಲೂ ಶ್ರಮಿಸುವುದು ಮುಖ್ಯ. ಮಾತಿಗಿಂತಲೂ ಕೃತಿ ಮುಖ್ಯ.

—ವೇದ

ನಿಮ್ಮ ಡೈರಿ

ಟಿ. ವಿ. ಅನ್ನಪೂರ್ಣಮ್ಮ

ಅನುಭವವು ಸವಿಯಲ್ಲ, ಅದರ ನೆನಪೇ ಸವಿಯು ಎಂದರು ಕವಿ ಕಣಗೋಡು. ಗತ ಘಟನೆಗಳ ವರ್ತಮಾನ ಚಿತ್ರಣವೇ ದಿನಚರಿಯ ಪಾತ್ರ: ನಿಸರ್ಗ ಅವರದೇ ಧಾಟಿಯಲ್ಲಿ, ವೇಗದಲ್ಲಿ ಮತ್ತು ರೀತಿಯಲ್ಲಿ ಪ್ರದರ್ಶಿಸುವ ಜೀವನ ನಾಟಕದ ಸ್ತಬ್ಧ ಸಂಕ್ಷಿಪ್ತ ಕಲಾತ್ಮಕ ಕುಂಚನವೇ ಡೈರಿ. ಇದರ ಸ್ವಾರಸ್ಯ ರಹಸ್ಯ ಹಾಗೂ ಅಗತ್ಯ ಏನು? ಓದಿ ಮುಂದಕ್ಕೆ!

"ಇಂದಿಗೆ ಸರಿಯಾಗಿ ಒಂದು ವರ್ಷದ ಹಿಂದೆ ಏನಾಗಿತ್ತೆಂದು ನಿನಗೆ ನೆನಪಿದೆಯೇ?"

ಅಂದು ಬೆಳಿಗ್ಗೆ ತಿಂಡಿ ತಿನ್ನುವಾಗ ನನ್ನ ಪತಿ ಕಾರ್ಲ್‌ನನ್ನು ಕೇಳಿದೆ. ಆತ ಇನ್ನೊಂದು ಗುಟುಕು ಕಾಫಿ ಕುಡಿದು ಹೇಳಿದ, "ಇಲ್ಲವಲ್ಲಾ, ಏಕೆ? ಏನಾಗಿತ್ತು?"

ನನ್ನ ಮಡಿಲಿನಲ್ಲಿದ್ದ ಐದು ವರ್ಷದ ಆ ಚಿಕ್ಕ ಡೈರಿಯಲ್ಲಿ ನೋಡಿದೆ. ಅದರಲ್ಲಿ ಈ ರೀತಿ ಬರೆದಿತ್ತು.

"ಚರಾಗಾಹ್‌ನ ಗೇಟಿನ ಹತ್ತಿರ ಗಾಳಿಯಲ್ಲಿ ಹಾರಿ ಬಂದ ಹಿಮದ ರಾಶಿ ಇತ್ತು. ಅದರ ಅಂಚಿನಲ್ಲಿ ಎರಡು ಹಳದಿಯ ಕೇಸರದ ಹೂಗಳನ್ನು ನಾವು ನೋಡಿದ್ದೆವು.

ಕಾರ್ಲ್‌ನ ಮುಖ ಅರಳಿತು. "ಹೌದೌದು. ನಾನು ಮರೆತೇಬಿಟ್ಟಿದ್ದೆ. ಆ ಹೂಗಳು ಅಲ್ಲಿಗೆ ಹೇಗೆ ಬಂದವೆಂದು ನಮಗೆ ತಿಳಿಯಲೇ ಇಲ್ಲ."

"ಏಪ್ರಿಲ್ ತಿಂಗಳ ವೇಳೆಗೆ ನಮ್ಮ ಅಂಗಳದಲ್ಲಿ ಬೇಕಾದಷ್ಟು ಕುಂಕುಮದ ಹೂಗಳು ಅರಳುತ್ತವೆ. ಆದರೆ ಆ ಎರಡು ಹೂಗಳು ಸಮಯಕ್ಕೆ ಮುಂಚೆಯೇ ಅನಿರೀಕ್ಷಿತವಾಗಿ ಅರಳಿ ಬಂದಿದ್ದುವು. ವಸಂತ ಋತುವಿನ ಮೋಹಕತೆಯ ಮೋಡಿ, ಆಗ ನಮ್ಮ ಮೇಲಾಗಿತ್ತು."

ನಾನು ಹೇಳಿದೆ "ಇಂದು ಹಿಮ ಕರಗುತ್ತಿದೆ. ಒಮ್ಮೆ ಹೋಗಿ ನೋಡೋಣವೇ?"

ಅತೀತದ ಆನಂದಮಯ ಕ್ಷಣವನ್ನು ನನ್ನ ಡೈರಿ ಜೀವಂತಗೊಳಿಸಿತ್ತು. ಇಲ್ಲವಾದಲ್ಲಿ ಆ ಘಟನೆ ನಮ್ಮ ನೆನಪಿಗೆ ಬರುತ್ತಲೇ ಇರಲಿಲ್ಲ. ಡೈರಿ ಹಳೆಯ ಅನುಭವವನ್ನು ಮತ್ತೊಮ್ಮೆ ಮೆಲಕುಹಾಕುವಂತೆ ಮಾಡಿತು.

ಒಮ್ಮೆ ನನ್ನ ನಾದಿನಿಯೊಡನೆ ನನ್ನ ಗೋಳನ್ನು ತೋಡಿಕೊಂಡಿದ್ದೆ. "ನನ್ನ ತಲೆಯಂತೂ ಜರಡಿಯಂತಾಗಿಬಿಟ್ಟಿದೆ. ಪ್ರತಿ

ನಿತ್ಯ ಏನಾದರೂ ವಿಶೇಷ ಘಟನೆಗಳು ನಡೆಯುತ್ತಲೇ ಇರುತ್ತವೆ. ಆದರೆ ನನಗೆ ನೆನಪೇ ಇರುವುದಿಲ್ಲ. ಇಂದು ಗುರುವಾರ. ಆದರೆ ಮಂಗಳವಾರ ಏನಾಯಿತೆಂದು ಜ್ಞಾಪಕವೇ ಇಲ್ಲ." ನನ್ನ ಮಾತನ್ನು ಕೇಳಿದ ಆಕೆ-ನನಗೆ ಈ ಡೈರಿಯನ್ನು ಕೊಟ್ಟಿದ್ದಳು.

ಡೈರಿಯೂ ಸಿಕ್ಕಿತು. ಅದರೊಂದಿಗೆ ಈ ಸೂಚನೆಯೂ ಸಹ. ಆ "ವಿಶೇಷ ಘಟನೆಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಇದು ಸಹಾಯ ಮಾಡುವುದು. ಪ್ರತಿ ದಿನ ಇದರಲ್ಲಿ ಬರೆ. ಕೊನೆಯ ಸಾಲನ್ನು ಬಹಳ ಪ್ರಿಯವಾದ ನೆನಪು ಬರೆಯಲು ಉಳಿಸಿಕೊ."

ನಾನು ಸಂಶಯದ ದೃಷ್ಟಿಯಿಂದ ಆ ಡೈರಿಯ ಪುಟಗಳನ್ನು ತಿರುವಿ ಹಾಕಿದೆ. ಅನೇಕರಂತೆ ನಾನೂ ಸಹ ಡೈರಿ ಬರೆಯುವುದನ್ನು ಪ್ರಾರಂಭಿಸಿದೆ. ಆದರೆ ಕಾಲಾಭಾವವೋ, ಪ್ರೇರಣೆಯ ಅಭಾವವೋ ಬರೆಯುವ ಹವ್ಯಾಸ ನಿಂತೇ ಹೋಯಿತು. ಈಗ ಪುನಃ ಪ್ರಾರಂಭಿಸುವುದೆಂದು ನಿಶ್ಚಯಿಸಿದೆ.

ನಾಲ್ಕು ವರ್ಷ ಹಿಂದಿನ ಮಾತು. ಅಂದಿನಿಂದ ಇಂದಿನವರೆಗೆ ನಾನು ಎಂದೂ ಡೈರಿ ಬರೆಯುವುದನ್ನು ಮರೆಯಲಿಲ್ಲ. ಡೈರಿ ಬರೆಯಲು ನನ್ನ ನಾದಿನಿಯ ಸಲಹೆಯ ಜೊತೆಗೆ ನಾನೂ ಸಹ ಮೂರು ನಿಯಮಗಳನ್ನು ಸೇರಿಸಿಕೊಂಡೆ.

ವಿವೇಕ ಮತ್ತು ಎಚ್ಚರಿಕೆಯಿಂದ ಬರೆಯಬೇಕು :

ಇತರರು ಓದಿದಾಗ ನನಗೆ ಮುಜಗರವಾಗುವಂತಹ ಯಾವ ವಿಷಯವನ್ನೂ ಡೈರಿಯಲ್ಲಿ ಬರೆಯಲಿಲ್ಲ.

ಸ್ಪಷ್ಟವಾದ ಬರವಣಿಗೆ :

ಮೊನಚಾದ ಲೇಖನಿಯಿಂದ ಬರೆಯುವುದು ಒಳ್ಳೆಯದು.

ಮಿತಿಯಲ್ಲೇ ಎಲ್ಲಾ ವಿಷಯಗಳೂ ಬರಬೇಕು. ಅದಕ್ಕಾಗಿ ಅನಿವಾರ್ಯ ಪದಗಳ ಸಂಕ್ಷಿಪ್ತ ಪ್ರಯೋಗವನ್ನು ಮಾತ್ರ ಮಾಡಬೇಕು

ಉದಾಹರಣೆಗೆ, ಮಾರ್ಚ್ ತಿಂಗಳಿನ ಕುಂಕುಮ ಹೂಗಳ ಬಗ್ಗೆ ನಾನು ಹೀಗೆ ಬರೆದಿದ್ದೆ. "ಎರಡು ಹಳದಿ ಕೇಸರ–ಹಿಮ ಚಾರಗಾಹದ ಗೇಟು" ಸ್ಮೃತಿ ಪಟಲವನ್ನು ಕೆದಕಿದಾಗ ಮನಸ್ಸಿನ ಪರದೆಯ ಮೇಲೆ ಇದರ ಸುಂದರ ವರ್ಣಮಯ, ವ್ಯಾಪಕ ಚಿತ್ರ ಮೂಡುತ್ತದೆ.

ಡೈರಿ ನನ್ನ ಪ್ರಾಣ ಸ್ನೇಹಿತೆಯಂತಿದೆ. ಇದು ಜೀವನವನ್ನು ಅನೇಕ ರೀತಿಯಲ್ಲಿ ಸಮೃದ್ಧಗೊಳಿಸುತ್ತದೆ. ನನ್ನ ಡೈರಿ ನನಗಾಗಿ ಮಾಡುವುದನ್ನು ನಿಮ್ಮ ಡೈರಿ ನಿಮಗಾಗಿ ಮಾಡುತ್ತದೆ. ಕೆಲ ಉದಾರಣೆಗಳು ಹೀಗಿವೆ.

ಡೈರಿ ಅನುಕೂಲಕರ ಮತ್ತು ವಿಶ್ವಾಸಾರ್ಹ ಉಲ್ಲೇಖವಾಗಿ ಉಪಯೋಗಕ್ಕೆ ಬರುತ್ತದೆ :

ನಮ್ಮ ಆಂಗ್ಲ ಪೂರ್ವಜರು ೧೬೨೦ರಲ್ಲಿ ಪ್ಲಿಮಥ್, ಮಾಸಾಚುಸೆಟ್ಸ್, ಎಂಬಲ್ಲಿಗೆ ಹೋಗಿದ್ದರು. ಬರಲಿರುವ ವರ್ಷದಲ್ಲಿ ಉತ್ತಮ ಬೆಳೆಯನ್ನು ಪಡೆದುಕೊಳ್ಳುವ ನೆನಪಿಗಾಗಿ, ನವೆಂಬರ್ ತಿಂಗಳ ಮೂರನೆಯ ಗುರುವಾರದಂದು, ಧನ್ಯವಾದ ಸಮರ್ಪಣೆಗಾಗಿ ಒಂದು ಭೋಜನ ಕೂಟ

ವನ್ನು ಏರ್ಪಡಿಸಿದ್ದರು. ಅತಿಥಿಗಳು ಬರಲಾರಂಭಿಸಿದ್ದರು.

ಡೈರಿಯಲ್ಲಿ ನಾನು ಈ ರೀತಿ ಓದಿದೆ. "ಏಳು ಕಿಲೋಗ್ರಾಂ ತೂಕದ ಟರ್ಕಿ ಕೋಳಿ ಸಾಕಾಗುವುದಿಲ್ಲ." ಇದು ಬಹಳ ಮಹತ್ತರವಾದ ವಿಷಯವೇನಲ್ಲ. ಆದರೆ, ಅಡುಗೆ ಮಾಡುವ ನನಗೆ ಈ ಸೂಚನೆ ಬಹಳ ಉಪಯೋಗಕರವಾದುದು. ಏಕೆಂದರೆ ನನ್ನ ಕುಟುಂಬದವರು ಟರ್ಕಿ ಪಕ್ಷಿಯ ಮಾಂಸದ ಸ್ಯಾಂಡ್‌ವಿಚ್ ತಿನ್ನುವ ಆಸೆ ಮತ್ತು ನಿರೀಕ್ಷೆಯಲ್ಲಿರುತ್ತಾರೆ.

ನನ್ನ ಅಂದಿನ ರಕ್ತ ಒತ್ತಡದ ಪ್ರಮಾಣ ಅಥವಾ ಉಗ್ರಾಣಕ್ಕೆ ಹೊಸ ಛಾವಣಿ ಹಾಕಿಸುವ ದಿನಾಂಕ, ಮುಂತಾದ ಸೂಚನೆಗಳು ನನಗೆ ಡೈರಿಯಷ್ಟೇ ಹತ್ತಿರವಾಗಿವೆ. (ನೀವೂ ಸಹ ನನ್ನಂತೆಯೇ ದಪ್ಪ ಡೈರಿಯನ್ನು ಉಪಯೋಗಿಸಿ. ಆಗ ಕಳೆದು ಹೋದ ಘಟನೆಗಳ ದಾಖಲೆ ನೋಡಿ ಆನಂದ ಪಡಲು, ಬೀರುವಿನಿಂದ ಪ್ರತಿ ವರ್ಷದ ಡೈರಿಯನ್ನೂ ತೆಗೆದು ಪುಟ ತಿರುವಿ, ತಿರುವಿ ನೋಡುವ ಆವಶ್ಯಕತೆ ಇರುವುದಿಲ್ಲ.

ಡೈರಿ ಆತ್ಮಬೋಧೆಯೆಡೆಗೆ ಒಯ್ಯುತ್ತದೆ:

ಸಾಮಾನ್ಯವಾಗಿ ನಾನು ಸಂತೋಷವಾದ ವಿಷಯಗಳನ್ನು ಮಾತ್ರ ಡೈರಿಯಲ್ಲಿ ಬರೆಯುತ್ತೇನೆ. ಆದರೆ ಜೀವನ ಸದಾಕಾಲ ಸುಖದ ಸುಪ್ಪತ್ತಿಗೆಯಾಗಿರುವುದಿಲ್ಲ. ಅದ್ದರಿಂದ, ಈರ್ಷೆ, ಕ್ರೋಧ, ಭಯ ಮುಂತಾದ ನನ್ನ ಮನಸ್ಸಿನ ದುರ್ಭಾವನೆಗಳನ್ನು ಡೈರಿಯ ಪುಟಗಳಲ್ಲಿ ನಮೂದಿಸುತ್ತೇನೆ. ಈ ರೀತಿ ಬರೆಯುವುದರಿಂದ ನನ್ನ ಮನಸ್ಸು ಶಾಂತವಾಗುತ್ತದೆ. ಪುನಃ ಅದನ್ನು ಓದಿದಾಗ ಅತ್ಯಂತ ಸಾಧಾರಣವಾದ ವಿಷಯಕ್ಕೂ ನಾನು ಎಷ್ಟು ಉದ್ರೇಕಗೊಳ್ಳುತ್ತಿದ್ದೆ ಎಂದು ಕ್ಷೋಭೆಯುಂಟಾಗುತ್ತದೆ. ಜೀವನದಲ್ಲಿ ಪುನಃ ಅಂತಹ ಸಂದರ್ಭ ಬಂದಾಗ, ದಾರ್ಶನಿಕ ದೃಷ್ಟಿಯಿಂದ ನೋಡುತ್ತೇನೆಂದು ಸಂಕಲ್ಪ ಮಾಡುತ್ತೇನೆ.

ನಮ್ಮಲ್ಲಿ ಬಹಳ ಜನರು ಜೀವನದ ಏಳುಬೀಳುಗಳ ಮೂಲ್ಯಾಂಕನ ಮಾಡದೆಯೇ ಅವುಗಳೊಡನೆ ಜೀವನ ನಡೆಸುತ್ತಾರೆ. ಕೆಲವು ವಾರಗಳವರೆಗೆ ಡೈರಿ ಬರೆದಾಗ ಯಾವ ವಿಷಯದಿಂದ ನಮಗೆ ಸಂತೋಷವಾಗುತ್ತದೆ, ಯಾವ ವಿಷಯಗಳು ನಮಗೆ ನೋವನ್ನುಂಟುಮಾಡುತ್ತವೆ ಎಂಬ ಅರಿವಾಗುತ್ತದೆ. ಗಮನಕ್ಕೆ ಬಾರದ, ಸಂತೋಷ ಕೊಡುವ ಘಟನೆಗಳ ಪ್ರಾಮುಖ್ಯತೆ ತಿಳಿಯುತ್ತದೆ.

ಡೈರಿ ಬರೆಯುವ ಹವ್ಯಾಸ ಬೆಳಸಿಕೊಳ್ಳುವ ಮೊದಲು, ನಿರಾಶಳಾದಾಗ ನನ್ನನ್ನು ನಾನೇ ನಿಂದಿಸಿಕೊಳ್ಳುತ್ತಿದ್ದೆ. ಈ ರೀತಿ ನನ್ನ ಕ್ಷೋಭೆ ಹೆಚ್ಚಾಗುತ್ತಿತ್ತು. ಜೀವನದಲ್ಲಿ ಬರುವ ಈ ರೀತಿಯ ನಿರಾಶೆ ಮತ್ತು ಉದ್ವೇಗದ ಕ್ಷಣಗಳು ಜೀವನ ಕ್ರಮದ ಅಭಿನ್ನ ಅಂಗಗಳೆಂದು ಡೈರಿ ನನಗೆ ತಿಳಿಸಿಕೊಟ್ಟಿತು. ನನ್ನ ಮಾನಸಿಕ ಉದ್ವೇಗಕ್ಕೂ ಅನುಕೂಲಕರವಲ್ಲದ ಹವಾಮಾನಕ್ಕೂ ಆಳವಾದ ಸಂಬಂಧವಿದೆಯೆಂದು ನನಗೆ ಗೊತ್ತಾಯಿತು. ಬಿಸಿಲು ಏರುತ್ತಾ ಏರುತ್ತಾ ಉದ್ವೇಗ ಕಡಿಮೆಯಾಗುತ್ತದೆ ಎನ್ನುವ ತಿಳುವಳಿಕೆಯಿಂದ ನನಗೆ ಬಹಳಷ್ಟು

ಸಮಾಧಾನ ಸಿಗುತ್ತದೆ. ಈ ಉದ್ವೇಗದ ಸ್ಥಿತಿ ನನ್ನಲ್ಲಿ ಮೂರು ದಿನಗಳಿಗಿಂತ ಹೆಚ್ಚಾಗಿ ಎಂದೂ ಇರಲಿಲ್ಲ.

ಡೈರಿ ಬರೆಯುವುದರಿಂದ ಕಳೆದುಕೊಂಡ ನಿಮ್ಮ ಆಸಕ್ತಿ ಹಿಂತಿರುಗುತ್ತದೆ

ಎರಡು ವರ್ಷದ ಹಿಂದೆ ಇದೇ ದಿನ ನೀವು ಯಾವುದೋ ವಿಷಯಕ್ಕಾಗಿ ಚಿಂತಿತರಾಗಿದ್ದಿರಿ. ಎರಡು ವರ್ಷದ ಹಿಂದೆಯೋ, ಒಂದು ವರ್ಷದ ಹಿಂದೆಯೋ? ನೀವು ನೆನಪಿಟ್ಟುಕೊಳ್ಳದಿದ್ದರೂ, ಡೈರಿ ನೆನಪಿಟ್ಟುಕೊಳ್ಳುತ್ತದೆ. ಡೈರಿಯ ಪುಟಗಳನ್ನು ತಿರುವಿ ಹಾಕಿದಾಗ ಬರಬಹುದಾದ, ಆದರೆ ಬಾರದ ವಿಪತ್ತಿನ ಭಯದಲ್ಲೇ ನಿಮ್ಮ ಸುಖದ ದಿನಗಳು ಹೇಗೆ ಕಳೆದುಹೋದುವೆಂದು ಆಶ್ಚರ್ಯವಾಗುತ್ತದೆ.

ಜೀವನದಲ್ಲಿ ದುಃಖ ಬರುವುದಿಲ್ಲವೆಂದು ಯಾರೂ ಹೇಳುವುದಿಲ್ಲ. ನಿರಾಶೆ ಮತ್ತು ದುಃಖವಲ್ಲದೆ ಜೀವನದಲ್ಲಿ ಆನಂದ ಮತ್ತು ಸುಖಸಂತೋಷಗಳಿವೆಯೆಂಬ ಆಶ್ವಾಸನೆ ಡೈರಿ ಕೊಡುತ್ತದೆ. ಹನ್ನೆರಡು ವರ್ಷಗಳವರೆಗೆ ನೆರಳಿನಂತಿದ್ದ ನನ್ನ ಸ್ವಾಮಿಭಕ್ತ ನಾಯಿ ಸತ್ತುಹೋಯಿತು. ಡೈರಿಯಲ್ಲಿ ಈ ರೀತಿ ಬರೆಯಲಾಗಿತ್ತು. 'ಇಂದು ಕಿಪ್‌ನನ್ನು ಹೂಳಲಾಯಿತು. ಈಗ ಇನ್ಯಾವ ನಾಯಿಯೂ ಇಲ್ಲ. ಅವು ಸತ್ತು ಮನಸ್ಸಿಗೆ ಬಹಳ ನೋವನ್ನುಂಟು ಮಾಡುತ್ತವೆ." ಈಗಲೂ ಸಹ ಈ ಉಲ್ಲೇಖ ಓದಿದಾಗ ಬಹಳ ದುಃಖವಾಗುತ್ತದೆ. ಆದರೆ ಒಂದು ವರ್ಷದ ನಂತರ ಬರೆದಿರುವುದು ಹೀಗಿದೆ. "ಕಾರ್ಲ್‌, ಇಂದು ಮಧ್ಯಾಹ್ನ ಒಂದು ನಾಯಿಮರಿಯನ್ನು ತಂದ. ನಾನು ಪ್ರಾರಂಭದಿಂದಲೇ ಅದನ್ನು ಪ್ರೀತಿಸಲಾರಂಭಿಸಿದೆ. ಆ ಶೂನ್ಯವನ್ನು ತುಂಬಲು ಇಷ್ಟು ದಿನ ನಾವು ಏಕೆ ನಿರೀಕ್ಷಿಸುತ್ತಿದ್ದೆವು?"

ಡೈರಿ ಚೇತನವನ್ನು ಪ್ರಖರಗೊಳಿಸುತ್ತದೆ :

ನಮ್ಮ ಜೀವನದ ನಶ್ವರ ಮತ್ತು ಅಮೂಲ್ಯ ಕ್ಷಣಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ನಾವೆಲ್ಲರೂ ಅಪೇಕ್ಷಿಸುತ್ತೇವೆ. ಸರ್ವೇಸಾಮಾನ್ಯವಾದ ದಿನಗಳನ್ನೂ ಅಸಾಧಾರಣ ದಿನಗಳನ್ನಾಗಿ ಮಾರ್ಪಡಿಸುವ ಸಂತೋಷದ ಕ್ಷಣಗಳು ಜೀವನದಲ್ಲಿ ಬರುತ್ತವೆ. ಅಮೆರಿಕದ ಲೇಖಕ ನಾರ್ಮನ್ ವಿಂಸೆಂಟ್ ಪೀಲ್‌ನ ಶಬ್ದಗಳಲ್ಲಿ ಈ ಆನಂದ "ಯಥಾರ್ಥದ ಚಮತ್ಕಾರಯುತ ಭಾಗ" ವಾಗಿರುತ್ತದೆ. ಇಂತಹ ಆನಂದ—ಆಯಾಸ, ನಿರಾಸೆ, ಕೋಪದಿಂದ ವ್ಯಾಕುಲವಾದ ಮನಸ್ಸಿಗೆ ಸಮಾಧಾನ ಕೊಡುತ್ತದೆ. ಪುನಃ ಶಕ್ತಿ ಸಂಚಾರವನ್ನುಂಟುಮಾಡುತ್ತದೆ. ಇಂಥ ಪರಿಸ್ಥಿತಿಗಳನ್ನು, ಸಾಮಾನ್ಯವಾಗಿ ನಾವು ಇದ್ದಂತೆಯೇ ಒಪ್ಪಿಕೊಳ್ಳುತ್ತೇವೆ ಅಥವಾ ಅದನ್ನು ಗುರ್ತಿಸದೇ ಹೋಗುತ್ತೇವೆ ಆದರೆ "ವಿಶೇಷವಾದ ವಿಷಯಗಳ" ಬಗ್ಗೆ ಎಚ್ಚರದಿಂದಿರುವ ನಾನು, ಆ ಬಿಸಿಲಿನಲ್ಲಿ ಸುಡುತ್ತಿರುವ ಕಾಲುದಾರಿಯಲ್ಲಿ, ಅಂದಿನ ಮಳೆಯ ಕಮ್ಮನೆಯ ಸುವಾಸನೆ, ರಸ್ತೆಯಲ್ಲಿ ಹಾರಾಡುತ್ತಿದ್ದ ಹಳದಿ ಬಣ್ಣದ ಚಿಟ್ಟೆಗಳ ಸಮೂಹ, ಗಾಯಕ ಪಕ್ಷಿ ನೀಲಚ್ಛವಿಯ ಉತ್ಸಾಹದ ಮಧುರ ಗಾನವನ್ನು ಆಸ್ವಾದಿಸಿದೆ—ಈ ರೀತಿ ಒಂದು ಕ್ಷಣಕಾಲವಾದರೂ ನಾನು

ದಿನನಿತ್ಯದ ಜೀವನ ಕ್ರಮದಿಂದ ಬಹಳ ಮೇಲೇರುತ್ತೇನೆ. ಆಗ ಆ ದಿನ ಅತ್ಯಂತ ಮಹತ್ವವುಳ್ಳದ್ದೆನಿಸುತ್ತದೆ.

ಡೈರಿಯಿಂದ ಆಸೆಗಳು ಪ್ರಬಲವಾಗುತ್ತವೆ:

ಬರಲಿರುವ ಕ್ಷಣಗಳನ್ನು ಉತ್ಸುಕತೆಯಿಂದ ನಿರೀಕ್ಷಿಸುವುದು ಎಷ್ಟು ಆಕರ್ಷಕವಾಗಿರುತ್ತೆಂಬುದರ ಅನುಭವ ನನಗೆ ಎಂದೂ ಆಗಿಯೇ ಇರಲಿಲ್ಲ. ಈಗ ಪ್ರತಿ ಬೆಳಿಗ್ಗೆ ಕಾಫಿ ಕುಡಿಯುವಾಗ ಈ ಅಮೂಲ್ಯವಾದ ದಾಖಲೆಗಳ ವಿಮರ್ಶೆ ಮಾಡುತ್ತೇನೆ. ಆಗ ನನ್ನ ಆಲೋಚನೆಗಳು ಆನಂದಮಯವಾಗಿ ಮುಂಬರುವ ದಿನಗಳ ನಿರೀಕ್ಷೆಯಲ್ಲಿ ತೊಡಗುತ್ತವೆ. ಪ್ರತಿದಿನವೂ ಒಂದಲ್ಲ ಒಂದು ವಿಚಿತ್ರ ಆಶ್ಚರ್ಯಕರ ಅಥವಾ ಉತ್ಸಾಹಪೂರ್ಣವಾದ ವಿಷಯ ಇದ್ದೇ ಇರುತ್ತದೆ. ಇವಿಲ್ಲದ ದಿನವೇ ಇಲ್ಲ. ನನಗೆ ಅತ್ಯಂತ ಆನಂದ ಕೊಡುವ ದಿನ ಹಾಗೂ ವಿಷಯವನ್ನು ಬರೆಯಲು ಪುಟದ ಅಂತಿಮ ಸಾಲನ್ನು ನಾನು ಮೀಸಲಾಗಿಟ್ಟಿರುತ್ತೇನೆ. ಆದರೆ ಇದು ಬಹಳ ಸಾಮಾನ್ಯವಾದ ವಿಷಯವಾಗಿರುತ್ತದೆ. ಉದಾಹರಣೆಗೆ: ಇಬ್ಬನಿಯ ಕಣಗಳಿಂದ ನಡುಗುತ್ತಿರುವ ಜೇಡರ ಬಲೆ, ರಸ್ತೆಯ ಅಂಚಿನಲ್ಲಿ ಬೆಳೆದಿರುವ ಕೆಂಪು ಮೂಲಂಗಿ ಅಥವಾ ಚಳಿಗಾಲದ ಸಂಜೆಯಲ್ಲಿ ಗೂಬೆಯ ಕೂಗು.

ಕಳೆದುಹೋದ ಆನಂದಮಯ ಕ್ಷಣಗಳನ್ನು ಮೆಲಕು ಹಾಕುವ ಆಸೆ ನಿಮಗಿದ್ದಲ್ಲಿ, ಎಂದೂ ಬೇಸರವೇ ಆಗುವುದಿಲ್ಲ. ಆದರೆ ನನ್ನ ಡೈರಿ ಇಲ್ಲದೇ ಹೋಗಿದ್ದರೆ, ನಾನು ಇವುಗಳನ್ನು ಮರೆತೇ ಬಿಡುತ್ತಿದ್ದೆ —ಮನೆಯ ಪಕ್ಷಿಯ ಗೂಡಿನ ಮೇಲೆ ಪ್ರತಿದಿನವೂ ಬೀಳುವ ಬಂಗಾರದ ಥಳುಕಿನ ಹಸಿರು ಬಣ್ಣದ ಛಾಯೆಯಿಂದ ಕೂಡಿದ ಆ ಹಳದಿಯ ಕಾಂತಿ ಯಾವಾಗ ಅಚ್ಚ ಹಳದಿಯ ಬಣ್ಣಕ್ಕೆ ತಿರುಗುವುದು. ಮಾರ್ಚಿ ತಿಂಗಳ ಯಾವ ಮಧುರ ಸಂಜೆ, ಕಪ್ಪೆಗಳ ವಟಗುಟ್ಟುವಿಕೆಯಿಂದ ನಮ್ಮ ಹೊಲದ ಮೌನ ಭಂಗವಾಗುವುದು—ಇವು ನೆನಪಿನಲ್ಲೇ ಇರುತ್ತಿರಲಿಲ್ಲ.

ಕೆಲಸ ಕಾರ್ಯಗಳಿಗೆ ಒಂದು ವಿರಾಮ ಹಾಕುತ್ತೇವಾದ್ದರಿಂದ ಸಂಜೆಯ ಸಮಯ ಸ್ವಾಗತಿಸಲು ಯೋಗ್ಯವಾಗಿರುತ್ತದೆ. ಹಗಲಿನ ನೆನಪು ಮಾನಸ ಪಟಲದಲ್ಲಿ ಅಂಕಿತವಾಗತೊಡಗುತ್ತವೆ. ಅತ್ಯಂತಪ್ರಿಯವಾದ "ವಿಶೇಷ ವಿಚಾರ"ವನ್ನು ಉಲ್ಲೇಖಿಸಲು ಮೀಸಲಾಗಿಟ್ಟಿರುವ ಸ್ಥಾನದಲ್ಲಿ ಏನು ಬರೆಯುವುದು? ಕಾಂಪೌಂಡಿನೊಳಗಿನ ಸಿಮೆಂಟು ನೆಲದ ಬಿರುಕಿನಲ್ಲಿ ಇಣಕುತ್ತಿರುವ ಪುಟಾಣಿ ಹೂ, ಬೆಳದಿಂಗಳ ರಾತ್ರಿಯಲ್ಲಿ ಪತಂಗದ ಹಿಂದೆ ಓಡುವ ನಮ್ಮ ಬೆಕ್ಕಿನ ಎಳೆಮರಿ, ಮಳೆ ಬಂದು ಹೋದ ಸುಳಿವೇ ಸಿಕ್ಕಿದಾಗ ಆಕಾಶದಲ್ಲಿ ಕಾಣುವ ಎರಡೆರಡು ಕಾಮನ ಬಿಲ್ಲುಗಳು—ಅತ್ಯಂತ ಗೌಣವೆನಿಸುವ ಈ ಕ್ಷಣಗಳು ಮಧುರ ಸ್ಮೃತಿ ಸಂಗ್ರಹವನ್ನೇ ತೆರೆದಿಡುತ್ತವೆ. ಕೌಟುಂಬಿಕ ಆತ್ಮೀಯತೆಯನ್ನು ಪುಷ್ಟೀಕರಿಸುತ್ತದೆ ಮತ್ತು ಆ ದಿನವನ್ನು ಉತ್ಸಾಹಮಯವನ್ನಾಗಿ ಮಾಡುತ್ತದೆ.

ನಾನು ನೆನಪಿನಲ್ಲಿಡಬೇಕೆಂದು ಅಪೇಕ್ಷಿಸುತ್ತಿದ್ದ ವಿಷಯಗಳು ನನ್ನಿಂದ ದೂರವಾಗುತ್ತಿವೆಯೆಂದು ನನಗನಿಸುವುದಿಲ್ಲ. ನನ್ನ ಡೈರಿ ನನ್ನ ದಿನಗಳನ್ನು ಪರಸ್ಪರ ಸಂಬಂಧವಿರುವಂತೆ ಹೊಸೆಯುತ್ತದೆ, ನನ್ನ ಸಾರ್ಥಕ ಜೀವನಕ್ಕೆ ಇದು ಸಾಕ್ಷಿಯಾಗಿದೆ.

ಸಾವಯವ ಕೃಷಿಯ ಪ್ರಾರಂಭಿಕ ಎಡರು-ತೊಡರುಗಳು

ಎ. ಪಿ. ಚಂದ್ರಶೇಖರ್

ಎಂಜಿನಿಯರಿಂಗ್ ಪದವೀಧರ ಪ್ರೀತಿಯಿಂದ ಕೃಷಿಗೆ ಇಳಿದ ಯುವಕ. ಪ್ರತಿಯೊಂದು ಕೃಷಿ ಸಮಸ್ಯೆಯನ್ನು ವೈಜ್ಞಾನಿಕ ಪರೀಕ್ಷೆಗೆ ಒಡ್ಡುವ ಛಲ. ಲಭ್ಯ ಪ್ರಾಯೋಗಿಕ ಅನುಭವದ ಸಾರದ ಕೆಲವು ಅಂಶ ಈ ಲೇಖನದಲ್ಲಿದೆ.

"ಆಧುನಿಕವಾದ ರಾಸಾಯನಿಕಗಳ, ಕೀಟನಾಶಕಗಳ ದುರುಪಯೋಗದಿಂದ ಇಂದು ಕೃಷಿ ಉತ್ಪನ್ನಗಳು ಅದೆಷ್ಟು ದೋಷಯುಕ್ತವಾಗಿವೆ" ಎಂದು ತಿಳಿಯ ಹೇಳುವ ಸಲುವಾಗಿ ನಾನೊಂದು ಕರ ಪತ್ರವನ್ನು ಪ್ರಕಟಿಸಿದೆ. ಪತ್ರಸಾರ ಇಂತಿದೆ.

"ಯಾವುದೇ ತರಕಾರಿ, ಹಣ್ಣುಗಳನ್ನು ಕೊಳ್ಳುವಾಗ ನಾವು ದೊಡ್ಡದಕ್ಕೆ ಕೈ ಹಾಕುತ್ತೇವೆ. ಹೊಳಪನ್ನು ನಿರೀಕ್ಷಿಸುತ್ತೇವೆ. ಬಣ್ಣಕ್ಕೆ ಬೆಲೆ ಕೊಡುತ್ತೇವೆ. ಆದರೆ ನಾವು ತಿಳಿದಿರುವಂತೆ ಇವ್ಯಾವುವೂ ಉತ್ಕೃಷ್ಟತೆಯ ಮಾನಕಗಳಲ್ಲ. ಇವು ಬೋನಿನಲ್ಲಿಡುವ ಆಮಿಷಗಳು. ಬೀಜದಿಂದ ಕೊಯ್ಲಿನವರೆಗೆ ಹಲವು ಹಂತಗಳಲ್ಲಿ ಹಲವು ರಾಸಾಯನಿಕಗಳನ್ನು ತುಂಬಿ ನಮ್ಮ ಆರೋಗ್ಯ ಕೆಡಿಸುವ ಆಹಾರ ವಸ್ತುಗಳ ಕೃತಕ ನೋಟಕ್ಕೆ ಮಾಟಕ್ಕೆ ಮಾರು ಹೋಗಬೇಡಿ. ಸ್ವಾಭಾವಿಕ ಸ್ವಾದ, ಸತ್ವವಿರುವ ಆರೋಗ್ಯ ಪೂರ್ಣ ಸಾವಯವ ಕೃಷಿ ಉತ್ಪನ್ನಗಳನ್ನು ಪ್ರೋತ್ಸಾಹಿಸಿ, ಹಕ್ಕೊತ್ತಾಯದ ಬೇಡಿಕೆ ಸಲ್ಲಿಸಿ."

ಈ ಪತ್ರವನ್ನು ನಾನು ಹಲವೊಂದು ಜನರಿಗೆ ಹಂಚಿದಾಗ ಬಂದ ಪ್ರತಿಕ್ರಿಯೆಗಳೂ ಹಲವಾರು. ಇವು ಒಟ್ಟಾಗಿ ಏನು ಹೇಳುತ್ತವೆಂದರೆ "ನಮ್ಮಲ್ಲಿ ಮಾಹಿತಿಗಳ ಕೊರತೆ ಇದೆ ಅಥವಾ ತಪ್ಪು ಮಾಹಿತಿಗಳು ಇದೆ." ಯಾವುದೇ ಕೃತಿಯಲ್ಲಿಯೂ ಕೃಷಿಯ ತೊಡಕು ಇದೆ. ಮಾಹಿತಿಯ ಕೊರತೆ ಅಥವಾ ತಿರುಚಲ್ಪಟ್ಟ ಮಾಹಿತಿ.

ಇಂದು ಪೇಟೆ ಮತ್ತು ಹಳ್ಳಿಯ ಮಧ್ಯ ಹತ್ತು ಹಲವು ರೀತಿಯ ಕಂದಕಗಳು ಏರ್ಪಟ್ಟಿವೆ. ಹಳ್ಳಿ ಇರಲಿ ಪೇಟೆ ಇರಲಿ, ಎಲ್ಲ ಜೀವಿಗಳ ಮೂಲ ಅವಶ್ಯಕತೆಯಾದ ಅನ್ನದ ವಿಚಾರದಲ್ಲಿ ಪೇಟೆಯ ಮುಂದಿಗಿರುವ ಅಜ್ಞಾನದ ಬಗ್ಗೆ ಅಗಳಿನ ಬಗ್ಗೆ ಒಂದು ಉದಾ :– ನಾವಿಬ್ಬರೂ ಜೊತೆಯಾಗಿ ಇಂಜಿನಿಯರಿಂಗ್ ಕಲಿತವರು. ನಾನು ಹಳ್ಳಿ ಸೇರಿ ಕೃಷಿಕನಾದೆ. ಅವನು ಪೇಟೆ ಸೇರಿ ಕೃಷಿ

ಉಪಕರಣಗಳ ಉತ್ಪಾದಕನಾದ. ಒಮ್ಮೆ ಅವನ ಪೇಟೆಯ ಮನೆಯಲ್ಲಿ ಭೇಟಿ ಯಾದಾಗ ಕೃಷಿಯ ಸಮಸ್ಯೆಗಳ ಬಗ್ಗೆ, ರೋಗಗಳ ಬಗ್ಗೆ, ಗೊಬ್ಬರಗಳ ಬಗ್ಗೆ ನನ್ನ ಅನುಭವಗಳನ್ನು ಹೇಳಬೇಕಾಯಿತು. ಆಗ ಆತ ಅವಾಕ್ಕಾದ, ಆಹಾರ ವಸ್ತುಗಳು ಹಳ್ಳಿಯಲ್ಲಿ ಬೆಳೆಯುತ್ತವೆ ಎಂಬುದನ್ನು ಬಿಟ್ಟರೆ, ಅವು ಜೀವವಿರುವ ಗಿಡಗಳಲ್ಲಿ ಬಿಡುತ್ತವೆ, ಅವಕ್ಕೂ ಗೊಬ್ಬರ ಕೊಡು ತ್ತಾರೆ, ರೋಗವೆಂಬುದೊಂದಿದೆ. ಅದಕ್ಕೆ ಔಷಧಿ ಹಾಕುತ್ತಾರೆ ಎಂಬಿತ್ಯಾದಿ ವಿಷಯ ಗಳ ಬಗ್ಗೆ ಆತ ಅಜ್ಞನಾಗಿದ್ದ. ನಾನು ಅಚ್ಚರಿಗೊಂಡೆ. ಹಾಗಾಗಿ ಕೃಷಿಕನಿಗೆ ಎರಡು ಜವಾಬ್ದಾರಿ. ೧. ಸಾವಯವ ಕೃಷಿಯ ಬಗ್ಗೆ ತಾನು ತಿಳಿಯುವುದು.

೨. ತನ್ನ ಉತ್ಪಾದನೆಯನ್ನು ಉಪ ಯೋಗಿಸುವವರಿಗೆ ತಿಳಿಸುವುದು. ಇಂಥ ತಿಳಿಸುವ ಕ್ರಿಯೆಯಲ್ಲಿ ಬಂದ ಪ್ರತಿಕ್ರಿಯೆ ಗಳು ಇಂತಿವೆ.

(ಅಂದ ಹಾಗೆ, ಸಾವಯವ ಕೃಷಿ ಎಂದರೆ, ನಿರವಯವ ಅಥವಾ ಕೃತಕ ರಾಸಾಯನಿಕ ಗೊಬ್ಬರ ಹಾಕದೆ, ಸ್ಥಳೀಯವಾಗಿ ದೊರೆ ಯುವ ಸೊಪ್ಪುಸದೆ, ಬೂದಿ, ಸೆಗಣಿ, ಗಂಜಲ ಮುಂತಾದವುಗಳ ಕೊಳೆತ ಮಿಶ್ರಣವಾದ ಹಟ್ಟಿಗೊಬ್ಬರ ಮಾತ್ರ ಹಾಕಿ ಮಾಡಿದ ಬೇಸಾಯ. ಇದು ಸ್ವಾವಲಂಬಿ ಕೃಷಿ— ಕೆರೆಯ ನೀರನು ಕೆರೆಗೆ ಚೆಲ್ಲಿ ಮಾಡುವ ಬೇಸಾಯ.)

೧. ನೀವೊಬ್ಬರು ಮಾಡಿದ್ದರಿಂದ ಏನಾಗುತ್ತದೆ?

೨. ಇದು ಆಗು ಹೋಗುವಂಥದ್ದಲ್ಲ.

೩. ಆಧುನಿಕ ಕೃಷಿ ಇಷ್ಟೊಂದು ಪ್ರಚಾರ ಪಡೆದಿದೆ. ಇವರೇನು ಮುಟ್ಠಾಳರೇ.

೪. ರಾಸಾಯನಿಕಗಳು! –ನಾವಿನ್ನೂ ಸತ್ತಿಲ್ಲವಲ್ಲಾ

೫. ಬೇಡಿಕೆಗೆ ತಕ್ಕ ಪೂರೈಕೆ ಇದೆಯೇ?

೬. ವಿಷರಹಿತ ಎಂಬುದಕ್ಕೆ ಪ್ರಮಾಣ ಏನು?

೭. ಇದು ಎಲ್ಲರಿಂದ ಸಾಧ್ಯವೇ?

೮. ಲಾಭ ಸಾಧ್ಯವೇ?

೯. ನಾವು ಗಿರಾಕಿಗಳು ಭಿಕ್ಷುಕರು ಸ್ವಾಮಿ, ನಮಗೆ ಆರಿಸುವ ಹಕ್ಕಿಲ್ಲ.

೧೦. ಏರುತ್ತಿರುವ ಜನಸಂಖ್ಯೆಗೆ ಆಹಾರ ಒದಗಿಸುವುದು ಸಾಧ್ಯವೇ?

ಈ ಪ್ರತಿಕ್ರಿಯೆಗಳಿಗೆ ನನ್ನ ವಿಶ್ಲೇಷಣೆ ಗಳು ಈ ರೀತಿ ಇವೆ.

೧. ನೀವೊಬ್ಬರು ಮಾಡಿದ್ದರಿಂದ ಏನಾಗುತ್ತದೆ?

ಹಾಗೆಂದು ಕೈಕಟ್ಟಿ ಕುಳಿತಿರುವುದ ರಿಂದಲೂ ಏನೂ ಆಗುವುದಿಲ್ಲ. ಸತ್ಯವನ್ನು ಸಾಕ್ಷಾತ್ಕರಿಸಿಕೊಂಡ ಯಾರೂ ತಮ್ಮ ಮನಸ್ಸಿಗೆ ವಿರೋಧವಾಗಿ ಕೆಲಸ ಮಾಡಲು ಬರುವುದಿಲ್ಲ. ಯಾವುದೇ ಪಂಥ ಪ್ರಾದುರ್ಭ ವಿಸಿದ್ದು ಒಬ್ಬೊಬ್ಬರಿಂದಲೇ ಹಾಗೂ ಪರಿವರ್ತನೆಯ ಗಾಳಿ ಒಬ್ಬೊಬ್ಬರಲ್ಲೂ ಪ್ರಾರಂಭವಾಗಿಯೇ ಬಿರುಗಾಳಿಯಾಗ ಬೇಕು. ಇದು ಪರಮಾಣು ವಿದಳನ ಕ್ರಿಯೆ.

೨. ಇದು ಆಗು ಹೋಗುವಂಥದ್ದಲ್ಲ.

ಕರ್ತವ್ಯದಿಂದ, ಜವಾಬ್ದಾರಿಯಿಂದ ಜಾರುವುದು ಸುಲಭ. ಆಗದಂಥ ಘನವಿಷಯಂವಾದರೂ ಏನಿದೆ? ಇನ್ನೂ ವಿಷಹಾಕದೆ ಬೆಳೆಯುವ, ಬೆಳಸಲಾಗುವ ಹಲವೊಂದು ವಸ್ತುಗಳಿವೆಯಲ್ಲಾ. ಉದಾಹರಣೆಗೆ ಬಸಳೆ, ಹರಿವೆ, ಕುಂಬಳ, ಪಪ್ಪಾಯಿ, ಕೇನೆ, ಮುಂಡಿ ಇತ್ಯಾದಿ. ವಿಮರ್ಶೆಯು, ವಿಚಾರದ ಸುಳಿ ಎದ್ದಾಗ ಆಗದಿರುವುದು ಯಾವುದು?

೩. ಆಧುನಿಕ ಕೃಷಿ ಇಷ್ಟೊಂದು ಪ್ರಚಾರ ಪಡಿದಿದೆ. ಇವರೇನು ಮುಟ್ಠಾಳರೇ?

ಬಹುಮತವಿದೆ ಎಂದ ಮಾತ್ರಕ್ಕೆ ಅದು ಸರಿ ಎಂದು ಹೇಳಲಾಗದು. ಪ್ರಪಂಚದಲ್ಲಿ ಎಲ್ಲ ಕೆಟ್ಟ ಕಾರ್ಯಗಳೂ ಬಹುಮತದ ಹೆಸರಿನಲ್ಲೇ ನಡೆಯುತ್ತವೆ. ಮೂರು ಮುಖ್ಯ ಕಾರಣಗಳಿಗಾಗಿ ಆಧುನಿಕ ರಾಸಾಯನಿಕ ಕೃಷಿಗೆ ಬಿರುಸು ಬಂದಿರುವುದು ೧) ಅವಸರ ೨) ಆಲಸ್ಯ ೩) ಅಜ್ಞಾನ ಮತ್ತು ಪ್ರಾಯಶಃ ೪) ಲಾಭಕೋರತನ.

ಅವಸರ—"ಸಾಲ ಮಾಡಿಯಾದರೂ, ಕದ್ದಾದರೂ ತುಪ್ಪತಿನ್ನು" ಎಂಬ ಗಾದೆಯನ್ನು ನಾವು ಅರ್ಥಮಾಡಿದ್ದು ಹೀಗೆ—ತುಪ್ಪದ ಬಯಕೆಯಾದಾಗ ಕದ್ದರೂ ತಪ್ಪಲ್ಲ. ಆದರೆ ಯಾವ ವಿಚಾರವಂತನೂ ಕದಿಯಲು ಬೋಧಿಸಲಾರ. ತುಪ್ಪದ ರುಚಿಯನ್ನು, ಶ್ರೇಷ್ಠತೆಯನ್ನು ವಿವರಿಸುವಲ್ಲಿ ವೈಭವೀಕರಿಸುವಲ್ಲಿ ಕದಿಯುವಿಕೆಯನ್ನು ಪ್ರಸ್ತಾಪಿಸಲಾಗಿದೆ ಎಂಬುದನ್ನು ಮನನ ಮಾಡಿಕೊಳ್ಳಬೇಕು. ಪೈಪೋಟಿಯ ಪ್ರಪಂಚದಲ್ಲಿಂದು ನಮಗೆ"ಹಣ"ವೇ ತುಪ್ಪ. ಅದನ್ನು ಸಂಪಾದಿಸಲು ಏನು ಮಾಡಿದರೂ ಸರಿಯೆ. ಭೂಮಿಯನ್ನು ಎಷ್ಟು ಶೋಷಿಸಿದರೂ ಸರಿಯೆ. ಬೇಗ, ತುಂಬ ಪಡೆಯುವ ಅವಸರಕ್ಕಾಗಿ ರಾಸಾಯನಿಕಗಳು ಕೃಷಿ ಕ್ಷೇತ್ರವನ್ನು ಪ್ರವೇಶಿಸಿದವು. ಸಾರ್ವಕಾಲಿಕವಾಗಿ ಕೊಡಬೇಕಾದ ಭೂಮಿಯಿಂದ ಸಾಂದರ್ಭಿಕವಾಗಿ ಹೀರುವ ಪ್ರಯತ್ನವಿದು.

ಆಲಸ್ಯ—ಯಾವುದಾದರೊಂದು ರೀತಿಯ ಒತ್ತಡವಿಲ್ಲದೆ. ಯಾರೂ, ಯಾವುದೇ ಕೆಲಸವನ್ನೂ ಮಾಡಲಾರರು. ಕೆಲಸ ಮಾಡದಿರಲು ಸಹಕಾರಿ ಯಾಗುವ ಒಂದೊಂದು ಮಾತು, ವಸ್ತು ನಮಗೆ ಪ್ರಿಯವಾಗುವುದು. ಸಾಂಪ್ರದಾಯಿಕ ಸಾವಯವ ಕೃಷಿಗಾದರೋ ಹೋಲಿಸಿದಾಗ ಹೆಚ್ಚಿನ ಕೆಲಸಗಳಿವೆ. ಕಾಡು ಬೆಳೆಸಬೇಕು. ಸೊಪ್ಪು ಕಡಿಯಬೇಕು. ದನಸಾಕಬೇಕು. ದುರ್ನಾತ ಬರುವ ಗೊಬ್ಬರ ಎತ್ತಬೇಕು. ಕುಕ್ಕೆಗಳಲ್ಲಿ ಹಾಕುವುದನ್ನು ಮುಷ್ಟಿಗಳಲ್ಲಿ ಹಾಕುವಂತೆ ಗೊಬ್ಬರವನ್ನು ನಮಗಾಗಿ ಯಾರೋ ಮಾಡಿಕೊಡುವಾಗ ನಮಗ್ಯಾಕೆ ಸಾವಯವದ ತಲೆನೋವು? ಅಲ್ಲವೇ?

ಅಜ್ಞಾನ—"ರಾಸಾಯನಿಕ ಕಂಡ ಭೂಮಿ ಬೇಗ ಹಾಳಾಗುತ್ತದೆ. ಮತ್ತೇನೂ ಬೆಳೆಯಲಾರದ ಸ್ಥಿತಿ ಬರುತ್ತಿದೆ. ಹಿಂದಿನ ಗರಿಷ್ಟ ಬೆಳೆಯ ಲೆಕ್ಕವನ್ನು ಕೋಷ್ಟಕದಲ್ಲಿಟ್ಟು ಇಂದು (ಅ) ತೃಪ್ತಿ ಪಡಬೇಕಾಗಿದೆ"—ಇಂಥ ವಿಪರೀತಸ್ಥಿತಿಗೆ ರಾಸಾಯನಿಕಗಳು ಜವಾಬ್ದಾರಿ ಎಂಬ ಬಗ್ಗೆ ಬಹಳಷ್ಟು ಅಜ್ಞಾನ ಅಡಗಿದೆ. ಅಮೇರಿಕದವರು ಬಿಡುವಾಗ ನಾವು ಹಿಡಿದೆವು. ನಾವು ನೀವು ಯೋಚಿಸುತ್ತಿರುವಾಗ ನಮ್ಮ ಹಳ್ಳಿಯ ಶುದ್ಧ ರೈತರು ಬಲವಾಗಿ ಹಿಡಿದಿದ್ದಾರೆ.

ಇನ್ನೂ ಏನೇನು ಹಾಕಬೇಕು ಎಂದು ಅವರಿವರನ್ನು ಕೇಳುತ್ತಿದ್ದಾರೆ.

ಲಾಭಕೋರತನ—ನಿಜ ಬೇಸಾಯಗಾರರ ನೆತ್ತರುಬಸಿದು ಭೂಮಿಯನ್ನು ಬೋಳು ಮಾಡಿ, ಕೊನೆಗೂ ಗ್ರಾಹಕನಿಗೆ ವಂಚನೆಗೈದು ಉತ್ಪಾದಕರೂ ವಿತರಣೆಗಾರರೂ ಮಧ್ಯವರ್ತಿಗಳೂ ಅತಿಶಯಲಾಭ ಸೂರೆಗೈವ ಪ್ರವೃತ್ತಿ.

೪. ರಾಸಾಯನಿಕಗಳು! ನಾವಿನ್ನೂ ಸತ್ತಿಲ್ಲವಲ್ಲಾ

ಸಾಂಕ್ರಾಮಿಕ ರೋಗಗಳನ್ನು ಬಿಟ್ಟರೆ ನಮ್ಮ ಸುತ್ತುಮುತ್ತಲ ಪ್ರಾಣಿ ಪಕ್ಷಿಗಳು ಎಷ್ಟೊಂದು ಆರೋಗ್ಯವಾಗಿವೆ. ಜೀವಮಾನದಲ್ಲೊಮ್ಮೆಯೂ ನೋಯದ ಎಷ್ಟೊಂದು ದನಗಳಿವೆ! ನಾಯಿಗಳಿವೆ! ಇಂಥ ದೃಢ ಆರೋಗ್ಯದಿಂದ ಪ್ರಕೃತಿ ಮನುಷ್ಯನನ್ನು ಮಾತ್ರ ವಂಚಿಸಿದೆಯೇ? ಹೊಟ್ಟೆ ತುಂಬಿದರೆ ತೇಗುಬರುವುದು ಸಹಜ. ಬೆಳಗ್ಗೆ ಏಳುವಾಗಲೇ ತೇಗು ಬಂದರೆ? ದುಡಿದರೆ ದಣಿಯುವುದು ಸಹಜ, ಕುಳಿತರೂ ಏದುಸಿರು ಬಂದರೆ? ಕುಟ್ಟಿದರೆ ನೋಯುವುದು ಸಹಜ, ಮುಟ್ಟಿದರೂ ನೋವಾದರೆ? ದಿನದಿಂದ ದಿನಕ್ಕೆ ಮನೆ ಮನೆಗಳಲ್ಲೂ ಇಂಥ ಅಸಹಜತೆಗಳೇ ಕಾಣಿಸುವುದು ಯಾಕೆ? ಆಹಾರವಷ್ಟೆ ಔಷಧಿಗಳನ್ನೂ ಅಪೇಕ್ಷಿಸುವ ಅನಿವಾರ್ಯತೆ ಯಾಕೆ? ಮನುಷ್ಯನ ಜೀವಿತ ನಿರೀಕ್ಷೆ ಏರಿರಬಹುದು. ಒಂದೊಂದು ಖಾಸಗೀ ಕೆಲಸಕ್ಕೂ ಬೇರೆಯವರನ್ನು, ಯಂತ್ರಗಳನ್ನು ಅವಲಂಬಿಸುವ ಅಸ್ವತಂತ್ರ ಜೀವನ ಯಾಕೆ? ನಾವು ತಿಂದ ಆಹಾರ ಶಕ್ತಿ ಬಿಡುಗಡೆ ಮಾಡುವುದಿಲ್ಲವೇ? ಆ ಶಕ್ತಿಯ ಉಪಯೋಗವಾದರೂ ಏನು?

೫. ಬೇಡಿಕೆಗೆ ತಕ್ಕ ಪೂರೈಕೆ ಇದೆಯೇ?

ಪ್ರಸ್ತುತ ಇಲ್ಲದಿರಬಹುದು. ಇದು ಇಲ್ಲದಿರಲು ಗುರುತಿಸಲ್ಪಡುವ ಬೇಡಿಕೆ ಇಲ್ಲದಿರುವುದೇ ಕಾರಣ. ನಾನು ಸ್ವಾಭಾವಿಕವಾಗಿ ಬೆಳೆಸಿದ (ನಾನು ಬೆಳೆಸಿದ್ದೇನು ಮಹಾ. ಅದೇ ಬೆಳೆದದ್ದು) ಕರಿಮೆಣಸಿನ ಮಾದರಿಯನ್ನು ಪಸ್ಸಾರಿ ಅಂಗಡಿಯೊಂದಕ್ಕೆ ತೋರಿಸಿದೆ (ವಿಶೇಷವಾಗಿ ಔಷಧ ಮೂಲಿಕೆಗಳ ಅಂಗಡಿ) ಆತ ಕರಿಮೆಣಸನ್ನು ಕೈಯಿಂದ ಕೈಗೆ ಬದಲಾಯಿಸುತ್ತಾ "ಮೆಣಸೇನೋ ಚೆನ್ನಾಗಿದೆ. ಆದರೆ ಹೊಳಪಿಲ್ಲ" ಎಂದು ಪ್ರತಿಕ್ರಿಯಿಸಿದ. ತಾನು ವ್ಯಾಪಾರಕ್ಕಿಟ್ಟಿದ್ದ ಹೊಳಪುಳ್ಳ ಕಾಳುಗಳನ್ನು ತೋರಿಸಿದ. "ಇದು ಶುದ್ಧ ಮೆಣಸು ಸ್ವಾಮಿ, ಇದಕ್ಕಿಂತ ಹೊಳಪು ಬರುವುದಿಲ್ಲವಲ್ಲಾ" ಎಂದೆ. "ಇರಬಹುದು"—ಹೊಳಪು ಕೊಡುವ ಉಪಾಯವನ್ನಾತ ಉಸುರಿದ. ಒಂದಷ್ಟು ಯಂತ್ರದ ಕೀಲೆಣ್ಣೆಯನ್ನು ಹದವಾಗಿ ಸುರಿದು ಸವರುವುದೇ ಕರಿಮೆಣಸಿನ ಹೊಳಪಿನ ಗುಟ್ಟು, ಅದಕ್ಕೆ ಬೇಡಿಕೆ. (ಹಾಗಾದಾಗ ನಾನು ಕಿಲೋಗೆ ರೂ. ೨-೦೦ ಯಾಕೆ ಕಳಕೊಳ್ಳಬೇಕು) ಬೇಡಿಕೆ ಬಂದಾಗ ಪೂರೈಕೆ ಆಗಿಯೇ ಆಗುತ್ತದೆ. ಬೇಡಿಕೆ ಬರಬೇಕಾದರೆ ಎಲ್ಲೆಲ್ಲೂ ತುಂಬಿರುವ ಅಜ್ಞಾನ ನಾಶವಾಗಬೇಕು. ಹೊಳಪು ಎಂಬ ಮಾಯೆ ಕರಿಮೆಣಸಿನ ಸ್ವಾಭಾವಿಕ ಗುಣವಲ್ಲ ಎಂಬ ಅರಿವಾಗಬೇಕು. ಆ ವಿಷಗಳನ್ನು ಗುರುತಿಸುವ ಪ್ರಾಜ್ಞತೆ ಬರಬೇಕು.

೬. ವಿಷರಹಿತ ಎಂಬುದಕ್ಕೆ ಪ್ರಮಾಣ ಏನು?

ವಿಷಕ್ಕಿಂತಲೂ ಅಪಾಯಕಾರಿಯಾದ ಅಪ್ರಾಮಾಣಿಕತೆ ನಮ್ಮ ರಕ್ತದ ಕಣಕಣ

ಗಳಲ್ಲೂ ತುಂಬಿರುವಾಗ ಇದು ಸ್ವಲ್ಪ ಕಷ್ಟದ ವಿಷಯವೇ. ಪ್ರಯೋಗಾಲಯ ಪರೀಕ್ಷೆಗಳು ಇರಬಹುದಾದರೂ ಎಲ್ಲ ಸಂದರ್ಭಗಳಲ್ಲೂ ಪ್ರಾಯೋಗಿಕವಾಗಲಾರದು. ಹಾಗಾಗಿ ಈ ಮಟ್ಟಿಗೆ ಉತ್ಪಾದಕನ, ವ್ಯಾಪಾರಿಯ ವೈಯಕ್ತಿಕ ಸ್ಥಾನಮಾನಗಳ ಮೇಲೆ, ಪರಂಪರೆಯ ಮೇಲೆ ಸ್ವಲ್ಪ ಮಟ್ಟಿಗೆ ನಂಬಿಕೆ ಇಡಬೇಕಾಗುತ್ತದೆ. ಹೇಗಿದ್ದರೂ ವಸ್ತುವಿನ ವಿಚಾರದಲ್ಲಿ ಮೊದಲಿಗಿಂತ ಹೀನಸ್ಥಿತಿ ಅಲ್ಲವಲ್ಲಾ.

೭. ಇದು ಎಲ್ಲರಿಂದ ಸಾಧ್ಯವೇ?

ಸಾಧ್ಯವಾಗದೆ ಏನು? ಇಲ್ಲಿಯ ಒಂದೊಂದು ಸಸ್ಯವೂ ನಮ್ಮ ಸೃಷ್ಟಿ ಅಲ್ಲ. ಪ್ರಕೃತಿಯ ವರ. ಇವು ನಮಗಾಗಿಯೇ ಇಲ್ಲ.

ತೋಟದ ಬೆಳೆಗಾರರ ಸಹಕಾರಿ ಸಂಘ ಬಹುದೊಡ್ಡ ಸಂಸ್ಥೆ. ಅದರ ಆಡಳಿತಾಧಿಕಾರಿಯವರಲ್ಲಿ ನನ್ನ ಕರ ಪತ್ರ "ಆವಿಷಗಳ ಬೋನೊಳಗೆ ಬೀಳಬೇಡಿ" ಕೊಟ್ಟು ವಿನಂತಿಸಿದೆ–"ನನ್ನ ಮತ್ತು ನನ್ನಂಥವರ ಉತ್ಪನ್ನಗಳನ್ನು ಪ್ರತ್ಯೇಕವಾದ ಪ್ರಚಾರದಿಂದ ನೀವ್ಯಾಕೆ ಮಾರಾಟ ಮಾಡಬಾರದು?" "ನಿಮ್ಮ ಲೇಖನವೇನೋ ಚೆನ್ನಾಗಿದೆ. ಆದರೆ ಇದು ವ್ಯವಹಾರ ಯೋಗ್ಯವಲ್ಲ" ಎಂದು ಪ್ರಾರಂಭಿಸಿದ ಅವರ ಮಾತುಗಳಲ್ಲಿ ಎಲ್ಲರ ಪ್ರಶ್ನೆಗಳೂ ಇದ್ದುವು. ನಮ್ಮ ಒಟ್ಟು ವ್ಯವಸ್ಥೆಗೆ ಅವರು ಪೀನ ದರ್ಪಣವಾಗಿದ್ದರು. "ಪ್ರತ್ಯೇಕವಾಗಿ ವ್ಯಾಪಾರವೇನೋ ಮಾಡಬಹುದು. ಬೇಡಿಕೆಯೂ ಬರಬಹುದು. ಆಮೇಲೆ ಬೇಡಿಕೆಗೆ ಸರಿಯಾಗಿ ನಿಮಗೆ ಪೂರೈಕೆ ಮಾಗಲು ಸಾಧ್ಯವೇ? ಯಾಕೆಂದರೆ ಸಾವಯದ ಕೃಷಿ ಅಷ್ಟೊಂದು ಸುಲಭದ ಮಾತಲ್ಲ. ಇದು ಎಲ್ಲರಿಂದಲೂ ಸಾಧ್ಯವಿಲ್ಲ. ಫುಕವೋಕರಿಗೆ ಮಾತ್ರ ಸಾಧ್ಯ" ಈ ಪ್ರಪಂಚ ಪ್ರಾರಂಭವಾದದ್ದೇ ರಾಸಾಯನಿಕ ಕೃಷಿಯಿಂದ ಎಂಬ ಧೋರಣೆಯ ಧ್ವನಿಯನ್ನು ಹ್ರಸ್ವಗೊಳಿಸುವ ಜವಾಬ್ದಾರಿ ರಾಸಾಯನಿಕ ಕೃಷಿಯ ನೋವುಂಡ ಜನರದೇ ಆಗಿದೆ. ಎಲ್ಲರೂ ಬೆಕ್ಕಿಗೆ ಗಂಟೆ ಕಟ್ಟುವ ಇಲಿಗಳಾಗಬೇಕು.

೮. ಲಾಭ ಸಾಧ್ಯವೆ?

"ಯಾವುದೇ ಸಸ್ಯ ಆಹಾರ ಅಪೇಕ್ಷಿಸುತ್ತದೆಯೇ ಹೊರತು ಅದು ರಾಸಾಯನಿಕವಾಗಿಯೇ ಇರಬೇಕೆಂದು ನಿರೀಕ್ಷಿಸುವುದಿಲ್ಲ" ಎಂಬ ಸತ್ಯ ನಮ್ಮಿಂದ ಮರೆಯಾಗಿರುವುದೇ ಈ ಪ್ರಶ್ನೆಗೆ ಕಾರಣ. ಹಾಗೆ ಹೇಳುವುದಾದರೆ ಸಾವಯವ ಸ್ವಾಭಾವಿಕ ಆಹಾರ. ಅದು ಹೆಚ್ಚು ಪ್ರಿಯ ಎಂಬುದಕ್ಕೆ ಹತ್ತು ಹಲವು ಉದಾಹರಣೆಗಳುಂಟು. ಹಾಗಾಗಿ ನಮ್ಮ ಸಸ್ಯಗಳಿಗಾಗುವ ಗೊಬ್ಬರವನ್ನು ನಾವೇ ಸೃಷ್ಟಿಸುವಷ್ಟು ಸೋಮಾರಿತನ ಬಿಟ್ಟರೆ ಸ್ವಾವಲಂಬೀ ಸಾವಯವ ಸಲೀಸು, ಸರಾಗ, ಸುರಾಗ.

೯. ಗಿರಾಕಿಗಳಾದ ನಾವು ಭಿಕ್ಷುಕರು ಸ್ವಾಮೀ ನಮಗೆ ಆರಿಸುವ ಹಕ್ಕಿಲ್ಲ............

ಪೇಟೆಯ ನಾವು ನಮ್ಮ ಹೊಟ್ಟೆಗೆ ಬೇಕಾದದ್ದನ್ನು ಬೆಳೆಯಲು ಸಾಧ್ಯವಿಲ್ಲ. ಸಿಕ್ಕಿದ್ದನ್ನು ಖರೀದಿಸುವುದು ನಮ್ಮ ಅನಿವಾರ್ಯತೆ........"ಎಂದೊಬ್ಬರು ಬಹಳ ರಂಜನೀಯವಾಗಿ ನನಗೆ ಪತ್ರ ಬರೆದು ತಿಳಿಸಿದರು. ಈಗ ಪೇಟೆಯಲ್ಲಿ ಟೊಮೆಟೋ ಬೆಲೆ ಕಿಲೋಗೆ ರೂ. ೧. ಒಂದೊಂದು

ಟೊಮೆಟೊವನ್ನೂ ಅವರ ವಕ್ರತೆಗಾಗಿ, ಬಣ್ಣಕ್ಕಾಗಿ ಒರೆಗೆ ಹಚ್ಚಿ ನೋಡುವ ಗಿರಾಕಿಗಳು ಎಂದಾದರೂ ಭಿಕ್ಷುಕರಾಗಲು ಸಾಧ್ಯವೇ? ಕಿಲೋಗೆ ೨೫ ಪೈಸೆ ಪಡೆಯುವ ಬೆಳೆಗಾರನಿಗೆ ಸಮವಾದ ಭಿಕ್ಷುಕ (ಬೌದ್ಧಿಕವಾಗಿ, ಆರ್ಥಿಕವಾಗಿ) ಗಿರಾಕಿ ಎಂದೂ ಆಗಲಾರ. ಹಾಳಾಗುವ ಸರಕು ಸದಾ ಗಿರಾಕಿಯು ಕೃಪೆಯು ಮೇಲೇ ನಿಂತಿರುತ್ತದೆ.

೧೦. ಏರುತ್ತಿರುವ ಜನಸಂಖ್ಯೆಗೆ ಸಾವಯುವ ಕೃಷಿಯಿಂದ ಆಹಾರ ಒದಗಿಸುವುದು ಸಾಧ್ಯವೇ?–

ರಾಸಾಯನಿಕದ ಪ್ರತಿಪಾದಕರು ಕೊನೆಗೆ ಎಸೆಯುವ ರಾವಣ ಬಾಣವಿದು. ರಾಮಬಾಣವಾಗುವ ಪ್ರಯತ್ನ ಮುಂದಿದೆ ನೋಡಿ.

ನಿಸರ್ಗ ನಿಯಮಗಳನ್ನು ಮೀರಿ ಮಿತಿ ಮೀರಿ ಜನಸಂಖ್ಯೆ ಏರಿದರೆ ಯಾವುದೇ ಕೃಷಿಯಿಂದಲೂ ಆಹಾರ ಒದಗಿಸುವುದು ಸಾಧ್ಯವಿಲ್ಲ. ಯಾಕೆಂದರೆ ಈ ಭೂಮಿಗೆ, ಇಲ್ಲಿ ಬೆಳೆಸಬಹುದಾದ ಸಸ್ಯ ಸಂಪತ್ತಿಗೆ ಮಿತಿ ಇದೆ. ಈ ಭೂಮಿಯಾಗಲೀ, ಇಲ್ಲಿಯ ಯಾವತ್ತೂ ಸಸ್ಯಗಳಾಗಲೀ ಮನುಷ್ಯನ ಸೃಷ್ಟಿ ಅಲ್ಲ (ಬದಲು ಭೂಮಿಯು ಸೃಷ್ಟಿ ಮನುಷ್ಯ) ಇವು ಮನುಷ್ಯನ ಆದೇಶಗಳನ್ನು ಪಾಲಿಸಬೇಕಾಗಿಲ್ಲ. ಪಾಲಿಸುವುದೂ ಇಲ್ಲ. "ಬೇಡಿಕೆ ಮತ್ತು ಪೂರೈಕೆ" ತತ್ವವನ್ನು ವೈಜ್ಞಾನಿಕವಾಗಿ ಶೋಧಿಸಿದ ನಾವು "ಆಹಾರಕ್ಕೆ ಸರಿಯಾಗಿ ಜನಸಂಖ್ಯೆ" ಎಂಬ ಹೊಸತತ್ವವನ್ನು ಒಪ್ಪಬೇಕಾಗುತ್ತದೆ— ಉಣಿಸಿಗೆ ಅನುಗುಣವಾಗಿ ಬಾಯಿಗಳ ಸಂಖ್ಯೆ.

ಜನಸಂಖ್ಯೆ ಏರಲು ಕಾರಣಗಳೇನು? ಹುಟ್ಟಿದ ಪ್ರತಿಯೊಂದು ಜೀವಿಯೂ ಬದುಕಬೇಕಾದರೆ ಗಾಳಿ, ನೀರು, ಆಹಾರ ಅತ್ಯಂತ ಅವಶ್ಯ. ಇವು ಸಿಕ್ಕಿ ಸೊಕ್ಕಿ ಬೆಳೆದರೂ ಆರೋಗ್ಯ ಇಲ್ಲದಿದ್ದರೆ ಜೀವಿ ಬಾಳಲಾರದು. ಎಂದರೆ ಕಾಯಿಲೆ ಬರಬಾರದು. ಈ ಅಗತ್ಯಗಳು ಈಡೇರಿರುವುದರಿಂದಲೇ ಜನಸಂಖ್ಯೆ ಏರುತ್ತಿದೆ. ಎಂದರೆ ಆಹಾರ ಇದೆ. ಆಹಾರದ ಕೊರತೆಯಾಗಿದ್ದರೆ ಈ ಏರು ಜಾರಲೇ ಬೇಕಿತ್ತು. ನಾವೇನು ತಿಪ್ಪರಲಾಗ ಹಾಕಿದರೂ ಇದೇ ರೀತಿ ಏರುತ್ತಾ ಹೋಗಲು ಸಾಧ್ಯವಿಲ್ಲ ಎನ್ನುವುದಕ್ಕೆ ಹೊಸದಾಗಿ ಉದ್ಭವಿಸಿರುವ ಸಾಂಕ್ರಾಮಿಕ ರೋಗಗಳು, ಮಾನವ ದುಷ್ಕೃತ್ಯಗಳಿಂದ ನಿರ್ಮಾಣವಾದ ಅಪಘಾತಗಳು, ಅಪರಾಧಗಳು, ಭೂಕಂಪಗಳು ನಿದರ್ಶನಗಳು. ಹಾಗಾಗಿ ನಮ್ಮ ಕರ್ತವ್ಯ ಮಾಡುತ್ತಾ ಸ್ವಾಭಾವಿಕವಾಗಿ ಬದುಕಲು ಪ್ರಯತ್ನಿಸೋಣ. ಏರುತ್ತಿರುವ ಜನಸಂಖ್ಯೆ ಹೊಣೆಯನ್ನು ಪ್ರಕೃತಿಗೇ ಬಿಡೋಣ.

ಅಂದು ಮೂವತ್ತು ಕೋಟಿ ಇದ್ದ ಜನಸಂಖ್ಯೆ ಇಂದು ಎಂಭತ್ತು ಕೋಟಿಗೆ ಏರಿದ್ದು ನಿಜ. ನಾವು ಈ ಏರಿದ ಜನಸಂಖ್ಯೆಗೆ ಆತಂಕ ಪಡುವುದಕ್ಕಿಂತ ಹೆಚ್ಚಾಗಿ ಈ ಜನ ನಾಶ ಮಾಡಿದ ನಿಸರ್ಗಕ್ಕಾಗಿ ಆತಂಕಪಡಬೇಕು. ಆಹಾರ ಬೇಕಾದದ್ದು ಮನಷ್ಯನಿಗೆ ಮಾತ್ರ ಅಲ್ಲ. ಪ್ರತಿಯೊಂದು ಪ್ರಾಣಿಗೂ ಬೇಕು. ೩೦ ಕೋಟಿ ಜನ ಇದ್ದಾಗ ಭಾರಿ ಸಂಖ್ಯೆಯಲ್ಲಿ ಕಾಡುಪ್ರಾಣಿ, ಪಕ್ಷಿಗಳಿದ್ದುವು. ಇವುಗಳನ್ನೆಲ್ಲಾ ನಾಶ ಮಾಡುತ್ತಾ ಮಾಡುತ್ತಾ ನಾವು ೮೦ ಕೋಟಿ ಆದೆವು. ಎಂದರೆ ಅಂದು ಮತ್ತು ಇಂದು ಹಸಿಯುವ

ಹೊಟ್ಟೆಗಳ ಸಂಖ್ಯೆ ಒಂದೇ. ಆಹಾರದ ಆವಶ್ಯಕತೆ ಆಗಲೂ ಈಗಲೂ ಒಂದೆ. ಅಂದು ಪ್ರಾಣಿ+ಪಕ್ಷಿ+ಮನುಷ್ಯ. ಇಂದು ಬರೇ ಮನುಷ್ಯ ಆಹಾರದ ಅಗತ್ಯ ಎಂದೆಂದೂ ಒಂದೇ ಆಗಿದ್ದಾಗ್ಯೂ ಅಂದಿದ್ದ ಕಾಡು ಇಂದಿಲ್ಲ. ಅಂದಿನ ಪ್ರಕೃತಿ ಸಂಪತ್ತು, ಸೌಂದರ್ಯ ಇಂದಿಲ್ಲ. ಅಂದಿನ ನೆಮ್ಮದಿ, ಸಂತೃಪ್ತಿ ಇಂದಿಲ್ಲ.

ಆಹಾರದ ಆವಶ್ಯಕತೆ ಅಂದೂ, ಇಂದೂ ಒಂದೇ ಇದ್ದಾಗ್ಯೂ ಇಂದು ಆಹಾರದ ಕೊರತೆಯ ಭಯವೇಕೆ? ಪ್ರಾಣಿ ಪಕ್ಷಿಗಳು ಎಂದೂ ನಾಳಿನ ಚಿಂತೆ ಮಾಡುವುದಿಲ್ಲ. ಇಂದು, ಈಗ ಹೊಟ್ಟೆ ತುಂಬಿದ ಸಂತೃಪ್ತಿ ಅವಕ್ಕಿದೆ. ನಮಗಾದರೂ ನಾಳೆ ಹೇಗೆಂಬ ಚಿಂತೆಯಿಂದ ಇಂದು ತಿಂದುದರ ಬಗ್ಗೆ ತೃಪ್ತಿ ಇಲ್ಲ. ಈ ಆತಂಕದಿಂದ ಎಲ್ಲವನ್ನೂ ಸಂಗ್ರಹಿಸಲು ಸುರುಮಾಡಿದ ದೆಸೆಯಿಂದ ಕೃತಕ ಅಭಾವ ಒಂದು ಕಡೆ, ಅತಿ ಬಳಕೆ, ದುರ್ಬಳಕೆ ಇನ್ನೊಂದು ಕಡೆ. ಅಭಿವೃದ್ಧಿಯ ಹೆಸರಿನಲ್ಲಿ ನಾವಿಂದು ತಿನ್ನುವುದಕ್ಕಿಂತ ಹೆಚ್ಚಾಗಿ ದಂಡ ಮಾಡುತ್ತಿದ್ದೇವೆ. ನಾಗರಿಕತೆಯ ನೆವನದಲ್ಲಿ ಆಹಾರದ ನಿಜ ಸ್ವಾದವನ್ನು, ಸತ್ವವನ್ನು ಕಳಕೊಂಡು ವಿಷಾನ್ನವನ್ನು ವಿಪರೀತವಾಗಿ ತಿನ್ನಲು ಅಭ್ಯಾಸ ಮಾಡಿದ್ದೇವೆ. ಒಬ್ಬ ಮನುಷ್ಯನಿಗೆ ಅವನ ದೇಹ ಹಾಗೂ ದೈಹಿಕ ಶ್ರಮಕ್ಕೆ ಅನುಗುಣವಾಗಿ ಒಂದು ಸಾವಿರದಿಂದ ಎರಡು ಸಾವಿರ ಕ್ಯಾಲೊರಿವರೆಗೆ ಶಕ್ತಿ ಸಾಕೆಂದು ವೈಜ್ಞಾನಿಕವಾಗಿ ಲೆಕ್ಕ ಹಾಕಿದ್ದಾರೆ. ಆದರೆ ಇದರ ನಾಲ್ಕು ಪಟ್ಟು, ನಾವು ದಿನಾ ತಿನ್ನುತ್ತಿದ್ದೇವೆ. ಸಮಾರಂಭಗಳಲ್ಲಿ ಇದರ ಹತ್ತು ಪಟ್ಟು ತಿನ್ನುತ್ತಿದ್ದೇವೆ. ಹಾಳು ಮಾಡುತ್ತೇವೆ. ಈಗಂತೂ ಪ್ರತಿ ದಿನವೂ ಸಮಾರಂಭಗಳೇ. ಹುಟ್ಟಿದ್ದಕ್ಕೆ, ಹೆಸರಿಟ್ಟದ್ದಕ್ಕೆ, ಅಂಕ ತೆಗೆದದ್ದಕ್ಕೆ, ಸೀಟು ಸಿಕ್ಕಿದ್ದಕ್ಕೆ, ಕೆಲಸ ದಕ್ಕಿದ್ದಕ್ಕೆ, ನಿಂತದ್ದಕ್ಕೆ, ಕೂತದ್ದಕ್ಕೆ ಪೈಪೋಟಿಯಲ್ಲಿ ಸಮಾರಂಭಗಳು ನಡೆಯುತ್ತಿವೆ. ಬಹುಶಃ ಯಾವುದೇ ಪಟ್ಟಣದ ಎಲ್ಲಾ ಮಂದಿಗಳಿಗೆ ಬೇಕಾಗುವ ಸಂಪನ್ಮೂಲಕ್ಕೆ ಸಮವಾಗಿ ಅಲ್ಲಿಯ ಪಂಚತಾರಾ ಹೋಟೆಲುಗಳಲ್ಲಿ ಇಂದು ಎಲ್ಲವೂ ದಂಡವಾಗುತ್ತಿವೆ. ಈ ರೀತಿಯ ಅತಿ ವೆಚ್ಚ ಮುಂದುವರಿಯುತ್ತಾ ಹೋದರೆ ಯಾವುದೇ ಕೃಷಿ ಪದ್ಧತಿಯೂ ನಮ್ಮನ್ನು ಬದುಕಿಸಲಾರದು. ವಿಲೋಮವಾಗಿ ತಿನ್ನುವುದಕ್ಕಾಗಿ ಬದುಕುವ ನವನಾಗರಿಕತೆಯನ್ನು ಬಿಟ್ಟರೆ ಈಗಿರುವ ಆಹಾರವೇ ಇನ್ನೂ ನಾಲ್ಕು ಪಟ್ಟು ಜನಸಂಖ್ಯೆಗೆ ಸಾಕಾದೀತು.

ಇಂದು ನಮ್ಮ ಆಹಾರದ ಪರಿಕಲ್ಪನೆ ಸಂಪೂರ್ಣ ಬದಲಾಗಿದೆ. ಆದಿ ಮಾನವನ ಕಾಲಕ್ಕೆ ಗೆಡ್ಡೆಗೆಣಸು, ಹಣ್ಣು ಹಂಪಲುಗಳು ಆಹಾರಗಳಾಗಿದ್ದುವು. ಅವು ಬದಲಾಗುತ್ತಾ ಬಂದು ಇಂದು ಅವರವರ ಆರ್ಥಿಕ ಅಂತಸ್ತಿಗೆ ತಕ್ಕಂತೆ ಅಕ್ಕಿ, ಗೋಧಿ, ರಾಗಿ, ಜೋಳಗಳು ಮುಖ್ಯ ಆಹಾರಗಳಾಗಿವೆ. ಭತ್ತ ಬೆಳೆಯಲೆಂದು ಕೋಟಿಗಟ್ಟಲೆ ವೆಚ್ಚ ಮಾಡಿ ನೀರಾವರಿ ಯೋಜನೆಗಳನ್ನು ಮಾಡಿದ್ದೇವೆ. ಆ ಭತ್ತಕ್ಕೆ ಸಮವಾದ ಸಸ್ಯ, ಹಣ್ಣು ಸಂಪತ್ತನ್ನು ಮುಳುಗಿಸಿದ್ದೇವೆ. ಬೇರೊಂದು ಮರ ಬೆಳೆಯದಂತೆ ಭತ್ತದ ಗದ್ದೆಗಳನ್ನು ನಿರ್ಮಿಸಿದ್ದೇವೆ. ನಮ್ಮ ಎಲ್ಲಾ ಗಮನವನ್ನು ಭತ್ತಕ್ಕೆ ಕೊಟ್ಟಿದ್ದೇವೆ. ಇದರ ಬದಲು ಭತ್ತ ಅಮುಖ್ಯ (ದ್ವಿತೀಯ) ಆಹಾರವಾಗುತ್ತಿದ್ದರೆ ಕಾಲಮಾನಕ್ಕೆ ತಕ್ಕಂತೆ ನಾವು,

ಹಲಸು, ನೇರಳೆ, ಸೀಬೆ, ಗೇರು........ ಹಲವೊಂದು ಸೊಪ್ಪು ತರಕಾರಿಗಳು, ಗೆಡ್ಡೆ ಗೆಣಸುಗಳು ಬೆಳೆಯಲು ಅವಕಾಶ ಮಾಡಿ ಕೊಡುತ್ತಿದ್ದರೆ ಕಮ್ಮಿ ಖರ್ಚಿನಲ್ಲಿ ಹೆಚ್ಚು ಆಹಾರ ಸಿಗುತ್ತಿತ್ತು. ಅಕ್ಕಿ ತಿಂದರೇ ದೇಹ ಪೋಷಣೆಯಾಗುವುದೆಂದೇನೂ ಇಲ್ಲವಲ್ಲಾ. ಇಂದು ಬಯಲು ಸೀಮೆಯಲ್ಲಿ ಒಬ್ಬ ರೈತನ ಮಗ ಹಲಸಿನ ಹಣ್ಣು ನೋಡಬೇಕಾದರೆ ಪೇಟೆಗೆ ಬರಬೇಕು. ರೂಪಾಯಿಗೆ ಎರಡು ತೊಳೆ ಕೊಂಡು ರುಚಿ ನೋಡಬೇಕು. ಎಂಥ ದೌರ್ಭಾಗ್ಯ! ಅಕ್ಕಿಯನ್ನು ಸತ್ವಯುತವಾಗಿ ತಿನ್ನುವುದೂ ನಮ್ಮ ಹಣೆಯಲ್ಲಿ ಬರೆದಿಲ್ಲ. "ಡಬ್ಬಲ್ ಪಾಲಿಷ್" ಮಾಡಿ ನಿಸ್ಸಾರ ಗೊಳಿಸಿ "ಡಬ್ಬಲ್ ಫ್ರೈ" ಮಾಡಿ (doubly poisonous) ವಿಷಾನ್ನ ಮಾಡಿ ತಿನ್ನುತ್ತಿದ್ದೇವೆ. ಆಮೇಲೆ ಹೊಸ ಪ್ರಯೋಗಗಳಿಗೆ ದುಂದು ವೆಚ್ಚ ಮಾಡಿ ವಿಟಾಮಿನ್ ಗುಳಿಗೆಗಳನ್ನು ನುಂಗುತ್ತೇವೆ. ಎಂಟಾಸಿಡ್‌ಗಳ ದಾಸರಾಗುತ್ತೇವೆ. ಹೊಟ್ಟೆ ತುಂಬಲು, ಸತ್ವ ನೀಡಲು ಮೊಟ್ಟೆಯೇ ಬೇಕೆಂದೇನೂ ಇಲ್ಲ. ಅತ್ಯಂತ ಕೃತಕ, ದುಬಾರಿ ಪರಿಸರದಲ್ಲಿ ಬೆಳೆದ ಮೊಟ್ಟೆ ತಿಂದರೆ ಶ್ರೇಷ್ಠಮನುಷ್ಯ ಎಂಬ ಮಟ್ಟಕ್ಕೆ ನಾವು ತಲುಪಿದ್ದೇವೆ. ಈಗಲಾದರೋ ರಾಸಾಯನಿಕ ಗೊಬ್ಬರ ಹಾಕಿ ಕೃಷಿ ಮಾಡಿ ಕೃತಕ ಗಿಡಗಳಿಂದ ಆಹಾರ ತಯಾರು ಮಾಡುತ್ತಿದ್ದೇವೆ. ಅದು ಸಾಲದೆ ಟಿಕ್ಕೆಟ್ಟಿದ್ದೇವೆ. ನಮ್ಮ ವಿಕಲ್ಪಿತ ಮನೋಸ್ಥಿತಿ ಬದಲಾಗದಿದ್ದರೆ ಇನ್ನೂ ರಾಸಾಯನಿಕಗಳ ನೇರ ಸಂಯೋಜನೆಯಿಂದ ಕಾರ್ಖಾನೆಗಳಲ್ಲಿ ಆಹಾರ ತಯಾರಿಸುವ ತಂತ್ರಜ್ಞಾನ ಸಿದ್ಧಿಸಿದರೂ ಬೆಳೆಯುತ್ತಿರುವ ಜನಸಂಖ್ಯೆಗೆ ಆಹಾರ ಒದಗಿಸುವುದು ದುಃಸ್ಸಾಧ್ಯ.

ಅಶನ, ವಸನ, ವಸತಿಗಳು ಮನುಷ್ಯನ ಪ್ರಾಥಮಿಕ ಆವಶ್ಯಕತೆಗಳು. ಇವುಗಳ ಪೈಕಿ ಪ್ರಪ್ರಥಮವಾಗಿರುವ ಅಶನವನ್ನು ಉತ್ಪಾದಿಸುವ ರೈತರು ನಮ್ಮ ದೇಶದಲ್ಲಿ ೭೦ ಭಾಗ. ಉಳಿದ ೩೦ ಭಾಗ ವಸನ, ವಸತಿ ಹಾಗೂ ಐಷಾರಾಮದ ವಸ್ತುಗಳನ್ನು ಉತ್ಪಾದಿಸುವ ಪೇಟೆಯ ಮಂದಿ. ಈ ೩೦ ಭಾಗಕ್ಕೆ ಅಶನ ಬಡಿಸುವ ಜವಾಬ್ದಾರಿಯನ್ನು ೭೦ ಭಾಗ ಹಳ್ಳಿಯ ಮಂದಿಯಿಂದ ನಾವು ನಿರೀಕ್ಷಿಸುತ್ತಿದ್ದೇವೆ. ಆದರೆ ಅವರು ಉತ್ಪಾದಿಸುವ ಅಶನಕ್ಕೆ ವೈಜ್ಞಾನಿಕ ಬೆಲೆ ಕೊಡುವ ಬಗ್ಗೆ ನಾವೆಂದೂ ಯೋಚನೆಯನ್ನೂ ಮಾಡಿಲ್ಲ. ಪೇಟೆಯ ಮಂದಿ ಉತ್ಪಾದಿಸುವ ವಸನ, ವಸತಿಗಳಿಗೆ ಉತ್ಪಾದನಾ ವೆಚ್ಚ ಹಾಗೂ ಲಾಭಾಂಶ ಇದೆ. ಆದರೆ ರೈತನ ಅಶನಕ್ಕೆ ಬೇಡಿಕೆ ಮತ್ತು ಪೂರೈಕೆ (demand and supply) ತತ್ವ ಅಥವಾ ಅದಕ್ಕಿಂತಲೂ ಹೀನ. ಎಂದಿನವರೆಗೆ ತನ್ನ ಉತ್ಪನ್ನಗಳನ್ನು ಮಾರಿ ತನಗೆ ಬೇಕಾದಷ್ಟು ವಸನ, ವಸತಿಗಳನ್ನು ಕೊಂಡುಕೊಳ್ಳಲು ರೈತ ಶಕ್ತನಾಗುವುದಿಲ್ಲವೋ, ಎಂದಿನವರೆಗೆ ನಾವು ಅವನಲ್ಲಿ ಪೋಷಿಸುತ್ತಾ ಬಂದಿರುವ ಅವಿದ್ಯೆ ನಿವಾರಣೆಯಾಗುವುದಿಲ್ಲವೋ, ಎಂದಿನವರೆಗೆ ಪೇಟೆಯ ಮಂದಿ ಹಳ್ಳಿಯ ಮೇಲಿಟ್ಟಿರುವ ಅವಜ್ಞೆ ಅಚೆ ಸರಿಯುವುದಿಲ್ಲವೊ, ಎಂದಿನವರೆಗೆ ಪೇಟೆ ಮತ್ತು ಹಳ್ಳಿಗಳಲ್ಲಿ ಸಿಗುವ ಅನುಕೂಲತೆಗಳ ಅಂತರ ಮಾಯವಾಗುವುದಿಲ್ಲವೋ ಅಂದಿನವರೆಗೆ ಯಾವುದೇ ಕೃಷಿ ಪದ್ಧತಿಯೂ ಸಮಸ್ಯೆಗಳಿಗೆ ಪರಿಹಾರವಾಗಲಾರದು.

ಅಧಿಕ ಇಳುವರಿ ನಮಗೆ ಗುರಿ. ಅಧಿಕ ಇಳುವರಿಗಾಗಿ "ಅ" ಗೊಬ್ಬರ ಬಳಸಿ, "ಇ"

ಬೀಜ ಬಿತ್ತಿ, "ಉ" ಕೀಟನಾಶಕ ಸಿಂಪಡಿಸಿ ಎಂದು ವೈಜ್ಞಾನಿಕವಾಗಿ ಪ್ರಚಾರ ಮಾಡುವಾಗ (ದುಷ್ಪರಿಣಾಮಗಳು ನಮ್ಮ ಲೆಕ್ಕಕ್ಕಿಲ್ಲ) ಕೊನೇ ಪಕ್ಷ ಈ ಬೆಳೆಗಳಿಗೆ ಗಿರಾಕಿಗಳ್ಯಾರು ಎಂದು ಯಾರಾದರೂ ಯೋಚಿಸಿದ್ದಾರೆಯೇ ? ಭತ್ತದ ಉತ್ಪಾದನಾ ವೆಚ್ಚ ಕಿಲೋಗೆ ರೂ. ೫ರ ಮೇಲಿದೆ. ಆದರೆ ಇಂದು ರೈತನಿಗೆ ಸಿಗುವುದು ಕಿಲೋಗೆ ರೂ. ೩. ಮೂವತ್ತು ವರ್ಷಗಳ ಹಿಂದೆ ಜೋಳದ ಕ್ರಯ ಕಿಲೋಗೆ ರೂ. ೧-೩೦. ಇಂದು ರೂ. ೨. ಕೂಲಿ ರೂ. ೬ ಇದ್ದ ಎಂಟು ವರ್ಷಗಳ ಹಿಂದೆ ಹಾಗೂ ಕೂಲಿ ರೂ. ೩೦ ಆದ ಇಂದು ತೆಂಗಿನಕಾಯಿ ದರ ಒಂದಕ್ಕೆ ರೂ ೩. ಕೆ.ಎಂ.ಎಫ್‌ಗೆ ಕ್ಷೀರಕ್ರಾಂತಿಯ ಭ್ರಾಂತಿ. ಬಿಳಿ ಹಾಲು ಕುಡಿಯುವವರಿಗ್ಯಾರಿಗೂ ಅದರ ಹಿಂದಿನ ತಪ್ಪಿನ ಪರಿಚಯವಿಲ್ಲ. ಇಂದು ಲೀಟರಿಗೆ ರೂ ೧೦ ಸಿಗದಿದ್ದರೆ ಏನೂ ಪ್ರಯೋಜನವಿಲ್ಲ. ಆದರೆ ಗೋಪಾಲಕನಿಗೆ ಇಂದು ಸಿಗುತ್ತಿರುವ ದರ ಲೀಟರಿಗೆ ರೂ ೫ ಮಾತ್ರ. ಇದೂ ಸಾಲದೆಂಬಂತೆ ವಾರಕ್ಕೊಂದು ದಿನ ಹಾಲು ಖರೀದಿಗೆ ರಜೆ, ಅಳತೆಯಲ್ಲಿ ಮೋಸ. ಹಣ ಪಾವತಿಯಲ್ಲಿ ದುಷ್ಟ ವಿಳಂಬ. ಹೀಗೆ ಹಲವು ವಸ್ತುಗಳ ಪಟ್ಟಿ ಬೆಳೆಸಬಹುದು. ಜಲಜನಕದ ಬುಗ್ಗೆಯಂತೆ ಬೆಲೆಗಳು ಗಗನಕ್ಕೇರಿದ ಈ ದಿನಗಳಲ್ಲಿ ರೈತ ಯಾಕಾಗಿ ಮತ್ತು ಯಾರಿಗಾಗಿ ಉತ್ಪಾದಿಸಬೇಕು ಹೇಳಿ.

"ಆಹಾರದ ಕೊರತೆ ಇರುತ್ತಿದ್ದರೆ ಜನಸಂಖ್ಯೆ ಏರುತ್ತಿರಲಿಲ್ಲ" ಎಂದು ಹಿಂದೊಂದು ತರ್ಕದಲ್ಲಿ ತಿಳಿಸಿದೆ. ರಾಸಾಯನಿಕ ಕೃಷಿಯನ್ನು ಪ್ರಚೋದಿಸುವವರ ಪ್ರತಿಪಾದನೆ ಏನೆಂದರೆ ಹಿಂದೆ ನಮ್ಮ ಆಹಾರ ನಮಗೆ ಸಾಕಾಗುತ್ತಿರಲಿಲ್ಲ. ಇಂದು ಸ್ವಾವಲಂಬಿಗಳಾಗಿದ್ದೇವೆ. ರಫ್ತು ಮಾಡುವ ಹಂತಕ್ಕೆ ಬಂದಿದ್ದೇವೆ. ಈ ಹೆಗ್ಗಳಿಕೆಗೆ ಕಾರಣ ರಾಸಾಯನಿಕ ಗೊಬ್ಬರಗಳು, ಸಂಕರ ತಳಿಗಳು, ಕೀಟನಾಶಕಗಳು. ಇದು ಹೌದೇ ಆಗಿದ್ದರೆ ಕಬ್ಬಿನ ಎಕ್ರೆವಾರು ಇಳುವರಿ ೮೦ ಟನ್ನಿಗೆ ಏರಿದ್ದು ೪೦ ಟನ್ನಿಗೆ ಇಳಿದದ್ದು ಏಕೆ ? ಹತ್ತು ಹಲವು ಹೊಸ ರೋಗಗಳಿಂದ ರೈತ ದಿಕ್ಕೆಟ್ಟದ್ದು ಏಕೆ ? ಸ್ವಾಭಾವಿಕವಾಗಿ ಇದ್ದ, ಇರಬೇಕಾದ ಪರಾವಲಂಬಿ ಕೀಟಗಳನ್ನು ಪ್ರಯೋಗಶಾಲೆಯಲ್ಲಿ ಉತ್ಪಾದಿಸಿ ಬಿಡಬೇಕಾದ ಹೊಸ ಹೊರೆ ಹುಟ್ಟಿದ್ದು ಏಕೆ ? ಕಂದು ಜಿಗಿ ಹುಳವೆಂಬ ಕ್ಯಾನ್ಸರ್‌ನಿಂದ ಭತ್ತದ ಬೆಳೆಗಾರ ಕಂಗೆಡುವ ಸ್ಥಿತಿ ನಿರ್ಮಾಣವಾದದ್ದು ಏಕೆ ? ನಿರಂತರ ಔಷಧಿಗಳ ಸಿಂಚನವಲ್ಲೂ ಸಾವಿರಾರು ಎಕ್ರೆ ತೊಗರಿಯ ನಿರ್ನಾಮವಾದದ್ದು ಏಕೆ ? ರಾಸಾಯನಿಕಗಳೇ ಪರಮ ಗುರಿ ಎನ್ನುವ ಈ ಯುಗದಲ್ಲಿ ತೆಂಗಿನ ಕಪ್ಪುತಲೆ ಹುಳ ಬಾಧೆ ಹೆಚ್ಚುತ್ತಾ ಬಂದಿರುವುದೇಕೆ ? ರಾಸಾಯನಿಕ ಲಾಭದಾಯಕ ಪದ್ಧತಿಯೇ ಹೌದಾಗಿದ್ದರೆ ಎಲ್ಲಾ ದೃಷ್ಟಿಯಲ್ಲೂ ಎಲ್ಲರೂ ಹೌಹಾರುವ ಸ್ಥಿತಿಗೆ ತಲುಪಿದ್ದು ಏಕೆ ?

ಇಂದು ಏರಿರುವ ಕೃಷಿ ಉತ್ಪತ್ತಿಯ ಕೀರ್ತಿ ಖಂಡಿತವಾಗಿ ರಾಸಾಯನಿಕಗಳಿಗಲ್ಲ. ಬದಲು ಈ ಕೀರ್ತಿ ಕೃಷಿಯಲ್ಲಿ ಹೆಚ್ಚಿರುವ ನಮ್ಮ ತೊಡಗುವಿಕೆಗೆ, ವಿಸ್ತಾರಗೊಂಡಿರುವ ಕೃಷಿ ಭೂಮಿಗೆ, ಹೆಚ್ಚಿರುವ ನೀರಾವರಿಗೆ ಸಲ್ಲಬೇಕು.

ಇದುವರೆಗೆ ನಕಾರಾತ್ಮಕವಾಗಿ ಉತ್ತರಗಳನ್ನು ಕಂಡುಕೊಂಡದ್ದಾಯಿತು. ಇನ್ನು ಸಕಾರಾತ್ಮಕ ಉತ್ತರಗಳತ್ತ ಹೊರಳೋಣ.

ಭಾವನೆ, ಪ್ರಯೋಗ, ಫಲಿತಾಂಶ, ತೀರ್ಮಾನ ಇವು ವೈಜ್ಞಾನಿಕ ವಿವಿಧ ಹಂತಗಳು. ಅಂಕಿ ಅಂಶಗಳು ಹಾಗೂ ಪ್ರಾಮಾಣಿಕ ತರ್ಕ ನಿಜ ವಿಜ್ಞಾನಿಯ ಅಸ್ತ್ರಗಳು. ನಾವು ಏನನ್ನಾದರೂ ಪ್ರಮಾಣವಿಲ್ಲದೆ ಅಂಗೀಕರಿಸಬಹುದು. ವಿಜ್ಞಾನಿ ತನ್ನ ಭಾವನೆಗಳನ್ನು ಪ್ರಯೋಗಕ್ಕೆ ಬಿಡಬೇಕು. ಪ್ರಯೋಗಗಳ ಫಲಿತಾಂಶಗಳನ್ನು ಅಂಕಿ ಅಂಶ ಸಹಿತ ದಾಖಲಿಸಬೇಕು. ಇವುಗಳ ಆಧಾರದ ಮೇಲೆ ತರ್ಕಬದ್ಧ ತೀರ್ಮಾನಕ್ಕೆ ಬರಬೇಕು. ಸುಸಂಬದ್ಧವಾಗಿದ್ದರೆ ಮೊದಲು ಹೊಂದಿದ ಭಾವನೆಗಳನ್ನು ಸ್ವೀಕರಿಸಬೇಕು. ಅಸಂಬದ್ಧವಾಗಿದ್ದರೆ ತಿರಸ್ಕರಿಸಬೇಕು. ಹೊಸ ಭಾವನೆಗಳನ್ನು ಹೊಂದಿ ಪ್ರಯೋಗ ಬೆಳೆಸಬೇಕು. ತಪ್ಪುವುದು ತಪ್ಪಲ್ಲ. ತಪ್ಪನ್ನೆ ಸಮರ್ಥಿಸುವುದು ತಪ್ಪು. ರಾಸಾಯನಿಕ ಕೃಷಿಗೆ ಇಂದು ಒದಗಿರುವ ಗತಿ ಇದು.

ನಮ್ಮ ಸಸ್ಯಗಳಿಗೆ ನಿಸರ್ಗದತ್ತ ಪೋಷಕಗಳ ಕೊರತೆ ಇದೆ ಎಂಬ ಪ್ರಮಾಣವಿಲ್ಲದ ಭಾವನೆಯನ್ನು ಸುಮಾರು ಮೂವತ್ತು ವರ್ಷಗಳ ಹಿಂದೆ ನಮ್ಮ ವಿಜ್ಞಾನಿಗಳು ಅಂಗೀಕರಿಸಿದರು ಅಥವಾ ಹೆಚ್ಚಾಗಿ ಪೋಷಕಗಳನ್ನು ಕೊಟ್ಟರೆ ಹೆಚ್ಚು ಬೆಳೆ ತೆಗೆಯಬಹುದು ಎಂದು ಭಾವಿಸಿದರು. ಸಸ್ಯಗಳ ಬೆಳವಣಿಗೆ ಹೇಗಾಗುತ್ತದೆ? ಸಸ್ಯಗಳಿಗೆ ಬೇಕಾಗುವ ಪೋಷಕಗಳು ಯಾವುವು, ಎಷ್ಟು ಎಂಬುದನ್ನು ಸ್ಥೂಲವಾಗಿ ಶೋಧಿಸಿದರು. ಈ ಅಂಶಗಳನ್ನು ಸ್ವಾಭಾವಿಕವಾಗಿ ತಯಾರಿಸುವುದು ದುಬಾರಿ. ನಮ್ಮ ಅವಸರಕ್ಕೆ ಅಸಾಧ್ಯ ಎಂದು ತೀರ್ಮಾನಿಸಿದರು. ಹಾಗಾಗಿ ಸಾವಿರ ವರ್ಷಗಳ ಶಕ್ತಿ ಸಂಚಯವನ್ನು ಭೂಗರ್ಭದಿಂದ ಎತ್ತಿ ಸಸ್ಯಸಾರವನ್ನು ಸಂಸ್ಕರಿಸಿ ಸಸ್ಯಗಳಿಗೆ ಸ್ವೀಕಾರಾರ್ಹ ಸ್ಥಿತಿಯಲ್ಲಿ ಕೃತಕವಾಗಿ ಕೊಡುವ ಪ್ರಯೋಗ ನಡೆಸಿದರು. ಇತ್ತ ಸಸ್ಯಗಳಿಗೆ ಸಾವಿರಾರು ವರ್ಷಗಳ ಪರಂಪರೆ ಇದೆ ಎಂಬುದನ್ನು ಮರೆತರು. "ಅಧಿಕ ಇಳುವರಿ" ಫಲಿತಾಂಶವೂ ಬಂತು. ಹಾಗಾಗಿ "ನಮ್ಮ ಭೂಮಿಗೆ ನೈಸರ್ಗಿಕವಾಗಿ ತನ್ನ ಸಂಪತನ್ನು ಕಾಯ್ದುಕೊಳ್ಳುವ ಶಕ್ತಿ ಇಲ್ಲ. "ಮನುಷ್ಯ ಕೃತಕ ಗೊಬ್ಬರ ಕೊಡದೆ ಗತಿ ಇಲ್ಲ" ಎಂಬ ಘನ ತೀರ್ಮಾನವನ್ನು ದಪ್ಪಕ್ಷರಗಳಲ್ಲಿ ಬಿತ್ತರಿಸಿದರು.

ಕೃತಕ ಗೊಬ್ಬರ ಬಳಸುತ್ತಾ, ಬಳಸುತ್ತಾ ಭೂಮಿ ಬಳಲಿದ್ದು, ನಿಃಸ್ಸಾರವಾಗಿ ಬೆಳೆ ಬರಲಾರದ ಸ್ಥಿತಿ ನಿರ್ಮಾಣವಾದದ್ದು ರೋಗಕೀಟ ಬಾಧೆಗಳು ಹೆಚ್ಚಿದ್ದು, ಬರಬರುತ್ತಾ ಗೊಬ್ಬರದ ವೆಚ್ಚ ಏರಿದ್ದು, ರೈತನ ಸ್ವಾವಲಂಬನೆ ತಪ್ಪಿದ್ದು, ನೆಮ್ಮದಿ ಕದಡಿದ್ದು, ಆಹಾರದ ಮೂಲ ಸ್ವಾದ ಸತ್ವ ಕೆಟ್ಟದ್ದು, ವಿಷಾನ್ನ ತಿನ್ನುವ ದೌರ್ಭಾಗ್ಯ ಬಂದದ್ದು, ಸಾವಿರಾರು ವರ್ಷಗಳ ಭೂಗರ್ಭ ಶಕ್ತಿ ಮೂಲ ನೂರಾರು ವರ್ಷಗಳಲ್ಲಿ ಮುಗಿಯುತ್ತಾ ನಡೆದದ್ದು, ಹೀಗೆ ಒಂದೊಂದು ಗಂಭೀರ ದುಷ್ಪರಿಣಾಮಗಳ ಬಗೆಗೂ ಅಜ್ಞರಾಗಿ, ಅಂಧರಾಗಿ, ತಮ್ಮ ಮೂಲ ಭಾವನೆಗೆ ಅಂಟಿಕೊಂಡು, "ಏರುತ್ತಿರುವ ಜನಸಂಖ್ಯೆಗೆ ನೈಸರ್ಗಿಕ ಕೃಷಿಯಿಂದ ಆಹಾರ ಒದಗಿಸುವುದು ಸಾಧ್ಯವೇ" ಎಂದು ಕೇಳುವುದು ಇದೆಂಥಾ ವೈಜ್ಞಾನಿಕ ವಿಧಾನ?

ನಿಸರ್ಗದ ವಿದ್ಯಮಾನಗಳನ್ನು ಮೂಕ ವಿಸ್ಮಿತರಾಗಿ ನೋಡುತ್ತಾ, ಮನುಷ್ಯ

ಅಂದಿನಂತೆಯೇ ಇಂದೂ ಇರಬೇಕೆಂಬುದು ನನ್ನ ತರ್ಕವಲ್ಲ. ಒಂದೇ ಜಾತಿ ಮತ ಎತ್ತರಕ್ಕಿಂತ ತಗ್ಗು ಜಾಗದಲ್ಲಿ, ಒಣ ಜಾಗಕ್ಕಿಂತ ನೀರಿರುವಲ್ಲಿ, ಬರಡು ಜಾಗಕ್ಕಿಂತ ಸಾರಯುಕ್ತ ಮಣ್ಣಲ್ಲಿ ಚೆನ್ನಾಗಿ ಬೆಳೆದು ಹೆಚ್ಚಾಗಿ ಫಲಕೊಡುವ ಬಗೆ ಮನುಷ್ಯನಲ್ಲಿ ಕೃಷಿಯ ಕಲ್ಪನೆಯನ್ನು ಮೂಡಿಸಿತು. ತಾನಿರುವಲ್ಲಿ ತನಗೆ ಬೇಕಾದದ್ದನ್ನು ಬೆಳೆಸುವ ಸಿದ್ಧಿ ಬಂತು. ಸಮೃದ್ಧಿ ಬಂತು, ತುಂಬಿದ ಹೊಟ್ಟೆ, ಪ್ರಫುಲ್ಲ ಮನಸ್ಸು ಪ್ರಕೃತಿಯ ನಿಗೂಢತೆಯನ್ನು ಭೇದಿಸಲು ಪ್ರಯತ್ನಿಸಿದ ಫಲವಾಗಿ—ನೀರಿರುವ, ಗೊಬ್ಬರವಿರುವ ತಗ್ಗು ಜಾಗದಲ್ಲಿ ಸಸ್ಯ ಏಕೆ ಚೆನ್ನಾಗಿರುತ್ತದೆ? ನೀರೆಂದರೇನು? ಗೊಬ್ಬರವೆಂದರೇನು? ಗೊಬ್ಬರದ ಅಂಶಗಳ್ಯಾವುವು? ಎಂಬಿತ್ಯಾದಿ ಒಂದಷ್ಟು ವಿವರಗಳು ದೊರಕಿದವು. ಈ ನೀರು, ಗೊಬ್ಬರಗಳನ್ನು ಎತ್ತರದ ಬರಡು ಜಾಗದಲ್ಲೂ ಕೊಟ್ಟರೆ ಉತ್ಪತ್ತಿ ಹೆಚ್ಚಿಸುವುದು ಸಾಧ್ಯವೆಂಬುದನ್ನೂ ಕಂಡುಕೊಂಡಂತಾಯಿತು. ಇತ್ತ ವಿಶ್ವವ್ಯಾಪಾರದ ಇನ್ನೂ ಕೆಲವೊಂದು ನಿಯಮಗಳನ್ನು ತಿಳಿದ ಪರಿಣಾಮವಾಗಿ, ಬೆಳೆದ ತಂತ್ರವಿದ್ಯೆಯ ಕೂಸಾಗಿ ನಡೆದ ನಗರೀಕರಣದ ದೆಸೆಯಿಂದ ಸ್ವಾಭಾವಿಕವಾಗಿ ಗೊಬ್ಬರ ತಯಾರಿಸುವುದು ಅಸಾಧ್ಯವೆಂಬ ಭಾವನೆ ತಲೆಗೆ ಹೋಯಿತು. ಎಲ್ಲಕ್ಕೂ ಯಂತ್ರಗಳು, ಎಲ್ಲಕ್ಕೂ ಕೃತಕ ಶಕ್ತಿಯ ಅನಿವಾರ್ಯತೆ ಒದಗಿ ಬಂತು. ನಮ್ಮ ದೇಹ ನಿಸರ್ಗ ಸೃಷ್ಟಿ, ನಮ್ಮ ಅಂಗಾಂಗಗಳಿಗೂ ಉದ್ದೇಶಗಳಿವೆ. ನಿಯಮಿತ ಕೆಲಸಮಾಡುವ ಶಕ್ತಿ ಇದೆ ಎಂಬುದೇ ಮರೆಯತೊಡಗಿತು. ಉಣ್ಣಲು ಪ್ರಕೃತಿಕೊಟ್ಟ ಕೈ ಸಾಲದೆಂದು ಚಮಚ ಬಳಕೆಗೆ ಬಂತು. ಕೈಯನ್ನಾದರೂ ಎತ್ತಬೇಕಲ್ಲ. ನೇರ ಬಾಯಿಗೇ ಅನ್ನ ಹಾಕುವ ಯಂತ್ರ ಬಂದರೂ ಬಂದೀತು. ಈ ರೀತಿಯಾಗಿ ನಮಗಿರುವ ನಿಸರ್ಗದತ್ತ ಶಕ್ತಿಯನ್ನು, ಚೈತನ್ಯವನ್ನು ಉಪಯೋಗಿಸದೆ ಒಂದೊಂದು ಸಣ್ಣ, ದೊಡ್ಡ ಕೆಲಸಗಳಿಗೂ ಕೃತಕ ಶಕ್ತಿಯ, ಯಂತ್ರಗಳ ದುರ್ವಿಯೋಗ ಮಾಡುವ ನಾಗರಿಕತೆ (Consumerism — ಅನುಭೋಗಾತಿದೇಕತ್ವ!) ನಮ್ಮದಾದಾಗ ಖಂಡಿತವಾಗಿಯೂ ನಮ್ಮ ಸಸ್ಯಗಳಿಗೆ ಸ್ವಾಭಾವಿಕ ಗೊಬ್ಬರ ಒದಗಿಸಲು ಸಾಧ್ಯವಿಲ್ಲ. ಏಕೆಂದರೆ ನಮ್ಮ ನಗರೀಕರಣಕ್ಕಾಗಿ, ನಮ್ಮ ವಿಲಾಸಕ್ಕಾಗಿ, ನಮ್ಮ ವಿನೋದಕ್ಕಾಗಿ ಕಾಡುಗಳು ನಾಶವಾಗಿವೆ, ಆಗುತ್ತಿವೆ. ಸಂಪದ್ಭರಿತ ಮೇಲ್ಮಣ್ಣನ್ನು ಸೃಷ್ಟಿಮಾಡಲು ತರಗೆಲೆ ಉದುರಿಸಲು ಇಂದು ಮರಗಿಡಗಳಿಲ್ಲ, ಇವನ್ನು ತಿಂದು ಜೀರ್ಣಿಸಿ ಮಣ್ಣಿಗೆ ಲಾಲಿತ್ಯ ಕೊಡಲು ಎರೆಹುಳಗಳಿಲ್ಲ, ಎರೆಹುಳುವಿಲ್ಲದೆ ಕೊರಡಾದ ಭೂಮಿಗೆ ಟ್ರಾಕ್ಟರ್ ಪ್ರವೇಶ ಅನಿವಾರ್ಯವೆನಿಸಿತು. ಹಾಗಾಗಿ ಅಷ್ಟಿಷ್ಟು ಅಳಿದುಳಿದ ಭೂಸಾರ ಮಳೆಗೆ ಕೊಚ್ಚಿ ಮಡುವಿಗೆ ಸೇರದೆ ಗತಿಇಲ್ಲ.

ರಾಸಾಯನಿಕ ಗೊಬ್ಬರಗಳ ದೋಷಗಳು ಒತ್ತಟ್ಟಿಗಿರಲಿ. ಅದರ ಗುಣವಾದ ಅಧಿಕ ಇಳುವರಿಯ ಖಾತೆಗೆ ಬರೋಣ. ತದ್ವತ್ತಾದ ಎರಡು ಜಾಗಗಳನ್ನು ಆರಿಸಿಕೊಳ್ಳಿ. ಅದರಲ್ಲಿ ಒಮ್ಮೆಲೆ ಒಂದೇ ರೀತಿಯ ಕೃಷಿ ಮಾಡಿ. ತೆಂಗಾದರೆ ತೆಂಗು, ಬಾಳೆಯಾದರೆ ಬಾಳೆ, ಬೀಜ, ಉಳುಮೆ, ಅಗತೆ, ನೀರು ಎಲ್ಲ ಒಂದೇ. ಆದರೆ ಒಂದು ಜಾಗಕ್ಕೆ ರಾಸಾಯ


ನಿಕ ಗೊಬ್ಬರ ಹಾಕಿ. ಇನ್ನೊಂದು ಜಾಗಕ್ಕೆ ಸಮಪ್ರಮಾಣದಲ್ಲಿ ಸಾವಯವ ಗೊಬ್ಬರ ಹಾಕಿ. ಯಾವುದೇ ಗೊಬ್ಬರದಲ್ಲಿರುವ ಸತ್ವಾಂಶಗಳನ್ನು ಇಂದು ಕರಾರುವಾಕ್ಕಾಗಿ ಲೆಕ್ಕ ಮಾಡಲು ಬರುತ್ತದೆ. ಉದಾಹರಣೆಗೆ ಒಂದು ಕಿಲೋ ೧೫:೧೫:೧೫ ರಾಸಾಯನಿಕ ಮಿಶ್ರಣದಲ್ಲಿ ೧೫೦ ಗ್ರಾಮ್ ಸಾರಜನಕ (N), ೧೫೦ ಗ್ರಾಮ್ ರಂಜಕ (P), ೧೫೦ ಗ್ರಾಮ್ ಪೊಟ್ಯಾಷ್ (K), ಇರುತ್ತದೆ. ಸ್ಥೂಲವಾಗಿ ಒಂದು ಕಿಲೋ ಸಗಣಿ ಗೊಬ್ಬರದಲ್ಲಿ ೫ ಗ್ರಾಮ್ N, ೫ ಗ್ರಾಮ್ P, ೫ ಗ್ರಾಮ್ Kಗಳು ಇರುತ್ತವೆ. ಹಾಗಾಗಿ ಒಂದು ಕಿಲೋ ೧೫:೧೫:೧೫ ಹಾಕುವ ಜಾಗದಲ್ಲಿ ಸುಮಾರ ೩೦ ಕಿಲೋ ಸಗಣಿ ಗೊಬ್ಬರ ಹಾಕಬೇಕಾಗುತ್ತದೆ. ಈ ರೀತಿಯಲ್ಲಿ ಪ್ರಯೋಗ ಮಾಡಿದಾಗ ರಾಸಾಯನಿಕ ಗೊಬ್ಬರಕ್ಕಿಂತ ಸಾವಯವ ಗೊಬ್ಬರ ಹಾಕಿದಲ್ಲಿ ಸಮವಾಗಿ ಅಥವಾ ಮಿಗಿಲಾಗಿ ಇಳುವರಿ ಬರುತ್ತವೆ. ಆದರೆ ನಮ್ಮ ಸಂಶೋಧನಾ ಕೇಂದ್ರಗಳ ಪ್ರಯೋಗಗಳು ಹೀಗೆ ನಡೆದಿವೆ ಎಂದರೆ ಎರಡುಕಡೆಗೂ ಕೊಟ್ಟಿಗೆ ಗೊಬ್ಬರ ಸಮವಾಗಿ ಕೊಡುತ್ತೇವೆ. ಒಂದು ಕಡೆಗೆ ರಾಸಾಯನಿಕವನ್ನು ಹೆಚ್ಚಾಗಿ ಕೊಡುತ್ತೇವೆ. ಹಾಗಾಗಿ ಆ ಜಾಗಕ್ಕೆ ಹೆಚ್ಚಿನ ಗೊಬ್ಬರ ಸಿಕ್ಕಿದ್ದರಿಂದ ಅದು ಹೆಚ್ಚು ಇಳುವರಿ ಕೊಟ್ಟರೆ ಅಚ್ಚರಿ ಏನೂ ಇಲ್ಲ. ಯಾವುದೇ ಗೊಬ್ಬರವನ್ನು ಸಸ್ಯಗಳು ಹೀರುವುದು. ನೀರಿನ ಮೂಲಕ. ಗೊಬ್ಬರ ನೀರಿನಲ್ಲಿ ಕರಗಿ ಬೇರಿಗೆ ಸಿಕ್ಕಬೇಕು. ರಾಸಾಯನಿಕಗಳು ಹೆಚ್ಚು ಸುಲಭವಾಗಿ ನೀರಿಗೆ ಸೇರಿ ಗಂಟೆಗಳಲ್ಲಿ ಸಸ್ಯ ಕೋಶಗಳನ್ನು ಸೇರುವುದು ಅವುಗಳ ತ್ವರಿತ ಪರಿಣಾಮಕ್ಕೆ ಕಾರಣ (ಕ್ಷಣಿಕ ಎಂಬುದು ಈಗ ಅನುಭವವೇದ್ಯ) ಯಾವುದೇ ಗಿಡ ತಾನು ದೇಹ ಪೋಷಣೆಗೆ ನೀರು ಗೊಬ್ಬರ ಕೇಳುತ್ತದೆಯೇ ಹೊರತು ರಾಸಾಯನಿಕ ರೂಪದಲ್ಲಿ ಕೊಡಿ ಎಂದು ಕೇಳುವುದಿಲ್ಲ. ಬದಲು ಕಾಲಕ್ರಮದಲ್ಲಿ ರೋಗ, ಕೀಟಗಳಿಗೆ ಪಕ್ಕಾಗಿ, ಭೂಮಿ ಬರಡಾಗಿ ಸಾವಯವ ಗೊಬ್ಬರವೇ ಮೇಲೆಂದು ಹೇಳುತ್ತದೆ. ನಮಗಿಂತ ಮೊದಲೇ ಸೃಷ್ಟಿಯಾದ ಸಸ್ಯಗಳ ಅಂಗ ರಚನೆ ಸ್ವಾಭಾವಿಕವಾದ ಶೇಕಡಾ ೦.೫ ರಿಂದ ೪ ಸತ್ವಾಂಶ ಉಳ್ಳ ದುರ್ಬಲ ಗೊಬ್ಬರಗಳಿಗೆ ಹೇಳಿ ಮಾಡಿಸಿದೆಯೇ ಹೊರತು ಶೇಕಡಾ ೧೫ ರಿಂದ ೪೫ ಇರುವ ಪ್ರಬಲ ಗೊಬ್ಬರಗಳಿಗಲ್ಲ. ಈ ಪ್ರಬಲತೆ ಗಿಡಗಳಲ್ಲಿ ಅಸ್ವಾಭಾವಿಕ ಅತಿ ಬೆಳವಣಿಗೆಯನ್ನು ತಂದು ದುರ್ಬಲತೆಯನ್ನು ತುಂಬುತ್ತದೆ. ಸಾವಯವ ಸಂಚಯ ಇಲ್ಲದಲ್ಲಿ, ರಾಸಾಯನಿಕ ಬಿದ್ದಲ್ಲಿ ಬ್ಯಾಕ್ಟೀರಿಯಾಗಳಿಗೆ ಕೆಲಸವಿಲ್ಲ, ಎರೆಹುಳಗಳಿಗೆ ಅವಕಾಶವಿಲ್ಲ. ಕಸ+ಬ್ಯಾಕ್ಟೀರಿಯ+ಎರೆಹುಳ ಸೇರಿದಾಗ ಅಲ್ಲಿ ಮಣ್ಣು ಸ್ವಾಭಾವಿಕವಾಗಿ ನುಸುಲಾಗುತ್ತದೆ. ಆಗ ಅಗತೆಯ ಉಳುಮೆಯ ಅಗತ್ಯವಿಲ್ಲ. ತೇವಾಂಶ ಹೆಚ್ಚು ಕಾಲ ಉಳಿದಿರುತ್ತದೆ. ಹಾಗಾಗಿ ನೀರಿನ ನಿರ್ವಹಣೆ ಸುಲಭ. ವಾತಾವರಣ ತಂಪಾಗಿರುತ್ತದೆ, ಸೊಂಪಾಗಿರುತ್ತದೆ. ಅಂತಲ್ಲಿ ಹೊಸ ಗಿಡಗಳನ್ನು ಸಾಕುವುದು ಸಲೀಸು. ಅಲ್ಲಿ ಭೂಮಿಯ ರಸಸಾರ (PH)ಸಮವಾಗಿರುತ್ತದೆ ಮತ್ತು ಮಣ್ಣಿನ ಪರೀಕ್ಷೆಯ ಶ್ರಮವಿಲ್ಲ. ಇಂಥ ಭೂಮಿಯಲ್ಲಿ ನಿಧಾನವಾದರೂ ನಿರಂತರವಾಗಿ ಸಸ್ಯಗಳಿಗೆ ಬೇಕಾದಷ್ಟು ಪ್ರಮಾಣದಲ್ಲಿ ಸಸ್ಯಸಾರ

ಉತ್ಪತ್ತಿಯಾಗುತ್ತಿರುತ್ತದೆ. ಹೀಗಾದಾಗ, ನೂರಾರು ವರ್ಷ ಬಾಳುವ ಮರಗಳ ಮೇಲೆ ಕೆಲವೇ ವರ್ಷಗಳ ನಿರ್ದಿಷ್ಟ ಜಾಗಗಳ ಅಂಕಿ ಅಂಶಗಳ ಆಧಾರದಲ್ಲಿ ರಸಗೊಬ್ಬರ ಅಷ್ಟು ಬೇಕು, ಇಷ್ಟು ಸಾಕು ಎಂದು ಕಷ್ಟಪಡುವ ಪ್ರಮೇಯವಿಲ್ಲ. ಗೊಬ್ಬರದಂಗಡಿಗಳ ಮುಂದೆ ಹತ್ತುಸಲ ಸುತ್ತಾಡಿ ಸುಸ್ತಾಗ ಬೇಕಾಗಿಲ್ಲ. ನಮ್ಮ ಸಂಪಾದನೆಯನ್ನೆಲ್ಲಾ ಪೇಟೆಗೆ ಸುರಿಯಬೇಕಾಗಿಲ್ಲ ಇಲ್ಲಿ ಸ್ವಾವಲಂಬನೆಯ ಚಕ್ರ ತಿರುಗುತ್ತಿರುತ್ತದೆ.

ದಿಢೀರ್ ಶ್ರೀಮಂತನಾಗುವ, ಕೈಕೆಸರಾಗದೆ ಬಾಯಿ ಮೊಸರಾಗಿಸುವ ಪ್ರಯತ್ನವಾಗಿ ರಾಸಾಯನಿಕ ಗೊಬ್ಬರ ಪ್ರವೇಶವಾಗಿ ಪ್ರಚಾರ ಪಡೆಯಿತು. ಈಗ ಇವುಗಳ ದುಷ್ಪರಿಣಾಮಗಳ ಬಗ್ಗೆ ಸೂಕ್ಷ್ಮವಾಗಿ ತಿಳಿದದ್ದಾಗಿದೆ. ಸಂಪೂರ್ಣವಾಗಿ ಕಾಲ ಮಿಂಚುವ ಮೊದಲು ಒಮ್ಮೆ ಅಳಿದುಳಿದು ಕಾಡನ್ನು ನೋಡಿ. ಗೊಬ್ಬರದ ಕಲ್ಪನೆ, ಕೃಷಿಯ ಚಿಂತನೆ ಮೂಡಿದಾಗ ನಮ್ಮ ಹಿರಿಯರು ನೋಡಿದ ಅದೇ ಕೌತುಕ, ಪರೀಕ್ಷಕ ದೃಷ್ಟಿಯಿಂದ ಕಾಡನ್ನು ಮತ್ತೊಮ್ಮೆ ನೋಡಿ. ಅಲ್ಲಿ ದಟ್ಟವಾಗಿ ಬೆಳೆದಿರುವ ಹತ್ತು ಹಲವು ಜಾತಿಯ ಮರ, ಗಿಡ, ಬಳ್ಳಿಗಳು N,P,K ಕೊರತೆಯಿಂದ ಬಳಲಿರುವುದನ್ನೇನಾದರೂ ನೀವು ಕಂಡಿರೇ ? ಬಿರುಬೇಸಿಗೆಯಲ್ಲೂ ಕೈಗೆ ಬರುವ ಮೃದು ಮೇಲ್ಮಣ್ಣನ್ನು ನೀವು ಮುಟ್ಟಿದಿರೇ ?

ಅಲ್ಲಿ ಸಲ್ಲುವುದು ಇಲ್ಲಿಯೂ ಸಲ್ಲುವುದು, ನಾವು ಮಾಡಿದ ತಪ್ಪನ್ನು ಅದೇ ಹೆಜ್ಜೆಗಳಲ್ಲಿ ಹಿಂದಿರುಗಿ ತಿದ್ದಲು ಪ್ರಯತ್ನಿಸೋಣ, ಕಾಡು ಬೆಳೆಸೋಣ ಬನ್ನಿ.

ಸಾವಯವ ಕೃಷಿ ಸಬಲವಾಗಿದೆ, ಸ್ವಾವಲಂಬಿಯಾಗಿದೆ ಎಂಬುದನ್ನು ಅನುಭವದ ಹಿನ್ನೆಲೆಯಲ್ಲಿ ಪ್ರಾಮಾಣಿಕ ತರ್ಕದಿಂದ ಪ್ರಸ್ತುತ ಪಡಿಸಿದ್ದೇನೆ. ನನ್ನ ತರ್ಕ ನಿಮಗೂ ಅರ್ಥವತ್ತಾಗಿ ಕಂಡರೆ ಶಾಶ್ವತವಾದ ಕೃಷಿಮಾಡಿ, ಸಾರವತ್ತಾದ ಸಾವಯವದ ಹಣತೆಗಳಾಗಿ.



ಉಪದೇಶವನ್ನು ಎಲ್ಲರೂ ಕೊಡಬಲ್ಲರು. ಆದರೆ ಕಾರ್ಯವನ್ನು ಮಾತ್ರ ಮಾಡಲು ಯಾರೂ ಮುಂದಾಗುವುದಿಲ್ಲ. ಮಣಗಟ್ಟಲೆ ಉಪದೇಶಗಳಿಗಿಂತ ಒಂದು ಔನ್ಸ್ ಕಾರ್ಯವೇ ಶ್ರೇಷ್ಠವಾಗುವುದು.

—ಜಾಣ್ನುಡಿ

ಏಕೆ ಕೆಲವು ಮಕ್ಕಳು ಮಾತ್ರ ಕಿವಿಗೊಡುತ್ತಾರೆ?

ಜಯಸಿಂಹ

ಎಲ್ಲೆಲ್ಲೂ ಮಕ್ಕಳನ್ನು ಮುಂದಕ್ಕೆ ತರುವುದರಲ್ಲಿ ಸಫಲರಾದ ತಜ್ಞರು ಮಕ್ಕಳೊಡನೆ ಹೇಗೆ ವ್ಯವಹರಿಸಬೇಕು ಎನ್ನುವ ಬಗ್ಗೆ ಸಲಹೆ ಕೊಡುತ್ತಾರೆ. ಅವು ಬರೀ ತಾತ್ವಿಕವಾಗಿರುವುದರಿಂದ ಅಷ್ಟು ಉಪಯೋಗವಾಗುವುದಿಲ್ಲ. ಅದಕ್ಕೆ ನಾವು ಅನೇಕ ಶಜ್ಞರು ಮತ್ತು ಅನೇಕ ವರ್ಷಗಳು ಪ್ರಯೋಗ ನಡೆಸಿ ತಪ್ಪುಗಳನ್ನು ತಿಳಿದುಕೊಂಡು ತರಬೇತಿ ಹೊಂದಿದ ಒಳ್ಳೆಯ ತಂದೆತಾಯಿಗಳನ್ನು ಅವರ ಯಶಸ್ಸಿನ ಗುಟ್ಟು ತಿಳಿಯಲು ಕೇಳಿಕೊಂಡೆವು.

ಸಾಮಾನ್ಯವಾಗಿ ಒಳ್ಳೆಯ ಉಪಾಧ್ಯಾಯರು ಮಕ್ಕಳ ಮತ್ತು ಅವರ ಬಳಗದ ವಿಚಾರವಾಗಿ ತಿಳಿದುಕೊಳ್ಳಲು ಹೆಚ್ಚು ವೇಳೆ ವಿನಿಯೋಗಿಸುತ್ತಾರೆ. ಆದುದರಿಂದ ೧೦೦ ಗೌರವಾನ್ವಿತ ಉಪಾಧ್ಯಾಯರ ಸಹಾಯದಿಂದ ಅಂಥ ಹೆತ್ತವರನ್ನು ಸಂಪರ್ಕಿಸಿದೆವು. ಆಯ್ದ ನೂರು ಕುಟುಂಬಗಳನ್ನು ಮೂರು ವರ್ಷಗಳಲ್ಲಿ ಸಹಾಲೋಚನೆಗಾಗಿ ಭೇಟಿ ಮಾಡಿದೆವು.

ಇದರಿಂದ ಮಕ್ಕಳೊಡನೆ ವ್ಯವಹರಿಸುವುದನ್ನು ಆರು ವಿಧವಾದ ರೀತಿಯಲ್ಲಿ ಅಭಿವೃದ್ಧಿಪಡಿಸಬಹುದು ಎಂದು ತಿಳಿಯಿತು.

೧. ಮಾತು ಕಡಿಮೆ ಮಾಡಿ—ಮಾತು ಬೆಳ್ಳಿ, ಮೌನ ಚಿನ್ನ!

ಅನೇಕ ತಂದೆತಾಯಿಗಳು ಎದುರಿಗೆ ನೇರವಾಗಿ ಮಾತನಾಡುವುದು ಮಕ್ಕಳ ಕಿವಿ ಮತ್ತು ಬಾಯಿಯನ್ನು ಮುಚ್ಚುತ್ತದೆ ಎಂದು ತಿಳಿದಿದ್ದಾರೆ. ಮೊದಲನೆಯ ಸಾಮಾನ್ಯವಾದ ತಪ್ಪೆಂದರೆ, "ನಾನು ನಿನ್ನ ವಯಸ್ಸಿನವನಾಗಿದ್ದಾಗ" ಎಂದು ಪ್ರಾರಂಭಿಸಿ ತಾನೊಬ್ಬನೇ ದೀರ್ಘ ಭಾಷಣ ಬಿಗಿಯುವುದು. ಇದನ್ನು ೧೮ ವರ್ಷದ ಕೆಲ್ಲಿ "ದೀರ್ಘವಾದ ಮತ್ತು ನನಗೆ ಹೆಚ್ಚು ಹೇಳಲು ಅವಕಾಶ ಸಿಗದ ಏಕಮುಖ ಚರ್ಚೆ" ಎಂದು ಹೇಳುತ್ತಾನೆ.

ಮಕ್ಕಳು ಉಪನ್ಯಾಸವನ್ನು ಅಷ್ಟಾಗಿ ಕೇಳುವುದಿಲ್ಲ. ದೃಷ್ಟಿ ಎಲ್ಲೋ ನೆಟ್ಟಿರುತ್ತೆ. ಏನು ಹೇಳುತ್ತಾರೆಂದೂ ಮನಸ್ಸಿಗೆ ತೆಗೆದುಕೊಳ್ಳುವುದಿಲ್ಲ. ಅದನ್ನು ತಿಳಿದುಕೊಳ್ಳುವುದಕ್ಕೂ ಪ್ರಯತ್ನಿಸುವುದಿಲ್ಲ. ೧೩ ವರ್ಷದ ಸರಾಹ್ "ನನಗೆ ಅತಿ ಇಷ್ಟವಿಲ್ಲದ ಸಮಯ

೧೯೯೪ನೇ ಅಗಸ್ಟ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾಗಿರುವ ರೇ ಗಾರೇಂಡ ಅವರ "ವೈ ಸಮ್ ಕಿಡ್ಸ್ ಲಿಸನ್" ಎಂಬ ಲೇಖನದ ಅನುವಾದ.

ಎಂದರೆ ತಂದೆ, ತಾಯಿಯರೊಡನೆ ಇರುವುದು. ಏಕೆಂದರೆ ಮೊದಲು ಅವರು ಕಿರುಚಾಡುತ್ತಾರೆ. ಅನಂತರ 'ನಮಗೆ ಬಹಳ ಆಶಾಭಂಗವಾಗಿದೆ' ಎಂಬ ಭಾಷಣ. ಬಳಿಕ 'ನಾವು ನಮ್ಮ ತಂದೆತಾಯಿಗಳಿಗೆ ಹೀಗೆ ಮಾಡಿರಲಿಲ್ಲ' ಎಂಬ ಉಪದೇಶ. ತಾವು ಮಾತನಾಡುತ್ತಿರುವುದು ಎಷ್ಟು ಅಸಂಬದ್ಧ ಎಂದು ತಿಳಿದರೂ ಅದನ್ನು ಒಪ್ಪಿಕೊಳ್ಳುವುದಿಲ್ಲ" ಎಂದು ವಿವರಿಸಿದಳು.

"ನಿಮಗೆ ನಿಮ್ಮದೇ ಮಕ್ಕಳಾದಾಗ ಗೊತ್ತಾಗುತ್ತೆ" ಎಂದು ಹಿಂದಿನಿಂದ ತಂದೆತಾಯಿಗಳು ಹೇಳುತ್ತಾ ಬಂದಿದ್ದಾರೆ.

ಮೂರು ಮಕ್ಕಳ ತಾಯಿಯಾದ ಬಾಬಿ ಎಂಬ ದಾದಿ "ತಂದೆತಾಯಿಯರು ನಮ್ಮ ನಡವಳಿಕೆಯನ್ನು ಸಮರ್ಥಿಸಿಕೊಳ್ಳಲು ಪಟ್ಟು ಹಿಡಿದರೆ ಅದಕ್ಕಾಗಿ ನಮ್ಮ ಸ್ಥಾನದಿಂದ ಸಡಿಲಗೊಂಡಂತಾಗುತ್ತದೆ" ಎಂದು ಅಭಿಪ್ರಾಯಪಡುತ್ತಾಳೆ.

ಮಕ್ಕಳು ಈಗಿನ ಕಾಲದವರಾದ್ದರಿಂದ ಬಹಳ ದೂರದ ಭವಿಷ್ಯ ಅವರಿಗೆ ಸಂಗತವೆನಿಸದು. ಆದ್ದರಿಂದ ಒಳ್ಳೆಯ ನಿವೇದಕಳಾದ ಬಾಬಿ "ನಿಮ್ಮ ಕ್ರಿಯೆಗೆ ಈಗಿನ ಕಾಲಕ್ಕೆ ಅನುಗುಣವಾಗಿ ಒಳ್ಳೆಯ ಕಾರಣಗಳನ್ನು ಕೊಡಿ" ಎನ್ನುತ್ತಾಳೆ. ಉದಾ :— "ಅಲ್ಲಿ ಹಿರಿಯರ ಒಳ್ಳೆಯ ಉಸ್ತುವಾರಿ ಇಲ್ಲದಿರುವುದರಿಂದ ನಾನು ಆ ಪಾರ್ಟಿಗೆ ನಿಮ್ಮನ್ನು ಕಳುಹಿಸುತ್ತಿಲ್ಲ" ಎಂದು ಸರಿಯಾಗಿ ತಿಳಿಯಪಡಿಸಿ.

ಬೆಟ್ಟಿ ಮಕ್ಕಳಿಗೆ ತಿಳಿಯಪಡಿಸಬೇಕಾದ ವಿಷಯವನ್ನು ನೇರವಾಗಿ ಹೇಳದೆ ಪರೋಕ್ಷವಾಗಿ ತಿಳಿಯಪಡಿಸುತ್ತಾಳೆ'.

"ಮಕ್ಕಳನ್ನು ಎಚ್ಚರಿಸಬೇಕಾದರೆ ಅದೇ ವಿಚಾರವಿರುವ ಸುದ್ದಿಯನ್ನು ಚರ್ಚಿಸುವುದರಿಂದ ಬಹಳ ಬೇಗ ಒಪ್ಪಿಕೊಳ್ಳುತ್ತಾರೆ. ನಾನು ಮತ್ತು ನನ್ನ ಯಜಮಾನರು ಹಾಗೆ ಚರ್ಚಿಸುವುದನ್ನು ಕೇಳಿ ಮಕ್ಕಳು ಸರಿಯಾದ ವಿಚಾರವನ್ನು ಚೆನ್ನಾಗಿ ಗ್ರಹಿಸುತ್ತಾರೆ ಮತ್ತು ನಾನು ಅವರಿಗೆ ಬೋಧಿಸುತ್ತಿದ್ದೇನೆ ಎಂದು ಅವರು ತಿಳಿಯುವುದಿಲ್ಲ" ಎಂದು ಅಭಿಪ್ರಾಯಪಡುತ್ತಾಳೆ.

ಈ ವಿಧಾನ ಬೆಟ್ಟಿಯ ಮಕ್ಕಳು ವಾಹನವನ್ನು ಓಡಿಸುವುದನ್ನು ಕಲಿಯುವಾಗ ಬಹಳ ಉಪಯೋಗವಾಯಿತು. ಮಕ್ಕಳಿಗೆ "ಕುಡಿಯಬೇಡ, ಹೆಚ್ಚು ವೇಗದಲ್ಲಿ ವಾಹನವನ್ನು ಓಡಿಸಬೇಡ" ಎನ್ನುವುದಕ್ಕಿಂತ ಅವಳು ಪತ್ರಿಕೆಗಳಲ್ಲಿ ಬರುತ್ತಿದ್ದ ಕಾರು ಅಪಘಾತಕ್ಕೀಡಾದ ವ್ಯಕ್ತಿಗಳ ಬಗ್ಗೆ ಅನುಕಂಪ ತೋರಿಸುತ್ತಿದ್ದಳು. ಆ ವಿಚಾರವಾಗಿ ಮಕ್ಕಳನ್ನು ಮಾತಿಗೆ ಎಳೆಯುತ್ತಿರಲಿಲ್ಲ. ಮಗ ಆ ವಿಚಾರದ ಬಗ್ಗೆ "ತನ್ನ ಅಭಿಪ್ರಾಯವನ್ನು ಹಿರಿಯರು ಕೇಳುತ್ತಿಲ್ಲ" ಎಂದು ಅಭಿಪ್ರಾಯ ಪಟ್ಟಿದ್ದು ಕಂಡು ಬಂದಾಗ ಮಾತ್ರ ಅವನ ಅಭಿಪ್ರಾಯಕ್ಕೆ ಹೆಚ್ಚು ಮಾನ್ಯತೆ ಕೊಡುತ್ತಿದ್ದಳು.

೨. ಉದ್ರೇಕಕಾರಿ ಉದ್ಗಾರಗಳನ್ನೇ ಉದುರಿಸಬೇಡಿ !

ನಮ್ಮ ಮಕ್ಕಳ ಒಳ್ಳೆಯ ನಡವಳಿಕೆಗೆ ನಮ್ಮ ಮನೋಭಾವಗಳು ಬಹಳ ಮಟ್ಟಿಗೆ ಸಂಬಂಧಿಸಿವೆ. ಏಕೆಂದರೆ ಯಾವ ತಂದೆತಾಯಿಗಳೂ ಎಲ್ಲಾ ಸಮಯದಲ್ಲೂ ಶಾಂತರಾಗಿರುವುದಿಲ್ಲ. ಆದರೂ ನಾವು ಎಷ್ಟೋ ವೇಳೆ ಕೆಲವು ವಿಷಯಗಳಲ್ಲಿ ಯೋಚಿಸಿ ಪ್ರಯತ್ನಿಸಿದಷ್ಟೂ ಹೇಳಕೂಡದು ಎಂದುಕೊಂಡಿದ್ದನ್ನು ಹೇಳಿಯೇ ಹೇಳುತ್ತೇವೆ.

ಕೆಲವು ವಿಚಾರಗಳು ತಮ್ಮ ಕೈಮೀರಿ ಹೋಗುತ್ತಿವೆ ಎಂಬ ಭಯ ಉಂಟಾದಾಗ ಒಬ್ಬ ತಾಯಿ ತನ್ನ ಮಕ್ಕಳಿಗೆ "ನಾನು ತುಂಬಾ ಕ್ಷೋಭೆಗೊಂಡಿದ್ದೇನೆ. ನಾನು ಈಗಲೇ ಏನು ಹೇಳಲೂ ಇಷ್ಟಪಡುವುದಿಲ್ಲ. ಹೋಗಿ ಆಟವಾಡಿ. ನಾನು ಸಮಾಧಾನ ಗೊಂಡ ನಂತರ ಬಂದು ಹೇಳುತ್ತೇನೆ" ಎಂದು ಹೇಳುತ್ತಾಳೆ.

ನಾಲ್ಕು ಮಕ್ಕಳ ತಂದೆಯಾದ ವಿದ್ಯು ದ್ವಿಜ್ಞಾನಿ ರಾಬರ್ಟ್ ಘರ್ಷಣೆಯ ಸಂದರ್ಭ ದಲ್ಲಿ ಆದಷ್ಟು ಶಾಂತವಾಗಿರಲು ಪ್ರಯತ್ನಿ ಸುತ್ತಾನೆ. ಏಕೆಂದರೆ ಅವನು ಆ ಸಂದರ್ಭ ದಲ್ಲಿ ತಾನು ಹಾಗೆ ಚಿಕ್ಕವನಾಗಿದ್ದಾಗ ಹೇಗಿದ್ದೆ ? ಎಂಬುದನ್ನು ನೆನೆಸಿಕೊಳ್ಳು ತ್ತಾನೆ. ದೊಡ್ಡವರಾಗಲು ಹುಚ್ಚು ನಡ ವಳಿಕೆಯೂ ಅದರ ಒಂದು ಅಂಗ ಎನ್ನು ವುದನ್ನು ಜ್ಞಾಪಿಸಿಕೊಳ್ಳುವುದರಿಂದ ಶಾಂತ ವಾಗಿರಲು ಸಾಧ್ಯವಾಗುತ್ತದೆ ಎನ್ನುತ್ತಾನೆ.

ಒಬ್ಬಳು ತಾಯಿ "ನಮ್ಮ ಇತರ ಹಿರಿಯ ರೊಂದಿಗೆ ಸಂಯಮದಿಂದ ನಡೆದುಕೊಳ್ಳು ತ್ತೇವೆ. ಇದರಿಂದ ಕೆಲವು ವೇಳೆ ಎಷ್ಟೋ ಜುಗುಪ್ಸೆಯಾಗುತ್ತದೆ ಮತ್ತು ನಮ್ಮ ಮಕ್ಕಳಿಗೆ ನಾವು ಅಷ್ಟೇ ಋಣಿಯಾಗಿರು ತ್ತೇವೆ" ಎನ್ನುತ್ತಾಳೆ.

೩. ಮಗುವಿನ ತೊದಲ್ನುಡಿಗೆ ಕಿವಿ ಗೊಡಿ — ಅದೊಂದು ಹೊಸ ಹಾಡು !

ಜೋವಿನ ಅಭಿಪ್ರಾಯದ ಪ್ರಕಾರ ಮಗುವಿನ ಅನಿಸಿಕೆಯನ್ನು ಕೇಳುವುದೆಂದರೆ ಮಗು ಮಾತನ್ನು ಪೂರ್ತಿ ನಿಲ್ಲಿಸುವವರೆಗೂ ತಾನು ಸುಮ್ಮನಿರುವುದು. ಮಗು ಹೇಳು ವುದನ್ನು ಅದೇನೇ ಆಗಿರಲಿ ಕೊನೆಯ ವರೆಗೂ ಕೇಳಬೇಕು. ಅದು ಹೇಳಿದ್ದೆಲ್ಲ ತನಗೆ ಅರ್ಥವಾಗಿದೆ ಎನ್ನುವುದನ್ನು ತಿಳಿಯ ಪಡಿಸಿ ಬಳಿಕ ತನ್ನ ಬುದ್ಧಿವಾದ ಕೊಡುವು ದಾಗಲೀ ಅಥವಾ ಬೇರೆ ನಡವಳಿಕೆಯನ್ನು ತೆಗೆದುಕೊಳ್ಳುವುದಾಗಲೀ ಮಾಡಬೇಕು.

ಮೂರು ಮಕ್ಕಳ ತಂದೆಯಾದ ರಾನ್ ಪ್ರಕಾರ ವಯಸ್ಸು ೭ ರಿಂದ ೧೬ರ ನಡುವೆ ಮಕ್ಕಳು ಇತರೆ ವಸ್ತುಸ್ಥಿತಿಯನ್ನು ನೋಡುವ ರೀತಿ ಹಿರಿಯರಿಗಿಂತ ಭಿನ್ನ ವಾಗಿರುತ್ತದೆ. ನಾವು ಚಿಕ್ಕವನಾಗಿದ್ದಾಗ ಜೀವನದಲ್ಲಿಯ ಸಣ್ಣಪುಟ್ಟ ಸಮಸ್ಯೆಗಳೂ ಹಿರಿದಾಗಿ ಕಾಣುತ್ತಿತ್ತು ಎಂಬುದನ್ನು ನೆನೆಸಿಕೊಂಡಾಗ ಸೈರಣೆಯಿಂದ ಇನ್ನೂ ಹೆಚ್ಚು ಸಮಯ ಇರಲು ಸಾಧ್ಯವಾಗು ತ್ತದೆ. ಮಗು ತಾನು ತನಗೆ ಇಷ್ಟವಾದು ದನ್ನು ಕಳೆದುಕೊಂಡರೆ ಅದು ಎಷ್ಟೇ ಸಾಮಾನ್ಯವಾಗಿ ಕಂಡರೂ, ಅದೇ ಹೆಚ್ಚು ಮುಖ್ಯವೆಂದು ಅದು ಭಾವಿಸುತ್ತದೆ. ನಾವು ಅದನ್ನು ಅರ್ಥಮಾಡಿಕೊಳ್ಳಬೇಕು.

೪. ಮಾತಾಡಬೇಕಾದಾಗ ಆಡಿ ಸ್ಫುಟ ವಾಗಿ ಸರಳವಾಗಿ :

ಮಕ್ಕಳೊಡನೆ ಹೇಗೆ ಮಾತನಾಡಬೇಕು ಎನ್ನುವಷ್ಟೇ "ಯಾವಾಗ ಮಾತನಾಡ ಬೇಕು" ಎನ್ನುವುದೂ ಅಷ್ಟೇ ಮುಖ್ಯ. ಎಷ್ಟೋ ತಾಯಿ, ತಂದೆಯರನ್ನು ಸಂದರ್ಶಿಸಿ ದಾಗ ಮಲಗುವ ಸಮಯ ಮತ್ತು ಊಟದ ಸಮಯ ಹೆಚ್ಚು ಪರಿಣಾಮಕಾರಿಯಾಗಿರು ತ್ತದೆ ಎಂದು ತಿಳಿಯಿತು.

ಒಬ್ಬ ತಾಯಿಗೆ ರಾತ್ರಿ ಮಲಗುವ ಸಮಯದ ಪದ್ಧತಿ ಇತ್ತು.

"ಮಕ್ಕಳು ರಾತ್ರಿ ಮಲಗಲು ಹೋದಾಗ ನಾವು ಅವರನ್ನು ನಿಮ್ಮ ಈವತ್ತಿನ ಮುಖ್ಯವಾದ ಸಮಯ ಯಾವುದು ? ಬಹಳ ಕೆಟ್ಟದಾದ ಸಮಯ ಯಾವುದು ? ಎಂದು ಕೇಳಿದಾಗ ನಾವು ಬಹಳ ವಿಚಾರಗಳನ್ನು ತಿಳಿದುಕೊಳ್ಳುತ್ತೇವೆ" ಎಂದು ಹೇಳಿದಳು.

ವಿಚಾರ ವಿನಿಮಯ ಮಾಡಿಕೊಳ್ಳಲು ಊಟವನ್ನು ಏರ್ಪಾಡು ಮಾಡಬಹುದು. ಒಂದು ಸಂಸಾರ ಊಟದ ಸಮಯದಲ್ಲಿ ಒಂದು ನಿಬಂಧನೆಯನ್ನು ವಿಧಿಸಿತ್ತು. ಆವತ್ತಿನ ಊಟದ ಮೇಜಿನ ಮುಖ್ಯಸ್ಥನಿಗೆ ಮಾತನಾಡಲು ಅವಕಾಶ ಸಿಗುತ್ತಿತ್ತು. ಈ ರೀತಿ ಎಲ್ಲರಿಗೂ ತನಗೆ ಮನಸ್ಸಿನಲ್ಲಿ ತೋರಿದ್ದನ್ನು ತಿಳಿಯಪಡಿಸಲು ಅವಕಾಶ ಸಿಗುತ್ತಿತ್ತು. ಮತ್ತೊಂದು ಸಂಸಾರ ಕೆಲವು ವಾರಗಳಿಗೊಮ್ಮೆ ಬೆಳಗಿನ ಉಪಾಹಾರದ ಸಮಯದಲ್ಲಿ ವಿಚಾರ ವಿನಿಮಯ ಮಾಡಿಕೊಳ್ಳಲು ಸಮಯವನ್ನು ಗೊತ್ತುಪಡಿಸಿಕೊಂಡಿದ್ದರು. ಪ್ರತಿಯೊಬ್ಬನಿಗೂ ಐದು ಮಿನಿಟ್ ಕಾಲಾವಕಾಶಕೊಡಲ್ಪಡುತ್ತಿತ್ತು. ಅವನಿಗೆ "ಏನು ನಡೆಯುತ್ತಿದೆ ಮತ್ತು ಅದನ್ನು ತಾನು ಹೇಗೆ ಅಭಿಪ್ರಾಯ ಪಡುತ್ತೇನೆ" ಎಂದು ತಿಳಿಸಲು ಅವಕಾಶ ಸಿಗುತ್ತಿತ್ತು.

ಕೆಲವು ತಂದೆತಾಯಂದಿರು ತಮ್ಮ ವಿಚಾರ ವಿನಿಮಯದ ಸಮಯವನ್ನು ತಿಳಿಸಿ ನಮ್ಮನ್ನು ಆಶ್ಚರ್ಯಗೊಳ್ಳುವಂತೆ ಮಾಡಿದರು. "ನಮ್ಮ ಮಕ್ಕಳು ಚಿಕ್ಕವರಾಗಿದ್ದಾಗ ನಮ್ಮ ತಟ್ಟೆ ತೊಳೆಯುವ ಯಂತ್ರ ಕೆಟ್ಟುಹೋಯಿತು. ಅದನ್ನು ನಾವು ರಿಪೇರಿ ಮಾಡಿಸಲು ಆಗಲಿಲ್ಲ" ಎಂದು ಒಬ್ಬ ತಾಯಿ ಹೇಳಿದಳು. ಒಂದೊಂದು ಮಗುವೂ ತಟ್ಟೆಯನ್ನು ಒಣಗಿಸಲು ಎಷ್ಟು ಸಲ ತೆಗೆಯುತ್ತಾರೆ ಎಂದು ತಿಳಿಯಿತು. ತಟ್ಟೆ ತೊಳೆಯುವ ಯಂತ್ರ ಅನೇಕ ವರ್ಷಗಳವರೆಗೆ ಮುರಿದೇಹೋಗಿತ್ತು. ಏಕೆಂದರೆ ನಾನು ಆ ಸಮಯದಲ್ಲಿ ಎಲ್ಲರೂ ಸೇರುವುದನ್ನು ನಿಲ್ಲಿಸಿಬಿಟ್ಟೆ" ಎಂದಳು.

೫. ನುಡಿಯಲ್ಲಿ ತುಂಬಿರಲಿ ನಯ, ಪ್ರೀತಿ, ಸ್ನೇಹ :

ಸುಭದ್ರವಾದ ಕುಟುಂಬದಲ್ಲಿ ಸಮಾಚಾರಗಳನ್ನು ತಿಳಿಸಲು ಪ್ರೀತಿ, ಮೃದುವಾದ, ಶಾಂತಿಯುತವಾದ ವಿಧಾನವನ್ನೇ ಮುಖ್ಯವಾಗಿ ಉಪಯೋಗಿಸುತ್ತಾರೆ.

ಎರಡು ಯುವ ಮಕ್ಕಳ ತಂದೆಯಾದ ಸ್ಟಾನ್‌ಗೆ ಪ್ರೀತಿ ಎಂತಹ ಕಟುವಾದ ಸಂದರ್ಭವನ್ನೂ ಮಾಯಿಸುತ್ತದೆ ಎಂದು ಅರಿವಾಯಿತು. ಆದರೂ ಕೆಲವು ಸಂದರ್ಭ ಮಾತನಾಡಲು ಸರಿಹೋಗುವುದಿಲ್ಲ. ಅದನ್ನು ಒಬ್ಬರನ್ನೊಬ್ಬರು ಮುಟ್ಟಿ ತಿಳಿಯಪಡಿಸಬಹುದು" ಎಂದು ಸ್ಟಾನ್ ಹೇಳುತ್ತಾನೆ. ಪ್ರೀತಿ ಒಂದು ಮೌನವಾದ ಗುರುತು. ಎಷ್ಟೋ ಭಿನ್ನಾಭಿಪ್ರಾಯಗಳಿರಲಿ, ಘರ್ಷಣೆಗಳು ಏರ್ಪಡಲಿ ಜನರು ಒಬ್ಬರನ್ನೊಬ್ಬರು ಮುಟ್ಟುವಂತಿದ್ದದಾದರೆ ಅವರು ಕಟ್ಟಕಡೆಗೆ ಮಾತನಾಡಬಹುದು.

ಜೂಲಿ, ತನ್ನ ಮಗ ಸಂಕೋಚದ ಸ್ವಭಾವವನ್ನು ಬೇರೆಯವರಲ್ಲಿ ತೋರ್ಪಡಿಸಿಕೊಳ್ಳುವುದು ಇಷ್ಟವಿಲ್ಲವೆಂಬುದನ್ನು ಅರಿತು ಮೌನಸನ್ನೆಯನ್ನು ಉಪಯೋಗಿಸುತ್ತಾಳೆ. "ನನ್ನ ಹನ್ನೊಂದುವರ್ಷದ ಮಗ ತಾನು ಆಟದ ಮೈದಾನಕ್ಕೆ ಹೋಗುವಾಗ "ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂದು

ತಾಯಿ ಗಟ್ಟಿಯಾಗಿ ಕೂಗಿ ಹೇಳುವುದು ಇಷ್ಟಪಡುವುದಿಲ್ಲ. ಅದಕ್ಕೆ ನಾನು ಅವನ ಭುಜವನ್ನು ೩ ಸಲ ಹಿಂಡುತ್ತೇನೆ. ಅವನು ನಗುತ್ತಾ ಹೋಗುತ್ತಾನೆ.

ನಿಮ್ಮ ಮಕ್ಕಳು ನೀವು ಅವರನ್ನು ಪ್ರೀತಿಸುತ್ತೀರಿ ಎನ್ನುವುದನ್ನು ತಿಳಿದಿದ್ದಾರೆ ಎಂದು ಭಾವಿಸಿಕೊಳ್ಳಬೇಡಿ, ಅವರಿಗೆ ಅದನ್ನು ತೋರಿಸಿ. ಚಿಕ್ಕದಾದ, ಸುಲಭವಾದ ರೀತಿಯಲ್ಲಿ ಅವರನ್ನು ಪಾಲಿಸುವುದನ್ನು, ಪ್ರೀತಿಸುವುದನ್ನು ತೋರಿಸಿ, ಪೂರ್ಣ ಕುಟುಂಬದಲ್ಲಿ ಅವರ ಪರಿಣಾಮ ಬೀರುವುದನ್ನು ನೋಡಿ ನಿಮಗೆ ಆಶ್ಚರ್ಯವಾಗಬಹುದು.

೬. ನಿಮ್ಮ ಮಕ್ಕಳ ಅಭಿಪ್ರಾಯಕ್ಕೆ ಬೆಲೆಕೊಡಿ

ಉತ್ತಮ ತಂದೆ ತಾಯಂದಿರು ಮಕ್ಕಳು ಎಷ್ಟೇ ಒಪ್ಪದಿದ್ದರೂ ಕೆಲವು ವಿಚಾರಗಳಲ್ಲಿ ತಮ್ಮದೇ ಆದ ಅಭಿಪ್ರಾಯಕ್ಕೆ ಪಟ್ಟು ಹಿಡಿಯುವುದು ಸರಿ ಎಂದು ಹೇಳುವುದು ಕಂಡುಬಂದಿತು. ಆದಾಗ್ಯೂ ತಮ್ಮದೇ ಆದ ಅಭಿಪ್ರಾಯಕ್ಕೆ ಪಟ್ಟುಹಿಡಿದ ಮಾತ್ರಕ್ಕೆ ಮಕ್ಕಳನ್ನು ಅಲಕ್ಷ್ಯ ಮಾಡಿದಂತಾಗುವುದಿಲ್ಲ.

ಕೌಟುಂಬಿಕವಾದ ವಿಚಾರಗಳಲ್ಲಿ ಮಕ್ಕಳಿಗೂ ಅವರ ಅಭಿಪ್ರಾಯಗಳನ್ನು ತಿಳಿಸಲು ಅವಕಾಶ ಕೊಡುವುದರಿಂದ ಎರಡು ವಿಧವಾದ ಉಪಯೋಗಗಳುಂಟು. ಅವರನ್ನು ಸಲಹೆ ಕೇಳುವುದರಿಂದ ಅವರು ತೀರ್ಮಾನವನ್ನು ಚೆನ್ನಾಗಿ ಅರ್ಥಮಾಡಿಕೊಂಡು, ತಮ್ಮನ್ನು ಕುಟುಂಬದ ಒಂದು ಅಂಗವಾಗಿ ಹಿರಿಯರು ಪರಿಗಣಿಸಿದ್ದಾರೆ ಎಂದು ಅವರಿಗೆ ಅರಿವಾಗುತ್ತದೆ.

೧೬ ವರ್ಷದ ತಾರಾ ದೊಡ್ಡ ತೀರ್ಮಾನಗಳನ್ನು ಕೈಗೊಳ್ಳುವಾಗ ಕುಟುಂಬದ ಎಲ್ಲರೂ ಸೇರುವುದು ಸರಿಯಾದ ರೀತಿ ಎಂದು ಅಭಿಪ್ರಾಯ ಪಡುತ್ತಾಳೆ. "ಮನೆಯಲ್ಲಿ ಯಾರಾದರೂ ಒಬ್ಬರಿಗೆ ಅಥವಾ ಇಬ್ಬರಿಗೆ ಏನಾದರೂ ವಿಚಾರ ಹೊಳೆದರೆ ಅದನ್ನು ಮನೆಯವರಿಗೆಲ್ಲಾ ಅವರವರ ಅಭಿಪ್ರಾಯ ತಿಳಿಸಲು ತಿಳಿಯಪಡಿಸುತ್ತೇವೆ." ಎಂದು ಅವಳು ಹೇಳುತ್ತಾಳೆ. ಉದಾ:—ಮನೆಗೆ ಒಂದು "ಹೋಂ ಕಂಪ್ಯೂಟರ್" ಖರೀದಿಸಬೇಕೆಂದು ಅಭಿಪ್ರಾಯ ಪಟ್ಟಾಗ ಯಾರು ಉಪಯೋಗಿಸುವುದು? ಕುಟುಂಬಕ್ಕೆ ಯಾವ ವೈಶಿಷ್ಟ್ಯ ಸೂಚಕ ಭಾಗ ಬೇಕು? ಕಂಪ್ಯೂಟರ್ ಸಮಯವನ್ನು ಹೇಗೆ ಹಂಚಿಕೊಳ್ಳುವುದು? ಯಾವ ಉಪಯೋಗಕ್ಕೆ ಮೊದಲು ಆದ್ಯತೆ ಕೊಡಬೇಕು? ಎಂದೆಲ್ಲಾ ಚರ್ಚೆ ನಡೆಸಿದರು.

ಮಾರ್ಕ್ ತನ್ನ ಸಲಹೆಯನ್ನು ಹಿರಿಯರು ಕೇಳುವುದು ಎನ್ನುವುದೇ ತನ್ನ ಅಭಿಪ್ರಾಯವನ್ನು ಕೇಳಿದ್ದಕ್ಕಿಂತ ಹೆಚ್ಚಾದಂತೆ ಸಂತೋಷವನ್ನು ಕೊಡುತ್ತದೆ ಎನ್ನುತ್ತಾನೆ.

"ನಾವು ದೊಡ್ಡವರಾಗುತ್ತಿದ್ದಂತೆ ಅಮ್ಮ-ಅಪ್ಪ ಕೌಟುಂಬಿಕ ನಿರ್ಧಾರವನ್ನು ತೆಗೆದುಕೊಳ್ಳುವಾಗ ನಮಗೆ ಅವಕಾಶ ಹೆಚ್ಚಾಗಿ ಕೊಡುತ್ತಾರೆ. ಅವರಿಗೆ ನಮ್ಮ ಸಲಹೆಗಳನ್ನು—ಅಭಿಪ್ರಾಯಗಳನ್ನು ಕೇಳಲು ಇಷ್ಟ. ಆದರೆ ಅದನ್ನು ಅವರು ಅನುಸರಿಸದೇ ಇದ್ದರೂ ಅದು ನನ್ನ ಆತ್ಮಗೌರವಕ್ಕೆ ಚಮತ್ಕಾರವನ್ನುಂಟುಮಾಡುತ್ತದೆ" ಎಂದು ಮಾರ್ಕ್ ಅಭಿಪ್ರಾಯ ಪಡುತ್ತಾನೆ.

ಮನೆಯ ಉಸ್ತುವಾರಿಯನ್ನು ನೋಡಿ ಕೊಳ್ಳುವುದು, ಶಿಸ್ತನ್ನು ವಿಧಿಸುವುದು, ಮುಖ್ಯವಾದ ತೀರ್ಮಾನವನ್ನು ಕೈಗೊಳ್ಳು ವುದು ಎಲ್ಲಾ ತಂದೆ–ತಾಯಿಯರಿಂದಲೇ ಮುಖ್ಯವಾಗಿ ಮಾಡಲ್ಪಡುತ್ತದೆ.

ಟಿ. ವಿ. ನೋಡುವುದಕ್ಕೆ ಮೊದಲು ಎಲ್ಲರೂ ಮನೆ ಕೆಲಸವನ್ನೆಲ್ಲಾ ಮುಗಿಸಿರ ಬೇಕು ಎಂದು ಒಂದು ಕಟ್ಟುಪಾಡು ನಿಗದಿ ಮಾಡಿದ್ದಾರೆ, ಅದರ ವಿಚಾರವಾಗಿ ಚರ್ಚೆ ಮಾಡುವುದು ನಿಷ್ಪ್ರಯೋಜಕ ಚರ್ಚೆಯಾಗಿ ಮುಗಿಯುತ್ತೆ.

ಮಕ್ಕಳೊಡನೆ ಸಂಪರ್ಕ ಯಾವಾಗಲೂ ಸುಲಭವಲ್ಲ. ಆದರೆ ಪರಸ್ಪರ ಮಾತು ಕೇಳು ವುದು, ಸಮಯ ಸಾಂಗತ್ಯ, ಪ್ರೀತಿ, ಗೌರವ ಇವು ನೀವು ಮತ್ತು ನಿಮ್ಮ ಮಕ್ಕಳು ಒಬ್ಬರನ್ನೊಬ್ಬರು ಅರಿಯಲು ಸುಭದ್ರ ವಾದ ಅಡಿಪಾಯವನ್ನು ಉಂಟುಮಾಡು ತ್ತವೆ.

"ಸಾಫಲ್ಯವನ್ನು ಪಡೆದ ಹೆತ್ತವರು ಒಳ್ಳೆಯ ಅವಕಾಶವನ್ನು ಕಲ್ಪಿಸಿಕೊಡು ತ್ತಾರೆ."



ಸಕಲವನ್ನು ತಿಳಿದುಕೊಂಡ ಸರ್ವಜ್ಞನೆಂದು ಪೌರುಷ ಕೊಚ್ಚಿಕೊಳ್ಳುವವರಿಗೆ ಏನೂ ತಿಳಿದಿರುವುದಿಲ್ಲ. ಏಕೆಂದರೆ ಸರ್ವವನ್ನು ಅರಿತಿದ್ದರೂ ಅರಿಯ ದಂತಿರುವುದೇ ಸರ್ವಜ್ಞತನವೆಂದು ಅವರಿಗೆ ಗೊತ್ತಿಲ್ಲದಿರುವುದು. ಅಗ್ನಿಯ ಪ್ರಕೋಪ ಶಕ್ತಿ ಎಷ್ಟಾದರೂ ಅದು ಎಷ್ಟು ಶಾಂತ ! ಎಷ್ಟು ನಿಶಬ್ದ !

—ಅರ್ನಾಲ್ಡ್

ಜಗತ್ತಿನಲ್ಲಿ ಎಷ್ಟು ದುರ್ಜನರು ತುಂಬಿದ್ದಾರೆಂದು ನಿಟ್ಟುಸಿರಿಡಬೇಡಿರಿ. ನೀವು ಮೊದಲು ಸಜ್ಜನರಾಗಲು ಪ್ರಯತ್ನಿಸಿರಿ ಮತ್ತು ಆದರಿಂದ ಜಗತ್ತಿನ ದುರ್ಜನರ ಸಂಖ್ಯೆಯಲ್ಲಿ ಒಂದು ಕಡಿಮೆಯಾಯಿತೆಂದು ತಿಳಿಯಿರಿ.

—ಕಾರ್ಲೈಲ್

ಕೆಂಪು ಗುಲಾಬಿ

ಮಾಧವರಾವ್ ಮುಧೋಳ್

ಕೆಂಪು ಗುಲಾಬಿಯ ಹಿನ್ನೆಲೆಯಲ್ಲಿದ್ದ ಹೃದಯ ಸೌರಭ ಹೇಗೆ ಮಗುವನ್ನು ಪ್ರಭಾವಿಸಿತ್ತು !

ಪಿಂಕಿಗೆ ಎರಡೇ ಆಸೆಗಳಿದ್ದುವು. ಒಂದು ಗೊಂಬೆಯದು. ಇನ್ನೊಂದು ಹೂವಿನದು. ಎಷ್ಟೋ ಬಗೆಯ ಗೊಂಬೆಗಳನ್ನು ಅವಳ ತಂದೆ ತಾಯಿ, ಅವಳಿಗೆ ತಂದುಕೊಟ್ಟಿದ್ದರು. ವಿಧವಿಧವಾದ ಹೂವುಗಳನ್ನು ಅವಳೇ ಸ್ವತಃ ತನ್ನ ಕೈದೋಟದಿಂದ ಆರಿಸಿಕೊಳ್ಳುತ್ತಿದ್ದಳು. ಹೂವಿನ ಮಾಲೆಯನ್ನೂ ದಂಡೆಯನ್ನೂ ಹೆಣೆದು ಗೊಂಬೆಯನ್ನು ಅಲಂಕರಿಸುತ್ತಿದ್ದಳು. ಹೂವಿನ ತುರಾಯಿಗಳನ್ನು ಮಾಡಿ ಗೊಂಬೆಯ ಮನೆಯನ್ನು ಸಿಂಗರಿಸುತ್ತಿದ್ದಳು. ಮನೆಯ ಒಂದು ಮೂಲೆಯಲ್ಲಿ ಅವಳು ಒಂದು ಗೊಂಬೆಯ ಗೂಡನ್ನೇ ಕಟ್ಟಿದ್ದಳು. ಅದರಿಂದ ಯಾವಾಗಲೂ ಮಧುರವಾದ ಸುವಾಸನೆ ಸೂಸುತ್ತಿತ್ತು. ಬಣ್ಣಬಣ್ಣದ ಬಟ್ಟೆಗಳನ್ನು ತೊಟ್ಟು, ಗೊಂಬೆಗಳು ಸುಂದರವಾದ ಹೂವಿನ ಹಾಸಿಗೆಯ ಮೇಲೆ ಮಲಗಿರುತ್ತಿದ್ದುವು.

ಅವಳು ಪ್ರತಿ ಎರಡು ಮೂರು ದಿವಸಕ್ಕೊಮ್ಮೆ ಹೂವುಗಳನ್ನು ಬದಲಾಯಿಸುತ್ತಿದ್ದಳು. ಮನೆಯ ಕೈದೋಟದಲ್ಲಿ ಹೂವುಗಳು ಚೆನ್ನಾಗಿಅರಳುತ್ತಿದ್ದವು. ಅವುಗಳಿಂದ ಹತ್ತು ಹದಿನೈದು ಹೂಗಳನ್ನು ಬಿಡಿಸಿಕೊಂಡರೂ ಏನೂ ವ್ಯತ್ಯಾಸವಾಗುತ್ತಿರಲಿಲ್ಲ. ಅರಳಿದ ಹೂವು ಗೊಂಬೆ-ಮನೆ ಸೇರುತ್ತಿದ್ದುವು. ಆದರೆ ಹಿಂದಿನ ಒಂದು ವಾರದಿಂದ ಕೆಂಪು ಗುಲಾಬಿಯ ಒಂದೇ ಹೂವು ಮಾತ್ರ ಗೊಂಬೆಯ ಗೂಡನ್ನು ಅಂದವಾಗಿ ಶೋಭಿಸುತ್ತಿತ್ತು. ಹೂವೋ ಬಾಡಿ ಹೋಗಿತ್ತು. ಆದರೆ ಪಿಂಕಿ ಅದನ್ನು ಬಹಳ ಜೋಪಾನವಾಗಿ ಗೊಂಬೇಗೂಡಿನ ಒಂದು ಮೂಲೆಯಲ್ಲಿ ಇಟ್ಟಿದ್ದಳು. ಅವಳು ಗೆಳತಿಯರ ಜೊತೆ ಗೂಡಿನ ಹತ್ತಿರ ಕುಳಿತಾಗ ಆ ಹೂವನ್ನು ಆಗಾಗ ಎತ್ತಿ ಮೂಸಿ ನೋಡುತ್ತಿದ್ದಳು. ಮತ್ತೆ ಹಗುರವಾಗಿ ಬಹು ಪ್ರೀತಿಯಿಂದ ಅದನ್ನು ಅದರ ಸ್ಥಳದಲ್ಲಿ ಇಟ್ಟುಬಿಡುತ್ತಿದ್ದಳು.

ಅವಳ ಗೆಳತಿಯರು, "ಪಿಂಕಿ ! ಈ ಹೂವು ಈಗ ಬಾಡಿ ಹೋಗಿದೆ, ಒಗೆದು ಬಿಡು" ಅನ್ನುತ್ತಿದ್ದರು. ಅವಳು ತಕ್ಷಣ, "ಅರೆ ! ಇದೆಲ್ಲಿ ಬಾಡಿದೆ ? ನೋಡಿ ! ಇದರಲ್ಲಿ ಅದೆಷ್ಟು ಸುವಾಸನೆ ಇದೆ ?" ಎಂದು ಉತ್ತರ ಕೊಡುವಳು ಮತ್ತು ಆ ಗುಲಾಬಿಯನ್ನು, ಅವರಿಗೆ ಮೂಸಿನೋಡುವುದಕ್ಕೆ ಕೊಟ್ಟುಬಿಡುವಳು. ಗೆಳತಿಯರಿಗೆ ಅದರಲ್ಲಿ ಯಾವ

ಮೂಲ ಲೇಖಕರು : ಡಾ॥ ವಿನೇಕರ ಪ್ರದೀಪ.

ವಿಶೇಷ ಸುವಾಸನೆಯೂ ಬರುತ್ತಿರಲಿಲ್ಲ. ಅವರು ಮೂಗು ಮುರಿದು, ಹುಬ್ಬು ಏರಿಸಿ ಗುಲಾಬಿಯನ್ನು ಮರಳಿ ಅವಳಿಗೇ ಕೊಟ್ಟುಬಿಡುತ್ತಿದ್ದರು. ಆದರೆ ಪಿಂಕಿ, ಅವರ ಕೈಯಿಂದ ಆ ಗುಲಾಬಿಯನ್ನು ತೆಗೆದು ಕೊಂಡು ಮತ್ತೆ ಮೂಸಿ ನೋಡುವಳು. ಅತ್ಯಂತ ತೃಪ್ತಿಯಿಂದ ಕಣ್ಣು ಮುಚ್ಚಿ ಕೊಂಡು, "ಈ ಹೂವಂತೂ ಎಂದೆಂದಿಗೂ ಬಾಡುವುದೇ ಇಲ್ಲ—ಎಂದಿಗೂ ಇಲ್ಲ—ಹೂಂ" ಎಂದು ಹೇಳುವಳು.

ಪಿಂಕಿಯ ಸೋದರ ಟೋನಿ. ಅವನು ಅವಳಿಗಿಂತ ನಾಲ್ಕು ವರ್ಷ ದೊಡ್ಡವ. ಬಹಳ ತುಂಟ. ಅವನು ಎಷ್ಟೋ ಸಲ ಗೊಂಬೇ ಗೂಡನ್ನು ಹಾಳುಮಾಡಿದ್ದ. ಈ ಸಲ ಅವನು, ಅವಳ ಜೊತೆಗೆ ಜಗಳ ಮಾಡಿ ಕೊಂಡಾಗ ಸೇಡು ತೀರಿಸಿಕೊಳ್ಳಲು. ಅಲ್ಲಿಂದ ಎಲ್ಲ ಹೂಗಳನ್ನೂ ಎತ್ತಿಕೊಂಡಿದ್ದ. ಅದರಲ್ಲಿ ಆ ಕೆಂಪು ಗುಲಾಬಿಯ ಹೂವೂ ಇದ್ದಿತು.

ಪಿಂಕಿ ಸ್ಕೂಲಿನಿಂದ ವಾಪಸ್ಸು ಬರುತ್ತಲು ಗೊಂಬೆಗೂಡಿನ ಸ್ಥಿತಿಯನ್ನು ನೋಡಿದಳು. ಅವಳಿಗೆ ಆ ಕೆಂಪುಗುಲಾಬಿ ಕಾಣಲಿಲ್ಲ. ಆದರಿಂದ ಅವಳ ಮನಸ್ಸು ಧಸಕ್ ಎಂದಿತು. ಅಳುತ್ತ ತಾಯಿಯ ಬಳಿಗೆ ಹೋದಳು.

ತಾಯಿ ಅವಳಿಗೆ, "ಹೋಗು ! ಕೈದೋಟ ದಿಂದ ಬೇಕಾದಷ್ಟು ಹೂವುಗಳನ್ನು ಎತ್ತಿಕೊ. ಆ ರಾಕ್ಷಸ, ಈಗ ಎಲ್ಲಿಗೆ ಹೋಗಿದ್ದಾನೊ ! ಬರಲಿ !!" ಎಂದು ಸಮಾಧಾನ ಪಡಿಸಿದಳು.

ಆದರೆ ಪಿಂಕಿಯ ಕಣ್ಣೀರು ನಿಲ್ಲಲೇ ಇಲ್ಲ.

"ಮಮ್ಮಿ ! ಆ ಹೂವುಗಳೊಳಗೆ, ನನ್ನ ಆ ಕೆಂಪು ಗುಲಾಬಿ ಹೂವೂ ಇತ್ತು. ಈಗ ಅದು ಇಲ್ಲ." ಎಂದು ಅಳುತ್ತಲೇ ಹೇಳಿದಳು.

"ಹೋಗಲಿ ಬಿಡು ಮಗು ! ಆ ಕೆಂಪು ಗುಲಾಬಿ ಹೂವಿನ ಗಿಡ ನಮ್ಮ ಕೈದೋಟ ದಲ್ಲಿದೆ. ನೀನು ಅದರಲ್ಲಿಂದ ಹೂವು ಬಿಡಿಸಿಕೊ."

"ಇಲ್ಲಾ ಮಮ್ಮಿ !—ನನ್ನ ಆ ಹೂವು ....ನನಗೆ ಅದೇ ಹೂವು ಬೇಕು....ನನ್ನ ಆ ಹೂವನ್ನು ನನಗೆ ಕೊಡಿಸಿ ಬಿಡು, ಮಮ್ಮಿ. ಟೋನಿ ಅದನ್ನು ಎಲ್ಲೋ ಬೇಕೆಂದೇ ಮುಚ್ಚಿಟ್ಟಿದ್ದಾನೆ," ಎಂದು ದುಃಖಿಸಿದಳು. ಪಿಂಕಿಯ ಅಳುವು ನಿರಂತರ ನಡೆದೇ ಇತ್ತು.

"ಉಫ್ ! ಎಷ್ಟೊಂದು ಕೆಂಪು ಗುಲಾಬಿ ಹೂ ಸುರಿದಿವೆ....ಬಿಡಿಸಿಕೊಳ್ಳಬಾರದೇನೆ ? ....ಅದರಲ್ಲಿ ಒಂದನ್ನು ?...."

ಪಿಂಕಿ ಏನೂ ಉತ್ತರ ಕೊಡಲಿಲ್ಲ.... ಅಳುತ್ತಲೇ ಇದ್ದಳು....ಅಳು ನಿಲ್ಲಲೇ ಇಲ್ಲ.

"ಸಾಕು ! ಸುಮ್ಮನಾಗು ಮಗು !.... ಹೂಂ....ಸುಮ್ಮನಾಗು....ತಾಳು ! ನಾನೇ ಕೆಂಪು ಗುಲಾಬಿ ಕಿತ್ತುಕೊಂಡು ಬರುತ್ತೇನೆ." ಅವಳ ತಾಯಿಗೆ ಪಿಂಕಿಯ ಅಳುವಿನಿಂದ ಚಡಪಡಿಕೆಲಯಿತು. ಅವರು ಎದ್ದು ಕೈದೋಟಕ್ಕೆ ಹೋದರು. ರಾಶಿರಾಶಿಯಾಗಿ ಕೆಂಪು ಗುಲಾಬಿ ಹೂಗಳನ್ನು ಕಿತ್ತು ತಂದರು. ಪಿಂಕಿಯ ಎದುರಿಗೆ ಸುರಿದು, ತಮ್ಮ ಕೆಲಸ ದಲ್ಲಿ ನಿರತರಾದರು.

ತಾಯಿಯಂತೂ ತಮ್ಮ ಕೆಲಸದಲ್ಲಿ ತೊಡಗಿದರು. ಆದರೆ ಪಿಂಕಿ ಅಲ್ಲೇ ಕುಳಿತು ಬಿಕ್ಕಿಬಿಕ್ಕಿ ಅಳುತ್ತಿದ್ದಳು. ಕೆಂಪು ಗುಲಾಬಿ ಹೂಗಳು ಹತ್ತಿರವೇ ಬಿದ್ದಿದ್ದವು. ಆದರೆ ಅವಳು ಅವನ್ನು ಮುಟ್ಟಲೂ ಇಲ್ಲ. ಅತ್ತು ಅತ್ತು ಕಣ್ಣು ಊದಿಕೊಂಡವು....ಸ್ವಲ್ಪ ಸಮಯದ ಅನಂತರ ಅವಳ ತಾಯಿ ಅಲ್ಲಿಗೆ ಬಂದರು. ಇನ್ನೂ ಅವಳು ಅಳುತ್ತಿದ್ದುದನ್ನು ಕಂಡು ಅವರಿಗೆ ಆಶ್ಚರ್ಯವಾಯಿತು.

ಅವಳು ಈ ರೀತಿ ಅತ್ತುದನ್ನು ಅವರು ಎಂದೂ ನೋಡಿರಲಿಲ್ಲ. ಅವಳು ಯಾವಾಗಲೂ ನಗುನಗುತ್ತ ಆಡುತ್ತಿದ್ದಳು. ಈಗ ಅವಳು ಎರಡನೇ ವರ್ಗದಲ್ಲಿ ಓದುತ್ತಿದ್ದಳು. ಅವಳ ಟೀಚರ್ ಕೂಡ ಪಿಂಕಿ ಯಾವಾಗಲೂ ಹಸನ್ಮುಖಿಯೆಂದು ಹೇಳುತ್ತಿದ್ದರು. ಅವಳು ಹೀಗೆ ಅಳುತ್ತಿದ್ದುದನ್ನು ಕಂಡು, ಅವಳ ತಾಯಿಗೆ ದುಃಖವಾಯಿತು. ಜೊತೆಗೆ ಸಿಟ್ಟೂ ಬಂದಿತು. ಆ ಒಣಗಿ ಹೋದ ಹೂವಿಗೆ ಇದೇನು ಇಷ್ಟು ರಾದ್ಧಾಂತ? ಎಂದುಕೊಂಡರು.

ಅದೇ ಸಮಯಕ್ಕೆ, ಪಕ್ಕದ ಮನೆಯ ಪಿಂಕಿಯ ಗೆಳತಿ, ಲಿಲ್ಲಿ, ಬಂದಳು....ಪಿಂಕಿ ಅವಳನ್ನು ಗೊಂಬೆಯಾಟಕ್ಕೆಂದು ಕರೆದಿದ್ದಳು.

ಪಿಂಕಿ ಅಳುತ್ತಿದ್ದುದನ್ನು ಕಂಡು ಕಕ್ಕಾಬಿಕ್ಕಿಯಾಗಿ ಅವಳ ಹತ್ತಿರ ಕುಳಿತಳು. ಪಿಂಕಿಯ ತಾಯಿ, "ನೋಡು ಲಿಲ್ಲಿ! ಒಂದು ಒಣಗಿ ಬಾಡಿಹೋದ ಹೂವಿಗಾಗಿ ಅಳುತ್ತಿದ್ದಾಳೆ. ಒಂದು ಕೆಂಪು ಗುಲಾಬಿ ಹೂವು ಗೊಂಬೆಗೂಡಿನಲ್ಲಿ ಇಟ್ಟಿತ್ತು. ಟೋನಿ ಅದನ್ನು ಎಲ್ಲೋ ಬಿಸಾಕಿದ....ಇವಳೋ ಅಳುತ್ತಲೇ ಇದ್ದಾಳೆ" ಎಂದರು.

"ಅರೆ! ಆ ಗುಲಾಬಿ ಹೂವೇ!!...." ಲಿಲ್ಲಿ ಪಿಂಕಿಯ ಕಡೆಗೆ ನೋಡುತ್ತ ಹೇಳಿದಳು. "ಆಂಟಿ! ಅವನ್ನು ಇವಳಿಗೆ ಪ್ರಧಾನ ಮಂತ್ರಿ ಇಂದಿರಾಗಾಂಧಿ ಕೊಟ್ಟಿದ್ದರು ಹೋದವಾರ ಇಂದಿರಾ ಗಾಂಧಿ ನಮ್ಮಲ್ಲಿಗೆ ಬಂದಿದ್ದಾಗ ಸ್ಕೂಲಿನ ಮಕ್ಕಳು, ಅವರ ಕೊರಳಿಗೆ ಹೂವಿನಮಾಲೆ ಹಾಕಿದ್ದರು.... ನಮ್ಮ ಕ್ಲಾಸಿನವರು, ಅವರಿಗೆ ಹೂವಿನ ತುರಾಯಿ ಅರ್ಪಿಸಿದ್ದೆವು. ಎದುರಿಗೆ ನಿಂತ ಹುಡುಗಿಯರುಗಳಲ್ಲಿ ಪಿಂಕಿಯೂ ಇದ್ದಳು ....ಇಂದಿರಾ ಗಾಂಧಿಯವರು ಆ ಹುಡುಗಿಯರಲ್ಲಿ ಅನೇಕರಿಗೆ ಹೂವುಗಳನ್ನು ಕೊಟ್ಟರು. ಪಿಂಕಿಗೆ ಆ ಕೆಂಪು ಗುಲಾಬಿ ಹೂವನ್ನು ಕೊಟ್ಟಿದ್ದರು....ಅದೇ ಆ ಕೆಂಪು ಗುಲಾಬಿ ಹೂವನ್ನೇ ಪಿಂಕಿ, ಗೊಂಬೆಗೂಡಿನಲ್ಲಿ ಇಟ್ಟಿರುತ್ತಿದ್ದಳು.

"ಓಹೊ! ಹೀಗೋ ಸಂಗತಿ!!", ಈಗ ತಾಯಿಗೂ ಆ ಹೂವು ಕಳೆದುದಕ್ಕೆ ದುಃಖವಾಯಿತು. ಅವರು ಪಿಂಕಿಯನ್ನು ಹತ್ತಿರ ಎಳೆದು ತಬ್ಬಿಕೊಂಡರು. ಪ್ರೀತಿಯಿಂದ, "ಹೌದೆ?....ಆ ಹೂವೆ ಅದು? ಎಂದು ಕೇಳಿದರು.

ಪಿಂಕಿ ಕಣ್ಣುತುಂಬ ನೀರು ತುಂಬಿ ತಾಯಿಯನ್ನು ನೋಡಿದಳು. ಹೌದು ಎಂದು ತಲೆಯಾಡಿಸಿದಳು. ಅದೇ ಸಮಯಕ್ಕೆ ಟೋನಿ ಆಟ ಮುಗಿಸಿ ಮನೆಗೆ ಬಂದ.. ತಾಯಿಯ ಕಣ್ಣಿನಲ್ಲಿ ಸಿಟ್ಟನ್ನೂ, ಪಿಂಕಿಯ ಕಣ್ಣುತುಂಬ ನೀರನ್ನು ನೋಡಿ, ಕೂಡಲೇ, "ಅಮ್ಮಾ! ನಾನು ಆ ಎಲ್ಲಾ ಹೂವುಗಳನ್ನು ಕಪಾಟಿನಲ್ಲಿಟ್ಟಿದ್ದೆ" ಎಂದು ಹೇಳಿ, ಒಳಗೆ ಓಡಿ ಹೋಗಿ ಆ ಎಲ್ಲ ಹೂಗಳನ್ನು ಒಂದು ಚೀಲದಲ್ಲಿ ತುಂಬಿಕೊಂಡು ತಂದು ಎದುರಿಗಿರಿಸಿದನು.

ಪಿಂಕಿ ಥಟ್ಟನೆ ಕೆಂಪು ಗುಲಾಬಿಯ ಆ ಹೂವನ್ನು ಎತ್ತಿಕೊಂಡಳು. ಅದನ್ನು ತನ್ನ ಎದೆಗೆ ಒತ್ತಿಕೊಂಡಳು....ಕೆಂಪು ಗುಲಾಬಿಯ ಆ ಹೂವು ಬಾಡಿ ಹೋಗಿದ್ದರೂ, ಒಣಗಿ ಹೋಗಿದ್ದರೂ, ಮನೆಯಲ್ಲಿ ಕಂಪು ಬೀರ ತೊಡಗಿತು.

ಕನ್ನಡ ಮತ್ತು ಹರಪ್ಪಾ ಸಂಸ್ಕೃತಿ

ಡಾ|| ಡಿ. ಆರ್. ಗೋವಿಂದರಾಜು

ಇಂಡೋ-ಯೂರೋಪಿಯನ್ ಜನಾಂಗದವರು ಭಾರತಕ್ಕೆ ಬರುವ ಮುನ್ನ ಹರಪ್ಪಾ ಸಂಸ್ಕೃತಿಯು ಸಿಂಧೂ ನದಿ ತೀರದಲ್ಲಿ ಅಭಿವೃದ್ಧಿಯಾಗಿತ್ತೆಂದು ಎಲ್ಲರಿಗೂ ತಿಳಿದ ವಿಷಯ. ಆದರೆ, ಹರಪ್ಪಾ ಸಂಸ್ಕೃತಿಯನ್ನು ಅಂಕುರಿಸಿ ಬೆಳೆಸಿದ ಜನಾಂಗದವರಿಗೆ ಏನಾಯಿತು ಎನ್ನುವ ಅಂಶದ ಬಗ್ಗೆ ಅನೇಕ ಪ್ರಶ್ನೆಗಳೂ ಮತ್ತು ವಾದಗಳೂ ಇವೆ. ಅವುಗಳಲ್ಲಿ ಈ ಕೆಳಕಂಡವು ಮುಖ್ಯವಾದವುಗಳು: ೧) ಹೊಸದಾಗಿ ಬಂದ ಜನಾಂಗ ಹರಪ್ಪಾ ಸಂಸ್ಕೃತಿಯ ಜನರನ್ನು ಸಂಪೂರ್ಣವಾಗಿ ನಾಶಮಾಡಿದರು. ೨) ಹೊಸ ಜನಾಂಗದವರು ಹಿಂದೆ ನೆಲೆಸಿದ್ದ ಹಳೆಯ ಜನಾಂಗವನ್ನು ಸ್ಥಳ ಪಲ್ಲಟಗೊಳಿಸಿದರು ಮತ್ತು ೩) ಈ ಹೊಸ ಜನಾಂಗದವರು ಹಳೆಯ ಅಂದರೆ ಹರಪ್ಪಾ ಸಂಸ್ಕೃತಿಯ ಜನರೊಡನೆ ವಿಲನಗೊಂಡು ಹೊಸ ಸಂಸ್ಕೃತಿಯನ್ನೇ ಬೆಳೆಸಿದರು. ಈ ಮೂರು ವಾದಗಳಲ್ಲಿ ಕೊನೆಯ ಎರಡು ವಾದಗಳಿಗೆ ಸಾಕಷ್ಟು ಪುಷ್ಟಿ ನೀಡುವ ವಿವರಣೆಗಳಿವೆ. ಈ ಪ್ರಶ್ನೆ-ವಾದಗಳಲ್ಲಿ ಇನ್ನೊಂದು ಮುಖ್ಯವಾದ ವಿಷಯವೆಂದರೆ, ಇಂಥ ಉತ್ಕೃಷ್ಟ ಸಂಸ್ಕೃತಿಯನ್ನು ಬೆಳೆಸಿದ್ದ ಜನರು, ಭಾಷೆಗಳನ್ನೂ ಬಳಸಿರಬಹುದು—ಸಂಸ್ಕೃತಿಗೆ ಭಾಷೆ ಮುಖ್ಯವಲ್ಲವೇ? ಹಾಗಿದ್ದಲ್ಲಿ ಆ ಭಾಷೆ ಯಾವುದು ಎಂಬುದು ಇನ್ನೂ ಜಟಿಲ ಪ್ರಶ್ನೆಯಾಗಿಯೇ ಉಳಿದಿದೆ.

ಈ ದೃಷ್ಟಿಯಿಂದ ಈಜಿಪ್ಟ್, ಮೆಸಪೊಟೇಮಿಯಾ, ಇರಾನ್ ಮತ್ತು ಹರಪ್ಪಾ ಸಂಸ್ಕೃತಿಯ ಮೇಲೆ ಸುಮಾರು ಐವತ್ತು ವರ್ಷಗಳ ಕಾಲ ಭೂ ಉತ್ಕತನ ಸಂಶೋಧನೆಗಳನ್ನು ನಡೆಸಿ, ಅವುಗಳನ್ನು ಹೋಲಿಸಿ, ನಂತರ ಫಲಿಸಿರುವ ಆಧಾರಗಳನ್ನು 'ಹರಪ್ಪಾ ಸಂಸ್ಕೃತಿ ಮತ್ತು ಅಲ್ಲಿಯ ಬರವಣಿಗೆ' ("The Harappan Civilisation and its writing" ೧೯೯೨) ಎನ್ನುವ ಪುಸ್ತಕದಲ್ಲಿ ಪ್ರೊ|| ವಾಲ್ಟರ್ ಎ. ಫೇರ್‌ಸರ್ವಿಸ್‌ರವರು ಮಂಡಿಸಿರುತ್ತಾರೆ. ಜೊತೆಗೆ ಆ ಪುಸ್ತಕದಲ್ಲಿರುವ ಹಲವು ಅಭಿಪ್ರಾಯಗಳನ್ನು ಈ ಬರಹಗಾರನ ಜೊತೆಯಲ್ಲೂ ಹೇಳಿರುತ್ತಾರೆ. ಕನ್ನಡಿಗರಿಗೆ ಮತ್ತು ಮುಂದಿನ ಸಂಶೋಧಕರಿಗೆ ಉಪ

FAIRSERVIS, WALTER A. 1992. The Harappan civilisation and its writing : A model for the decipherment of the Indus script. Oxford & IBH Publishing Co, Pvt. Ltd. New Delhi. 239 pp.

ಯೋಗವಾಗಬಹುದೆಂಬ ಭರವಸೆಯಿಂದ ಪ್ರೊ|| ಫೇರ್‌ಸರ್ವಿಸ್‌ರವರ ಎರಡು ಮುಖ್ಯ ಅಭಿಪ್ರಾಯಗಳ ಸ್ಥೂಲ ಭಾಷಾಂತರವನ್ನು ಈ ಕೆಳಗೆ ನೀಡಿದ್ದೇನೆ. ೧) "ಕನ್ನಡ ಮತ್ತು ತುಳುಗಳಲ್ಲಿರುವ ಸೂಕ್ಷ್ಮ ಭಾಷಾ ಸಂಜ್ಞೆಗಳು (Lexemes) ತಮಿಳಿನಲ್ಲಿರುವ ಭಾಷಾ ಸಂಜ್ಞೆಗಳಿಗಿಂತಲೂ ಹಳೆಯವಿರಬಹುದು ಎನ್ನುವ ಕುತೂಹಲಕಾರಿಯಾದ ಸಾಧ್ಯತೆ ಇದೆ" (ಪುಟ ೧೭); ೨) "ತುಳು ಮತ್ತು ಕನ್ನಡ ಅದರಲ್ಲೂ ಮುಖ್ಯವಾಗಿ ತುಳು ಭಾಷಾ ಸಂಜ್ಞೆಗಳು, ಹರಪ್ಪಾ ಭಾಷಾ ಸಂಜ್ಞೆಗಳನ್ನು ಬಹು ಚೆನ್ನಾಗಿ ಹೊಂದಿಕೊಳ್ಳುತ್ತವೆ........ಈ ಎರಡು ಭಾಷೆಗಳು (ಅಂದರೆ ತುಳು ಮತ್ತು ಕನ್ನಡ) ಪರಸ್ಪರ ಹೋಲುವ ಭಾಷಾ ಸಂಜ್ಞೆಗಳನ್ನು ಹೊಂದಿರುವುದಲ್ಲದೇ, ಪಶ್ಚಿಮ ಭಾರತದಲ್ಲಿ ಹರಪ್ಪಾ ಸಂಸ್ಕೃತಿ ಇಳಿದಿರಬಹುದಾದ ಭೂಭಾಗದಲ್ಲಿರುವುದು ಈ ಅಧ್ಯಯನಕ್ಕೆ ಬಹು ಮುಖ್ಯವಾಗಿವೆ." (ಪುಟ ೨೨)

ಪ್ರೊ|| ಫೇರ್‌ಸರ್ವಿಸ್‌ರವರು ಅವರ ವಾದಗಳನ್ನು ಅನೇಕ ನಿದರ್ಶನಗಳನ್ನು ನೀಡಿ ಸಮರ್ಥಿಸಿದ್ದಾರೆ. ಈ ವಾದಗಳನ್ನು ಮತ್ತೊಂದು ಊಹಾಪೋಹವೆಂದು ಓದುಗರು ಭಾವಿಸಕೂಡದು. ಇವರೊಬ್ಬ ತುಂಬ ನುರಿತ ಹಾಗೂ ಗೌರವಾನ್ವಿತ ವಿಜ್ಞಾನಿ; ಅವರ ಅಭಿಪ್ರಾಯಗಳನ್ನು ಓದುಗರು ಗಂಭೀರವಾಗಿ ಪರ್ಯಾಲೋಚಿಸಬೇಕು. ಆಸ್ಥೆಯುಳ್ಳವರು, ಮತ್ತು ಸಂಶೋಧಕರು ಮೇಲ್ಕಂಡ ಪುಸ್ತಕವನ್ನು ಸೂಕ್ಷ್ಮವಾಗಿ ಅಭ್ಯಸಿಸಬಹುದು. ಕೊನೆಯದಾಗಿ, ಪ್ರೊ|| ಫೇರ್‌ಸರ್ವಿಸ್‌ರವರ ಸಂಶೋಧನೆಗಳು ಮತ್ತು ವಾದಗಳು ದೃಢೀಕರಿಸಲ್ಪಟ್ಟರೆ, ಕನ್ನಡ ಭಾಷೆ ಮತ್ತು ಕನ್ನಡಿಗರಿಗೆ ಕೇವಲ ೨೦೦೦ ವರ್ಷಗಳಲ್ಲ....ಸುಮಾರು ೫೦೦೦ ವರ್ಷಗಳ ಇತಿಹಾಸವಿದೆ ಎನ್ನುವ ಅಂಶವನ್ನು ಪ್ರತಿಷ್ಠಾಪಿಸುವಂತಾಗುತ್ತದೆ.



ಮನುಷ್ಯನು ಇತರರ ತಪ್ಪುಗಳನ್ನು ಕಂಡುಹಿಡಿಯುವದರಲ್ಲಿಯೇ ನಿರತನಾಗಿರುತ್ತಾನೆ. ತನ್ನ ತಪ್ಪುಗಳನ್ನು ತಿದ್ದಿಕೊಳ್ಳುವದಕ್ಕೆ ಸ್ವಲ್ಪ ವೇಳೆಯನ್ನಾದರೂ ವಿನಿಯೋಗಿಸಲಾರನೇಕೆ? ಇತರರ ಸುಗುಣಗಳನ್ನು ಕಂಡು ಸಂತೋಷಪಡಿರಿ. ನಿಮ್ಮ ತಪ್ಪುಗಳನ್ನು ಕೂಡಲೇ ಮನದಂದು ತಿದ್ದಿಕೊಳ್ಳಿರಿ. ಇದೇ ನಿಮ್ಮ ಯೋಗ್ಯತೆಯನ್ನು ಹೆಚ್ಚಿಸುವ ಸುಲಭ ಸಾಧನ.

—ಭಗವಾನ್ ಬುದ್ಧ

ಪುಸ್ತಕ ಪರಿಚಯ

ಹಾಲತಿ ಸೋಮಶೇಖರ್*

ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು—ಲೇಖಕರು : ಕೆ. ಪಿ. ಪೂರ್ಣಚಂದ್ರತೇಜಸ್ವಿ. ಪ್ರಕಾಶಕರು : ಪುಸ್ತಕ ಪ್ರಕಾಶನ, ೯೧, ೯ನೇ ಮೇನ್ ಸರಸ್ವತಿಪುರಂ, ಮೈಸೂರು-೫೭೦೦೦೯. ಪುಟಗಳು-೧೦೧, ಬೆಲೆ-೩೬ರೂ. ಮೊದಲ ಮುದ್ರಣ ೧೯೯೩.

ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು ಪೂರ್ಣಚಂದ್ರತೇಜಸ್ವಿ ಅವರ ಕಥಾ ಸಂಕಲನ. ನೂರು ಪುಟಗಳ ವಿಸ್ತಾರದಲ್ಲಿ ಹರಡಿಕೊಂಡಿರುವ ಹದಿನೇಳು ಕಥೆಗಳು ಇದರಲ್ಲಿವೆ. ಕಥೆಗಳಿಗೆ ಪೂರಕವಾಗುವಂತೆ ಪ್ರಾಣಿ, ಪಕ್ಷಿ, ಕ್ರಿಮಿ, ಕೀಟಗಳ ಸುಂದರ ಚಿತ್ರಗಳನ್ನು ಪ್ರತಿಯೊಂದು ಕಥೆಯಲ್ಲಿಯೂ ಕೊಡಲಾಗಿದೆ. ಅದ್ಭುತ ಜಗತ್ತು ಸರಣಿಯಲ್ಲಿ ಈ ಕಥೆಗಳು ಪ್ರಕಟವಾಗಿವೆ.

ಸೃಜನಶೀಲ ಚೇತನವೊಂದು ನಿಸರ್ಗದ ಸೋಜಿಗಗಳನ್ನು ಅತ್ಯಂತ ಬೆರಗುಗಣ್ಣಿನಿಂದ ಅವಲೋಕಿಸಿ, ತೆರೆದ ಮನಸ್ಸಿನಿಂದ ಗ್ರಹಿಸುವ ಪ್ರಕ್ರಿಯೆ (Process) ಈ ಕಥೆಗಳಲ್ಲಿ ಕಂಡುಬರುತ್ತದೆ. ನಿಸರ್ಗದ ನಿಗೂಢಗಳನ್ನು ಕುರಿತು ಕುತೂಹಲದಿಂದ ಅನ್ವೇಷಣೆಗೆ ತೊಡಗಿದಂತೆಲ್ಲಾ ಅಪರೂಪದ ಅನುಭವ ವಲಯ ನಮ್ಮ ಮುಂದೆ ತೆರೆದುಕೊಳ್ಳುತ್ತದೆ. ಹೀಗೆ ದಕ್ಕಿದ ಅನುಭವಗಳನ್ನು ಅನುಭವಿಸಿದ ಬಗೆಯಲ್ಲಿಯೇ ಅಭಿವ್ಯಕ್ತಿಸುವಾಗ ತಮ್ಮ ವಿಸ್ತಾರ ಓದನ್ನು ಜೊತೆಯಲ್ಲಿಯೇ ಕಾಣಿಸಿ ಕಥೆಯಾಗಿಸುವ ಕಲೆ ಪೂಚಂತೇ ಅವರದು. ಅವರು ಈ ಕಥೆಗಳ ಮೂಲಕ ಪ್ರಕೃತಿಯಲ್ಲಿ ಹುದುಗಿರುವ ವಿಪುಲವಾದ ಜ್ಞಾನ ಸಂಪತ್ತಿನ ಕಡೆಗೆ, ಅದರ ಅಪಾರ ಸಾಧ್ಯತೆಗಳ ಕಡೆಗೆ ಬೆರಳುಮಾಡಿ ತೋರಿಸಿದ್ದಾರೆ.

"ಈ ಕಥೆಗಳು, ಈ ಕಥಾ ವಿಧಾನ ಇವೆಲ್ಲಕ್ಕೂ ಮುಖ್ಯ ಕಾರಣ ನನ್ನ ಇಬ್ಬರು ಮಕ್ಕಳು. ಸುಸ್ಮಿತ, ಈಶಾನ್ಯೆ ಅವರಿಗೆ ಚಿಕ್ಕಂದಿನಲ್ಲಿ ಅವರು ಕಂಡ ಕೌತುಕಗಳನ್ನು ಮನದಟ್ಟಾಗುವಂತೆ ಹೇಳುತ್ತಾ ಹೇಳುತ್ತಾ ರೂಪುಗೊಂಡ ಸಂಗತಿಗಳಿವು" ಎಂಬ ಮಾತುಗಳನ್ನು ಲೇಖಕರು ಹೇಳುತ್ತಾರೆ. ಇವು ಮಕ್ಕಳ ಕಥೆಗಳು ಎಂದು ಲೇಖಕರೇ ಹೇಳಿಕೊಂಡಿದ್ದರೂ, 'ಒಂದು ಝರಿಯ ಜಾಡಿನಲ್ಲಿ', 'ಹಾವು ಮೀನಿನ ಪ್ರಚಂಡಯಾನ', 'ಚೀಂಕ್ರಮೇಸ್ತ್ರಿ' ಮುಂತಾದ ಕಥೆಗಳು ಮಕ್ಕಳ ಸಂವೇದನೆಯನ್ನು ಮೀರಿ ಪ್ರೌಢ

ಜ್ಞಾನಾಸಕ್ತರ ಬುದ್ಧಿಕೋಶವನ್ನು ಮೀಟುತ್ತವೆ. 'ಅಕ್ಕನಮ್ಮ ಹೇಳಿದ ಕಥೆ'ಯಲ್ಲಿ ದಂತಕಥೆ ಕೇಳಿದಂತೆ ಕೇವಲ ನಿರೂಪಕನಾಗಿ ಲೇಖಕ ಕಾಣಿಸಿಕೊಂಡರೂ "ಸಿದ್ದೇಗೌಡರ ಮನೆ ಉದ್ಧಾರಕ್ಕೆ ಕಾರಣವಾಗುವುದು ಬೇಟೆಗಾರರಿಂದ ತಪ್ಪಿಸಿಕೊಳ್ಳಲು ತಾಯಿಜಿಂಕೆ ತನ್ನ ಮರಿಯೊಂದಿಗೆ ಬಂದು ಮನೆಯಲ್ಲಿಯೇ ರಕ್ಷಣೆಪಡೆದು ರಕ್ಷಿಸಿದ ಮಂಜಮ್ಮನಿಗೆ ಮಾಡಿದ ಆಶೀರ್ವಾದದ ಪರಿಣಾಮ" —ಎನ್ನುವಾಗ, ಕಥೆಗಾರರ ಕೇಂದ್ರಪ್ರಜ್ಞೆ ಯಾವು ಯಾವುದೋ ಕಾರಣಕ್ಕೆ ಅಳಿಯುತ್ತಿರುವ ಪ್ರಾಣಿ ಸಂಕುಲದ ಬಗೆಗಿರುವ ಅಪಾರ ಕಳಕಳಿ ಕೆಲಸ ಮಾಡುತ್ತಿರುವುದು ವ್ಯಕ್ತವಾಗುತ್ತದೆ.

ಹಾವು, ಮೀನು, ಏಡಿ, ಬಾವಲಿ, ಹಕ್ಕಿ, ಕೀಟ, ಹಲ್ಲಿ, ಆಮೆ ಇತ್ಯಾದಿಗಳ ಜೀವನಕ್ರಮವನ್ನು ಕುರಿತು ಬರೆದಿರುವ 'ಒಂಟಿಹುಳು, ಕೀಟ ಶಿಲ್ಪಿಗಳು, ಏರೋಪ್ಲೇನ್ ಚಿಟ್ಟೆ, ಬಾವಲಿ, ಸರ್ಪದೃಷ್ಟಿ, ಚೀಂಕ್ರ ಮೇಸ್ತ್ರಿ ಮತ್ತು ಅರಿಸ್ಟಾಟಲ್ ಮುಂತಾದ ಕಥೆಗಳು ಉತ್ತಮ ಕತೆಗಳೆನಿಸಲು ಕಾರಣ ಅವು ಕೇವಲ ಪ್ರಾಣಿ, ಪಕ್ಷಿಗಳ ಜೀವನಚರಿತ್ರೆಗಳಾಗಿಲ್ಲದಿರುವುದರಿಂದ. ನಮ್ಮ ಪರಿಸರದ ಅನೇಕ ಜೀವಿಗಳ ಲಕ್ಷಣ, ಸ್ವಭಾವ, ಆಹಾರಕ್ರಮ, ಅವು ಬದುಕಲು ನಡೆಸುವ ತಂತ್ರಗಳನ್ನೆ ಅತ್ಯಂತ ಆಪ್ತವಾಗಿ ಬರೆಯುವ ಪೂಚಂತೇ ಅವರು ತಮ್ಮ ಅಧ್ಯಯನ, ಚಿಂತನೆ ಮತ್ತು ಅನುಭವಗಳನ್ನು ಜೀವನದ ಸಂದರ್ಭದೊಂದಿಗಿಟ್ಟು ವಿಶ್ಲೇಷಿಸುತ್ತಾರೆ. ನಾನು ವಿಜ್ಞಾನಿಯಲ್ಲ ಎಂದು ಹೇಳುತ್ತಲೇ ವಿಜ್ಞಾನಿಯ ಸೂಕ್ಷ್ಮಪ್ರಜ್ಞೆಯನ್ನು ತೋರುತ್ತಾ ಮಕ್ಕಳಿಗೆ ಮತ್ತು ದೊಡ್ಡವರಿಗೆ ಏಕಕಾಲದಲ್ಲಿ ಪರಿಸರ ವಿಜ್ಞಾನವನ್ನು ಬೋಧಿಸುತ್ತಾರೆ. ತಮ್ಮ ಕೃತಿಯ ಮೂಲಕ. ನಮ್ಮ ಮಕ್ಕಳನ್ನು ತಮ್ಮೊಡಹುಟ್ಟಿದ ಅಸಂಖ್ಯ ಜೀವ ರಾಶಿಗಳ ನಡುವೆ ಗುರುತಿಸುವ ಮಹತ್ವದ ಪ್ರಯತ್ನವನ್ನು ಮಾಡಿದ್ದಾರೆ.

ಡಾ|| ರಮಹತ್ ತರೀಕೆರೆಯವರು ಈ ಕೃತಿ ಕುರಿತು ಆಡಿರುವ ಮಾತುಗಳು ಮೌಲ್ಯಯುತವಾಗಿವೆ. "ಪ್ರಾಣಿ ಪಕ್ಷಿಗಳ ಬಗ್ಗೆ ಎಲ್ಲೆಲ್ಲಿಂದಲೋ ಓದಿ ಸಂಗ್ರಹಿಸಿದ ಸಂಗತಿಗಳನ್ನು ರೋಚಕವಾಗಿ ಮಂಡಿಸುವಾಗ ತೇಜಸ್ವಿಯವರ ಬರಹಗಳು ಮುಖ್ಯವಾಗುವುದಿಲ್ಲ, ಬಾಳಿನ ಕಥನಗಳಾಗುವುದಿಲ್ಲ; 'ಕಲಿತ' ಅರಿವನ್ನು 'ಪಡೆ'ದ ಅನುಭವಗಳ ಜತೆ ಬೆಸೆದು, ತಮ್ಮ ಸುತ್ತಲೂ ಇರುವ ಸಮಸ್ತ ಜೀವಿಗಳ ದುಃಖದುಮ್ಮಾನಗಳ ಜತೆ ಸೇರಿಸಿಕೊಂಡು ಬರೆಯುವಾಗ, ಅವರ ಬರಹಗಳು ಜೀವಿಗಳ ಕಥನಗಳಾಗುತ್ತವೆ. ಉದಾ : ಸರ್ಪದ ದೃಷ್ಟಿ ಕುರಿತ ಬರಹವು ಸರ್ಪಕುರಿತ ವಿಜ್ಞಾನದ ಪ್ರಬಂಧವಾಗಿದೆ. ಆದರೆ ಹಾವು ಮೀನುಗಳನ್ನು ಕುರಿತ ಬರಹವು ಕೇವಲ ಹಾವು ಮೀನುಗಳ ಮೇಲಿನ ಪ್ರಬಂಧವಾಗಿಲ್ಲ; ಜೀವಿಗಳ ಬಾಳಿನ ಕಥನವೂ ಆಗಿದೆ. ಯಾಕೆಂದರೆ ಅಲ್ಲಿ ಹಾವು ಮೀನಿನಿಂದ ಮಗನನ್ನು ಕಳೆದುಕೊಂಡ ಚೀಂಕ್ರನ ದುಃಖವಿದೆ. ವಿಜ್ಞಾನವನ್ನು ಮಾನವೀಕರಣಗೊಳಿಸುವ ಈ ಬಗೆಯ ಬರೆವಣಿಗೆ ಕನ್ನಡ ಸಾಹಿತ್ಯದಲ್ಲಿ ಅಪೂರ್ವವಾಗಿದೆ. "ಕರ್ವಾಲೋ" ನಮ್ಮ ಮಹತ್ವದ ಕೃತಿಯಾಗಿರುವುದು ಕೇವಲ ಹಾರುವ ಓತಿಯ ಕಥನವಲ್ಲದ ಕಾರಣಕ್ಕೆ ತಾನೇ ?

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

1. ಕೃ. ನಾಗರಾಜರಾಯ, "ಕುಮಾರವ್ಯಾಸ ಗುರುಕುಲ" 1315, 4ನೇ ವೆಸ್ಟ್ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು–570 004.
2. ಜಿ. ಟಿ. ನಾರಾಯಣರಾವ್, ನಂ. ೮ "ಅತ್ರಿ" ಕಾಮಾಕ್ಷಿ ಆಸ್ಪತ್ರೆ ರಸ್ತೆ, ಕುವೆಂಪುನಗರ, ಮೈಸೂರು–570 023.
3. ಸಿ. ನಾಗಣ್ಣ, ಪ್ರಾಧ್ಯಾಪಕರು, ನಂ. ಎಲ್. 10, ವಿಶ್ವವಿದ್ಯಾನಿಲಯ ವಸತಿಗಳು ಮಾನಸಗಂಗೋತ್ರಿ ಕ್ಯಾಂಪಸ್, ಮೈಸೂರು–6
4. ಟಿ. ಆರ್. ನಾಗಪ್ಪ, ನಂ. 2904, ಚಾಮುಂಡಿಪುರಂ, ಮೈಸೂರು–4
5. ಡಾ॥ ದೇ. ಜವರೇಗೌಡ, ವಿಶ್ರಾಂತ ಉಪಕುಲಪತಿಗಳು 'ಕಲಾ ನಿಲಯ' ಕಾಳಿದಾಸ ರಸ್ತೆ, ಜಯಲಕ್ಷ್ಮೀಪುರಂ, ಮೈಸೂರು–12
6. ಗೋಪಾಲ ಆಶ್ರಿತ, "ರಮಾನಿಲಯ", ಜವಾಹರ ನಗರ, ರಾಯಚೂರು–584 101.
7. ಡಿ. ಎನ್. ಶ್ರೀನಾಥ್, ಅಸಿಸ್ಟೆಂಟ್ ಮಾಸ್ಟರ್, ಕಸ್ತೂರಬಾ ಗರ್ಲ್ಸ್ ಜೂನಿಯರ್ ಕಾಲೇಜ್, ಪೋಸ್ಟ್ ಬಾಕ್ಸ್ ನಂ. 15. ಶಿವಮೊಗ್ಗ–577201.
8. ಟಿ. ವಿ. ಅನ್ನಪೂರ್ಣಮ್ಮ, ಎಂ. ಐ. ಜಿ–5, "ಶ್ರೀಕರ", ಕುವೆಂಪುನಗರ, ಮೈಸೂರು–570 023.
9. ಎ. ಪಿ. ಚಂದ್ರಶೇಖರ್, "ಇಂದ್ರಪ್ರಸ್ಥ", ಅಗ್ರಿಕಲ್ಚರಿಸ್ಟ್, ಕಳಲವಾಡಿ ಗ್ರಾಮ ಉದ್ಬೂರು ಪೋಸ್ಟ್, ಮೈಸೂರು–570 008.
10. ಕೆ. ಎನ್. ಜಯ, 464, "ನಾಗಸಿಂಹ", ಅಶೋಕ ಪಿಲ್ಲರ್ ರೋಡ್, 2ನೇ ಬ್ಲಾಕ್, ಜಯನಗರ, ಬೆಂಗಳೂರು–560 011.
11. ಮಾಧವರಾವ್ ಮುಧೋಳ್, "ರಾಮಶ್ರೀ" ನಂ. 1167–ಬಿ1, ಹೆಚ್.ಐ.ಜಿ. 2ನೇ ಹಂತ, ಶ್ರೀರಾಮಪುರ, ಮೈಸೂರು
12. ಡಾ॥ ಡಿ. ಆರ್. ಗೋವಿಂದರಾಜು, ನ್ಯೂ ಹೇವನ್, ಕನೆಕ್ಟಿಕಟ್, ಯು.ಎಸ್.ಎ.
13. ಹಾಲತಿ ಸೋಮಶೇಖರ್, "ಮೌನ", ಎಲ್. 19, 2ನೇ ಹಂತ, ಕುವೆಂಪುನಗರ, ಮೈಸೂರು–23.

Reg. No. KRNN 29 / WPP 6

LICENSE No. 21
LICENSED TO POST WITH PAYMENT

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಡೆಮ್ಮಿ ಅಷ್ಟದಳ ೮೦ ಪುಟಗಳು

ಚಂದಾ ವಿವರಗಳು :

ಬಿಡಿ ಪತ್ರಿಕೆ ರೂ. 6-00

ವಾರ್ಷಿಕ ಚಂದಾ ರೂ. 60-00

ಆಜೀವ ಸದಸ್ಯತ್ವದ ಚಂದಾ ವಿವರ :

ಸಂಸ್ಥೆಗೆ ರೂ. 600-00

ವ್ಯಕ್ತಿಗೆ ರೂ. 400-00

ಕಛೇರಿ ವಿಳಾಸ :

ಪ್ರಧಾನ ಸಂಪಾದಕರು
'ಪುಸ್ತಕ ಪ್ರಪಂಚ' ಮಾಸಪತ್ರಿಕೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. 5/1, ವಿನೋಬ ರಸ್ತೆ, ಮಾನಸಗಂಗೋತ್ರಿ ಕ್ಯಾಂಪಸ್
ಮೈಸೂರು-570006

ದೂರವಾಣಿ : 520435

Edited & Printed by H. V. Sreenivasachar (I/c Editor), Printed at Karnataka State Adult Education Council Press and Published by Karnataka State Adult Education Council, 5/1, Vinoba Road Gangothri Campus, Mysore-570 006.